
# ಕಲ್ಯಾಣ ಕಿರಣ

ಜುಲೈ 1991



# ಕಲ್ಯಾಣ ಕಿರಣ

ಮಾಸ ಪತ್ರಿಕೆ, ಜುಲೈ-ಆಗಸ್ಟ್ ೧೯೯೧, ಬಿಡಿ ಸಂಚಿಕೆ ೩ ರೂ.

ಸಂಪುಟ : 20 ಸಂಚಿಕೆ : 3-4 ಬಸವ ಶಕೆ : 886

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಲೇಖನಗಳು ಕಿ ರ ಣ ಗ ನ್ನ ಡಿ


| ಲೇಖನಗಳು | ಲೇಖಕರು | ಪು.ಸಂಖ್ಯೆ |
|---|---|---|
| ೧. ಸುಡಿ ನೈವೇದ್ಯ | | ೧ |
| ೨. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಅಭಿನಂದನಾ ಕಾರ್ಯಕ್ರಮಗಳ ವಿವರ | | ೨ |
| ೩. ಜೂನ್-ಜುಲೈ ತಿಂಗಳಲ್ಲಿ ವಿವಿಧ ಯೋಜನೆಗಳಿಗೆ ನೆರವು ನೀಡಿದ ದಾಸೋಹಿಗಳ ಯಾದಿ | | ೭ |
| ೪. 'ವಚನ-ನಿರ್ವಚನ' ಕೃತಿಯ ವಿಮರ್ಶೆ | ಮಾತಾಜಿ | ೯ |
| ೫. ಬಸವ ಧರ್ಮ ಪೀಠದ ಧ್ಯೇಯೋದ್ದೇಶಗಳು ಮತ್ತು ಪರಿಚಯ | ಮಾತಾಜಿ | ೧೭ |
| ೬. ವಿಶ್ವಧರ್ಮ ಪ್ರವಚನ ಭಾಗ-೭, ಕಂತು-೬ ಅಧ್ಯಾಯ-೨೦, ಕಾಯಕ-ದಾಸೋಹ | ಮಾತಾಜಿ | ೩೪ |


**ಮುಖ ಪುಟ :** ಮಹಾಶಿವಶರಣೆ ನೀಲಾಂಬಿಕಾ ತಾಯಿ

**ಹೊದ್ದಿಕೆಯ 4ನೇ ಪುಟ :** 'ಕ್ರಾಂತಿಯೋಗಿ ಬಸವಣ್ಣ' ಚಲನಚಿತ್ರದಲ್ಲಿ ಅಕ್ಕ ಮಹಾದೇವಿ ಪಾತ್ರಧಾರಿ ನಟಿ ಭಾರತಿ

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ ಮಾಸಪತ್ರಿಕೆ** ದೂರವಾಣಿ : 325335
ಬಸವಮಂಟಪ, 2035, 2ನೇ ಬ್ಲಾಕು, 20ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು-10

ಶ್ರೀ ಡಾ॥ ಪಿ. ವಿ. ನಾರಾಯಣರ 'ವಚನ-ನಿರ್ವಚನ' ಕೃತಿ ಕುರಿತು ಬರೆದ ವಿಮರ್ಶೆಯನ್ನು ಪೂರ್ತಿಯಾಗಿ ಮುದ್ರಿಸುವ ವಿಚಾರವಿತ್ತು. ಆದರೆ ಪುಟ ಸಂಖ್ಯೆ ಬಹಳ ಜಾಸ್ತಿಯಾದ್ದರಿಂದ 80 ಪುಟಕ್ಕೆ ನಿಲ್ಲಿಸಲಾಗಿದೆ. ಸೆಪ್ಟಂಬರ್ ಸಂಚಿಕೆಯಲ್ಲಿ ಮುಂದುವರಿದ ಭಾಗ ಬರುವುದು.

**—ಸೋದರಿ ಕಸ್ತೂರಿ**

# ಕಲ್ಯಾಣ ಕಿರಣ

ಸಂಪುಟ : 20 ಸಂಚಿಕೆ : 3-4 ಜುಲೈ-ಆಗಸ್ಟ್, 1991 ಬಸವ ಶಕೆ : 886

ನೀಲಮ್ಮನ ಚರಣಕೆ

## ನುಡಿ ನೈವೇದ್ಯ

ಪರಮ ದಾಸೋಹವನು ನೆರೆಮಾಡಿ ಜಂಗಮದ
ಪರಮ ಪ್ರಸಾದವನು ಸವಿದು ಸುಖಿದಿ.
ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ ॥ ೭೧ ॥
ಹೆತ್ತವ್ವೆ ನೀಲಮ್ಮ ಮುತ್ತವ್ವೆ ಮಹಾದೇವಿ.
ಎತ್ತಿ ಸಲಹಿದಳಕ್ಕ ನಾಗಲೆಯು ತಾಯಿ.
ಇತ್ತ ಬಾರೆಂದು ತಾಂಬೂಲ ಪ್ರಸಾದವನಿತ್ತ
ಮುಕ್ತಾಯಕ್ಕಗೆ ಶರಣು ಯೋಗಿನಾಥ ॥ ೮೬ ॥
ಎಮ್ಮಪ್ಪ ಬಸವಣ್ಣ ಎಮ್ಮವ್ವ ನೀಲಮ್ಮ
ಎಮ್ಮಯ್ಯ ಪ್ರಭುರಾಯ ಚನ್ನಬಸವ
ಇನ್ನುಳಿದ ಶರಣರ ಚರಣಕ್ಕೆ ಶರಣೆಂದು.
ಧನ್ಯನಾದೆನು ಗುರುವೆ ಯೋಗಿನಾಥ ॥ ೯೪ ॥

—ಶ್ರೀ ಸಿದ್ಧರಾಮೇಶ್ವರರು, ಮಿಶ್ರಸ್ತೋತ್ರತ್ರಿವಿಧಿ

ಭೃಕುಟಿಯ ಹಿಡಿದು ನಿಟಿಲನಯನನ ಬೆರೆದಳು ಅಕ್ಕಮಹಾದೇವಿ.
ಶಿಖಾಚಕ್ರವಿಡಿದು ಶಿವನ ಬೆರೆದಳು ಅಕ್ಕನಾಗಾಯಿ.
ಪಶ್ಚಿಮ ಚಕ್ರವಿಡಿದು ಪರಮನಾದಳು
ಕೂಡಲ ಸಂಗನ ಮರುಳು ಮಗಳು ನೀಲಲೋಚನೆ, ಚನ್ನಬಸವಣ್ಣಾ.

—ಶ್ರೀ ಬಸವಣ್ಣನವರು, ಬ. ಷ. ಹೆ. ವ. ೧೩೫೭.

### ಆತ್ಮಕಥೆ

ಅತೀತವಡಗಿ, ನಿರಾಲಂಬದ ಮನದ ಮೂರ್ತಿಯಂ ತಿಳಿದು,
ಮನೋವ್ಯಾಧಿಯಂ ಪರಿಹರಿಸಿಕೊಂಡು,
ಭಾವದ ಸೂತಕವಳಿದು ಬ್ರಹ್ಮದ ನೆಮ್ಮುಗೆಯ ತಿಳಿದು,
ಮನ ವಿಶ್ರಾಂತಿಯ ನೆಯ್ದಿ ವಿಚಾರದನುಭವವನರಿದು,
ವಿವೇಕದಿಂದಾನು ವಿಶೇಷ ಸುಖವ ಕಂಡೆನಯ್ಯಾ,
ಸಂಗಯ್ಯ ಬಸವನಿಂದಲಿ !

—ನೀಲಮ್ಮನ ವಚನಗಳು ೭೯

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

### ಧರ್ಮಕ್ರಾಂತಿಯ ಧೀರಯೋಗಿ, ಪ್ರವಚನ ಪಿತಾಮಹ

# ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ

## ಅಭಿನಂದನ ಕಾರ್ಯಕ್ರಮ.

ಚಲಿಸುವ ಜ್ಞಾನ ದೇಗುಲವಾಗಿ ಅಸಂಖ್ಯಾತ ಚೇತನಗಳಿಗೆ ಅರಿವಿನ ಬೆಳಕನ್ನು ಕೊಟ್ಟು, ಹರಿವ ಜ್ಞಾನಗಂಗೆಯಾಗಿ ಅಪರಿಮಿತ ಕ್ಷೇತ್ರದಲ್ಲಿ ಸಂಚರಿಸಿ ಪಾರಮಾರ್ಥಿಕ ನಂದನವನ್ನು ನಿರ್ಮಿಸಿದ ದಿವ್ಯ ಚೇತನ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು. ತಮ್ಮದೇ ಆದ ವಾಗ್ಮಿತ್ವದಿಂದ ಎಲ್ಲರನ್ನು ಎಚ್ಚರಿಸುತ್ತ ಧೀಮಂತ ವ್ಯಕ್ತಿತ್ವದಿಂದ ಆಕರ್ಷಿಸುತ್ತ ಅವರಲ್ಲಿ ಧರ್ಮವನ್ನು ಕುರಿತು ಶ್ರದ್ಧೆ, ಆಸಕ್ತಿ, ಅಭೀಪ್ಸೆ ಹುಟ್ಟಿಸುವ ಪ್ರತಿಭಾವಂತ ಪ್ರವಚನಕಾರರು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು. ವಿಶ್ವಗುರು ಬಸವಣ್ಣನವರು ಜನಿಸಿದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೋಕಿನ ಮನಗೂಳಿಯಲ್ಲಿ ಗಣೇಶ ಚೌತಿಯ 15-9-1931 ರಂದು ಜನಿಸಿ, ಬಿ. ಎ. ಆನರ್ಸ್ ಪದವೀಧರರಾಗಿ, 25-4-1955 ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ ಒಂದು ದಿನವೂ ಬಿಡದೆ ಜ್ಞಾನದಾಸೋಹ ಮಾಡುತ್ತಿರುವ ಪಾವನ ಚೇತನ ಪೂಜ್ಯ ಸ್ವಾಮೀಜಿಯವರು. " ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರನುದಯ ನೈದಿಲೆಗೆ ಜೀವಾಳವಾದಂತೆ " ಪೂಜ್ಯ ಸ್ವಾಮೀಜಿಯವರ ಬರವು ಮತ್ತು ಬದುಕು ಬಸವ ತತ್ತ್ವಕ್ಕೆ ಜೀವಾಳವಾಗಿದೆ. ಬಸವ ಯುಗಕ್ಕೆ ನಾಂದಿ ಹಾಡಿದ ಚೇತನಶಕ್ತಿ ಪೂಜ್ಯರು ಎಂದರೆ ಉತ್ಪ್ರೇಕ್ಷೆಯಾಗದು.

ತರಗತಿಯಲ್ಲಿ ಪಾಠವನ್ನು ಮಾಡುವ ಶಿಕ್ಷಕರನ್ನು ಬಿಟ್ಟರೆ, ಬಹುಶಃ ಒಂದು ದಿನವೂ ಎಡಬಿಡದೆ ಜ್ಞಾನದಾಸೋಹವನ್ನು ಮಾಡಿರುವುದರಲ್ಲಿ ಪೂಜ್ಯ ಸ್ವಾಮೀಜಿಯವರ ಹೆಸರು ಗಿನ್ನೀಸ್ ದಾಖಲೆಗೂ ಸೇರಬಹುದೇನೊ ! ಅದೂ ಜ್ಞಾನದಾಸೋಹವೆಂದರೆ ಹತ್ತಾರು ಜನರ ಮುಂದೆ ಮಾಡುವ ಉಪನ್ಯಾಸವಲ್ಲ. ಸಹಸ್ರ ಸಹಸ್ರಜನತೆಯ ಮುಂದೆ ನಡೆಯುವ ಅಪೂರ್ವ ಪ್ರವಚನ. ಆ ಪ್ರವಚನವೂ ಏನೇನೂ ಪರಿಣಾಮ, ಪರಿವರ್ತನೆ ಮಾಡದ ಒಂದು ಯಾಂತ್ರಿಕ ಬೋಧೆಯಲ್ಲ ; ಹೃನ್ಮನಗಳನ್ನು ಅರಳಿಸುವ, ಬುದ್ಧಿಯನ್ನು ವಿಕಸಿಸುವ ಅಪೂರ್ವ ಉಪದೇಶ.

ಪರಮ ಪೂಜ್ಯ ಸ್ವಾಮೀಜಿಯವರು ಸುಯಿಧಾನ ಸುಗ್ರಂಥ ಮಾಲೆ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ, ಈ ವರೆಗೂ 80 ಕ್ಕೂ ಮಿಕ್ಕಿ ಅತ್ಯುತ್ತಮ ಗ್ರಂಥಗಳನ್ನು ಹಲವಾರು ಬಾರಿ ಪುನರ್ಮುದ್ರಣಗೊಳ್ಳುವಂತೆ, ಪ್ರಕಟಿಸಿದ್ದಾರೆ. ಪ್ರಕಟಿಸುವುದು ಮುಖ್ಯವಲ್ಲ ಕರ್ನಾಟಕ ರಾಜ್ಯಾದ್ಯಂತ ಮತ್ತು ಗಡಿ ನಾಡುಗಳಲ್ಲಿ ಆ ಗ್ರಂಥಗಳು ಜನತೆಗೆ ಮುಟ್ಟುವಂತಹ ಪ್ರಸಾರ ಯೋಜನೆ ಹಾಕಿದ್ದಾರೆ. ಹೀಗಾಗಿ ಈ ಸಂಸ್ಥೆಯ ಜ್ಞಾನ ಪ್ರಕಾಶ ವ್ಯಾಪಕವಾಗಿ ಹಬ್ಬಿ ಹಸರಿಸಿದೆ.



# ಸಂಸ್ಥೆಯ ನಿರ್ಮಾಪಕರು

### ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ :

ಕಿತ್ತೂರು (ಉತ್ತರ) ಕರ್ನಾಟಕದ ಶೈಕ್ಷಣಿಕ-ಸಾಂಸ್ಕೃತಿಕ ರಾಜಧಾನಿ ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಮಹಿಳಾ ಜಗದ್ಗುರು ಪೀಠವನ್ನು ಸಂಸ್ಥಾಪಿಸಿ, ತಮ್ಮ ಕರಕಮಲ ಸಂಜಾತರಾದ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಜಗದ್ಗುರುವನ್ನಾಗಿ ಪೀಠಕ್ಕೆ ಏರಿಸಿ ವಿಶ್ವಗುರು ಬಸವಣ್ಣನವರು ಕೊಟ್ಟ ಸ್ತ್ರೀ ಸಮಾನತೆಯನ್ನು ಆಚರಣೆಗೆ ತಂದ ಧೀಮಂತರು ಪೂಜ್ಯ ಸ್ವಾಮೀಜಿಯವರು.

### ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ ಮತ್ತು ಬಸವ ಗಂಗೋತ್ರಿ :

ಕರ್ನಾಟಕದ ರಾಜಧಾನಿ, ಕಲ್ಯಾಣ ನಗರ ಎಂದು ಖ್ಯಾತಿವೆತ್ತ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿರ್ಷ ಎಂಬ ವಿಶ್ವಸ್ಥ ಸಂಸ್ಥೆ ಸ್ಥಾಪಿಸಿ, ಅದರ ವತಿಯಿಂದ ಬಸವ ಮಂಟಪ ಎಂಬ ಪ್ರಾರ್ಥನಾ ಮಂದಿರವನ್ನು, ಬಸವ ಗಂಗೋತ್ರಿ ಎಂಬ ಮಠವನ್ನು ನಿರ್ಮಿಸಿದ್ದಾರೆ. ಬಸವ ಗಂಗೋತ್ರಿಯು ಶ್ರೀ ಬಸವೇಶ್ವರ ಕಲ್ಯಾಣ ಮಂದಿರ ಮತ್ತು ಶ್ರೀ ರುದ್ರಾನಂದ ಕಲ್ಯಾಣ ಮಂದಿರ ಎಂಬ ಎರಡು ಕಲ್ಯಾಣ ಮಂದಿರ ಹೊಂದಿ ಜನರಿಗೆ ಮದುವೆಯ ಮಂಗಲ ಕಾರ್ಯಮಾಡಲು ಅನುಕೂಲ ಒದಗಿಸುತ್ತಿದೆ. ಸರ್ವಜ್ಞ ಮುದ್ರಣಾಲಯ ಮತ್ತು ಕಲ್ಯಾಣ ಕಿರಣ ಮಾಸಪತ್ರಿಕೆ ಕಾರ್ಯಾಲಯಗಳು ಬಸವ ಗಂಗೋತ್ರಿಯ ಆವರಣದಲ್ಲಿವೆ.

### ಬಸವ ಧರ್ಮ ಪೀಠ :

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕಿನಲ್ಲಿದ್ದು, ಬಹಳ ಮಹತ್ವದ ಕ್ಷೇತ್ರವಾಗಿದ್ದರೂ ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾಗಿದ್ದಿತು. ಇದನ್ನು ಗಮನಿಸಿದ ಸ್ವಾಮೀಜಿ 1987 ರಲ್ಲಿ ಬಸವ ಧರ್ಮ ಪೀಠ ಎಂಬ ವಿಶ್ವಸ್ಥ ಸಂಸ್ಥೆಯೊಂದನ್ನು ಸ್ಥಾಪಿಸಿ, ಜಮೀನನ್ನು ಖರೀದಿಸಿ ಭವ್ಯವಾದ ಯೋಜನೆಯನ್ನು ಹಾಕಿಕೊಂಡು, ಸರ್ವಾಂಗೀಣವಾಗಿ ಕ್ಷೇತ್ರವನ್ನು ಬೆಳೆಸುತ್ತಿದ್ದಾರೆ. ಬಂದ ಪ್ರವಾಸಿಕರು ಉಳಿದುಕೊಳ್ಳಲು ಅಕ್ಕ ನಾಗಲಾಂಬಿಕಾ ಅತಿಥಿಗೃಹ ನಿರ್ಮಿಸುತ್ತಿದ್ದಾರೆ; ನಿತ್ಯ ದಾಸೋಹ ಯೋಜನೆಯ ಮೂಲಕ ಪ್ರಸಾದದ ವ್ಯವಸ್ಥೆ ಮಾಡುತ್ತಿದ್ದಾರೆ. ಬಸವ ತತ್ತ್ವಾನುಯಾಯಿಗಳು ವರ್ಷಕ್ಕೊಮ್ಮೆ ಒಂದು ಜಾಗದಲ್ಲಿ ಸೇರಬೇಕು ಎಂದು ಸಂಘಟಿಸಿರುವ "ಶರಣ ಮೇಳ", ಬಸವ ತತ್ತ್ವಾನುಯಾಯಿಗಳಿಗೆ ಒಂದು ಕೇಂದ್ರ ಸ್ಥಾನ ಬೇಕು ಎಂದು "ಕೂಡಲ ಸಂಗಮ" ವನ್ನು ಧರ್ಮಕ್ಷೇತ್ರವನ್ನಾಗಿ ರೂಪಿಸಿದ ರೂವಾರಿ ಪೂಜ್ಯ ಸ್ವಾಮೀಜಿ.

ಇವಿಷ್ಟೂ ಪೂಜ್ಯ ಶ್ರೀಗಳ "ಸ್ಥಾವರ" ಕೊಡುಗೆಯಾದರೆ, ನಾಡಿನ ಉದ್ದಗಲಕ್ಕೂ ಸಂಚರಿಸಿ ಮಾಡಿರುವ, ಮಾಡುತ್ತಿರುವ ಧರ್ಮ ಪ್ರಚಾರ, ಪ್ರಚಾರಕರನ್ನು

ತರಬೇತಿಗೊಳಿಸಬೇಕೆಂಬ ಪ್ರಯತ್ನ ಪೂಜ್ಯರ "ಜಂಗಮ" ಕೊಡುಗೆ, ಕೀರ್ತಿ ವಾರ್ತೆಯನ್ನು ಬಯಸದೆ, ವೈಭವ-ಆಡಂಬರಗಳಿಂದ ದೂರವಿದ್ದು, ಸದ್ದಿಲ್ಲದೆ ಸಂಚರಿಸಿ ಗೌಜುಗದ್ದಲವಿಲ್ಲದೆ ಪ್ರವಚನ ಮಾಡಿ, ಜನಮಾನಸದಲ್ಲಿ ಅಪೂರ್ವ ಪರಿವರ್ತನೆ ತರುವ, ಚಲಿಸುವ ಜ್ಞಾನ ದೇವಾಲಯ ಪೂಜ್ಯ ಸ್ವಾಮೀಜಿಯವರು.

ಪೂಜ್ಯ ಸ್ವಾಮೀಜಿ, ಭಾವುಕ ಭಕ್ತರು, ವೈಚಾರಿಕ ತತ್ತ್ವಜ್ಞಾನಿಗಳು, ಪ್ರೌಢ ಚಿಂತನಶೀಲರು ಎಲ್ಲರನ್ನೂ ಆಕರ್ಷಿಸುವ ಧೀಮಂತ ಪ್ರತಿಭೆಯುಳ್ಳವರು. ಅವರು ಸಂಚರಿಸುವುದು ಬಲು ವ್ಯಾಪಕವಾಗಿ, ಹೊಂದಿರುವುದು ಬಹುದೊಡ್ಡ ಬಳಗವನ್ನು. ಪೂಜ್ಯರ ಪ್ರವಚನಗಳಿಂದ ಪ್ರೇರಿತರಾದವರು, ದೀಕ್ಷಾನುಗ್ರಹವನ್ನು ತೆಗೆದು ಕೊಂಡು ಭಕ್ತರಾದವರು, ಆಶ್ರಯ ಅನುಗ್ರಹ ಪಡೆದು ಶಿಷ್ಯರಾದವರು— ಈ ಎಲ್ಲರೂ ಕೂಡಿ ಇದೀಗ ಪೂಜ್ಯ ಸ್ವಾಮೀಜಿಯವರಿಗೆ ತಮ್ಮ ಗೌರವವನ್ನು, ಸೂಕ್ತವಾಗಿ ಹೇಳಬೇಕೆಂದರೆ ಕೃತಜ್ಞತೆಯನ್ನು ಅರ್ಪಿಸಲು ಸಿದ್ಧರಾಗಿದ್ದಾರೆ.

ಸಂದರ್ಭವೆಂದರೆ, ಪೂಜ್ಯ ಗುರೂಜಿಯವರು ಅರವತ್ತು ವರ್ಷಗಳನ್ನು ಪೂರೈಸುತ್ತಿರುವುದು. 1991 ರ ಗಣೇಶ ಚೌತಿಗೆ ಪೂಜ್ಯ ಸ್ವಾಮೀಜಿಯವರು ಅರವತ್ತು ವರ್ಷಗಳನ್ನು ಪೂರೈಸಿ, ಅರವತ್ತೊಂದಕ್ಕೆ ಪಾದಾರ್ಪಣ ಮಾಡುತ್ತಲಿದ್ದಾರೆ. ಈ ಸಂದರ್ಭದಲ್ಲಿ ಪೂಜ್ಯರಿಗೆ ಯಾವ ರೀತಿ ಕೃತಜ್ಞತೆಯನ್ನು ಸಮರ್ಪಿಸಬೇಕು ಎಂದು ಅವರ ಶಿಷ್ಯ ಬಳಗ ಕಾರ್ಯಕ್ರಮವನ್ನು ರೂಪಿಸುತ್ತಲಿದೆ.

1. ಗಣೇಶ ಚೌತಿಯು ದಿನಾಂಕ 11-9-1991 ರಂದು ಒದಗಿ ಬಂದಿದ್ದು ಅಂದು ಒಂದು ಸಮಾರಂಭವನ್ನು ಏರ್ಪಡಿಸುವುದು, ಬೆಳಿಗ್ಗೆ ಪೂಜ್ಯರ ಆರೋಗ್ಯ ಭಾಗ್ಯಕ್ಕಾಗಿ ಶಿಷ್ಯ ಸಮುದಾಯದಿಂದ ವಿಶೇಷ ಪೂಜೆ, ಮಂತ್ರಜಪ. ನಂತರ ಪೂಜ್ಯರ ಪಾದಪೂಜೆ, ಸದ್ಭಕ್ತರಿಂದ ನುಡಿಕಾಣಿಕೆ ಸಮರ್ಪಣೆ, ಸಂಜೆ ಸಾರ್ವಜನಿಕ ಸಮಾರಂಭ.

2. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ 27-10-1991 ರಂದು ರಾಜ್ಯಮಟ್ಟದ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿ, ಪೂಜ್ಯರಿಗೆ ಗುರು ಕಾಣಿಕೆಯಾಗಿ ನಿಧಿಯೊಂದನ್ನು ಸಮರ್ಪಿಸುವುದೇ ಅಲ್ಲದೆ, ಪೂಜ್ಯರ ಹೆಸರಿನಲ್ಲಿ ಧರ್ಮ ಪ್ರಚಾರಕ ನಿಧಿಯೊಂದನ್ನು ಸ್ಥಾಪಿಸುವುದು.

3. ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಪೀಠದ ಆಶ್ರಯದಲ್ಲಿ 12-1-1992 ರಂದು ( ಶರಣ ಮೇಳಕ್ಕೆ ಒಂದು ದಿನ ಮೊದಲು ) ಅಂತರ ರಾಜ್ಯ ಮಟ್ಟದ ಅಭಿನಂದನ ಸಮಾರಂಭ ಏರ್ಪಡಿಸುವುದು.

4. ಪೂಜ್ಯರ ಬದುಕು, ಬರಹ, ಹೋರಾಟ, ಸಾಧನೆ, ಸಿದ್ಧಿ, ಕುರಿತು ವಿವಿಧ ಲೇಖನಗಳುಳ್ಳ ಒಂದು ಸ್ಮರಣಸಂಪುಟವನ್ನು ಸಿದ್ಧಪಡಿಸುವುದು.

5. ಪೂಜ್ಯ ಸ್ವಾಮೀಜಿಯವರ ಪ್ರವಚನಗಳ ಕೆಲವು ವೀಡಿಯೋ ಕೆಸೆಟ್ಟು ಸಿದ್ಧಪಡಿಸುವುದು.

6. ಪ್ರವಚನಗಳ ಆಡಿಯೋ ಕೆಸೆಟ್ಟು ಸಿದ್ಧಪಡಿಸುವುದು.



## ತ್ರೈವಾರ್ಷಿಕ ಯೋಜನೆ

ಪೂಜ್ಯರಾದ ಸದ್ಗುರುಗಳ 61 ನೆಯ ಹುಟ್ಟು ಹಬ್ಬದಿಂದ 63ನೆಯ ಹುಟ್ಟುಹಬ್ಬದವರೆಗಿನ ಅವಧಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

1. ವಿಶ್ವಗುರು ಬಸವಣ್ಣನವರನ್ನು ಕುರಿತಾದ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಪ್ರಬಂಧ ಸ್ಪರ್ಧೆ, ಅಂತರ ಕಾಲೇಜು, ಅಂತರ ವಿಶ್ವವಿದ್ಯಾಲಯದ ಮಟ್ಟದ ಉಪನ್ಯಾಸ ಸ್ಪರ್ಧೆ ಏರ್ಪಡಿಸುವುದು.

2. ಪೂಜ್ಯ ಸ್ವಾಮೀಜಿಯವರ ಬಾಲ್ಯ, ವಿದ್ಯಾಭ್ಯಾಸ, ಬದುಕು, ಸಂಚಾರ, ಸಾಧನೆ ಕುರಿತಾದ ಸಾಕ್ಷ್ಯಚಿತ್ರವೊಂದನ್ನು ತಯಾರಿಸುವುದು.

3. ರಾಷ್ಟ್ರೀಯ ಬಸವ ದಳಗಳ ಶಾಖೆಯನ್ನು ತೆರೆದು, ಪ್ರಾರ್ಥನಾ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡುವುದು, ಇತ್ಯಾದಿ.

## ಸಹಕರಿಸಲು ಕೋರಿಕೆ

**ಶರಣ ಬಂಧುಗಳೇ,**

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜೀ ಅಭಿನಂದನಾ ಸಮಿತಿಯು ಹಮ್ಮಿಕೊಂಡಿರುವ ಈ ಯೋಜನೆ-ಕಾರ್ಯಕ್ರಮಗಳನ್ನು ಪೂರೈಸಲು ಉದಾರವಾದ ಧನ ಸಹಾಯವು ಬೇಕಲ್ಲವೆ ? ಆದ್ದರಿಂದ ತಾವು ಉದಾರ ಮನಸ್ಸಿನಿಂದ ಮುಂದೆ ಬರಬೇಕಾಗಿ ಕೋರುತ್ತೇವೆ.

1. ಮಹಾಪೋಷಕರು 5000 ರೂ. ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ. ,,
3. ಹಿತೈಷಿಗಳು 500 ರೂ. ,,
4. ಅಭಿಮಾನಿಗಳು 250 ರೂ. ,,

ಇನ್ನು ಅವರವರ ಶಕ್ತ್ಯಾನುಸಾರ ಕಾಣಿಕೆಗಳನ್ನು 101 ರಿಂದ 250 ರೂಗಳ ವರೆಗೆ ಕೊಡಬಹುದು.

**ವಿವಿಧ ಯೋಜನೆಗಳಿಗೆ :**

1. ಯೂ ಮ್ಯಾಟಿಕ್ ವೀಡಿಯೋ ಕೆಸೆಟ್ಟು ಮಾಡುತ್ತಿರುವುದರಿಂದ ಉಪನ್ಯಾಸದ ಒಂದು ಕೆಸೆಟ್ಟಿಗೆ, ಅಂದರೆ ಮಾತೃಸುರಳಿ ಮಾಡಲು 6000/- ರೂಪಾಯಿ ವೆಚ್ಚ ಬರುತ್ತಿದೆ. ಈ ಉದ್ದೇಶಕ್ಕೆಂದು ಒಬ್ಬರೇ ಪೂರ್ತಿ ಹಣ ಕೊಟ್ಟರೆ, ಕೆಸೆಟ್ಟು ಆರಂಭದಲ್ಲಿಯೇ ದಾನಿಗಳ ಹೆಸರನ್ನು ತೋರಿಸಲಾಗುವುದು. 3000/- ರೂ ಕೊಟ್ಟರೆ, ಇಬ್ಬರ ಹೆಸರನ್ನು ಪ್ರಾರಂಭದಲ್ಲಿ, ನಡುವಿನಲ್ಲಿ ತೋರಿಸಲಾಗುವುದು. ವೀಡಿಯೋ ಕೆಸೆಟ್ಟು ತಯಾರಿಕೆಗೆ ಎಂದು ಕನಿಷ್ಠ 1000/-ರೂದಂತೆ ಯಾರು ಕೊಡುವರೋ, ಅವರ ಹೆಸರುಗಳನ್ನು ಸಮಯದ ಆಧಾರದ ಮೇಲೆ ವರ್ಗೀಕರಿಸಿ ತೋರಿಸಲಾಗುವುದು.

2. ಪ್ರವಚನಗಳ ವಿಶೇಷ ವಿಷಯಗಳನ್ನು ಆಯ್ದುಕೊಂಡು, ಒಂದೊಂದು ಗಂಟೆಯ (C-60) ಎರಡು ಕೆಸೆಟ್ಟುಗಳನ್ನು ಒಂದೊಂದು ವಿಷಯ ಕುರಿತಂತೆ ಸಿದ್ಧಪಡಿಸಲಾಗುವುದು. ಒಂದು ಗಂಟೆ ಆಡಿಯೋ ಕೆಸೆಟ್ಟಿನ ಮಾತೃಸುರಳಿ (Mother Tape) ಸಿದ್ಧಪಡಿಸಲು 1500/- ರೂ ಬೇಕಾಗುತ್ತದೆ. ಆದ್ದರಿಂದ ದಾನಿಗಳು 1500/- ರೂದಂತೆ ಕೊಟ್ಟರೆ ಕೆಸೆಟ್ಟಿನ ಹೊದ್ದಿಕೆಯ ಮೇಲೆ ದಾನಿಗಳ ಹೆಸರನ್ನು ಮುದ್ರಿಸಲಾಗುವುದು. ಮತ್ತು ಕೆಸೆಟ್ಟಿನ ಉಚಿತ ಪ್ರತಿ ನೀಡಲಾಗುವುದು. ಒಂದು ಉಪನ್ಯಾಸವು 2 ಗಂಟೆ ಕಾಲ ಧ್ವನಿ ಮುದ್ರಣಗೊಳ್ಳುವುದರಿಂದ ದಾನಿಗಳು ಪೂರ್ತಿ ವಿಷಯಕ್ಕೆ ತಮ್ಮ ಹೆಸರಿರಲಿ ಎನ್ನುವುದಾದರೆ 3000/- ರೂಗಳನ್ನು, ಒಂದೇ ಕೆಸೆಟ್ಟಿಗಾದರೆ 1500/- ರೂಗಳನ್ನು ಕೊಡಬಹುದು.

3. ಧರ್ಮ ಪ್ರಚಾರಕರ ನಿಧಿಗೆ 1001/– ರೂ ಕೊಡಬಹುದು.

4. ಪೂಜ್ಯ ಶ್ರೀಗಳ 61 ನೆಯ ಹುಟ್ಟು ಹಬ್ಬದ ನಿಮಿತ್ತ, ಸಂಸ್ಥೆಗೆ ಉಪಯೋಗವಾಗುವ ವಸ್ತುಗಳ ರೂಪದಲ್ಲಿಯೂ, ತಮ್ಮ ತಮ್ಮ ಊರುಗಳ, ಸಂಘ ಸಂಸ್ಥೆಗಳ ನೆನಪಿರುವಂತೆ ಕೊಡುಗೆಗಳನ್ನು ಕೊಡಲು ಅವಕಾಶ ಉಂಟು.

### 80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಸೌಲಭ್ಯ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸಹ ಈ ಗೌರವಾರ್ಪಣೆಯ ಕಾರ್ಯದಲ್ಲಿ ಭಾಗಿಯಾಗುತ್ತಲಿದ್ದು, ಇದು 500/-ರೂ ಮೀರಿದ ಮೇಲಿನ ಯಾವುದೇ ದೇಣಿಗೆಯನ್ನು ಕೊಡುವವರಿಗೆ 80 ಜಿ ರಿಯಾಯಿತಿ ಸೌಲಭ್ಯವನ್ನು ಒದಗಿಸುತ್ತದೆ. ಈ ಸೌಲಭ್ಯ ಪಡೆದುಕೊಳ್ಳಬೇಕು ಎನ್ನುವವರು, Basava Mahamane Charitable Trust, Bangalore ಹೆಸರಿಗೆ ಬ್ಯಾಂಕ್ ಡ್ರಾಫ್ಟ್/ಚೆಕ್ಕು/ನಗದು ಕಳಿಸಬಹುದು. ಆ ರಸೀತಿಯನ್ನು ದಾನಿಗಳಿಗೆ ಕೊಡಲಾಗುವುದು.

**ವಿ. ಸೂ:** ಕವರಿನ ಮೇಲೆ ಪೂರ್ಣವಿಳಾಸವನ್ನು ಅಚ್ಚುಕಟ್ಟಾಗಿ ಸ್ಪಷ್ಟವಾಗಿ ಬರೆಯಿರಿ.

ಪ್ರಸ್ತುತ ಕಾರ್ಯಕ್ರಮದಲ್ಲಿ ತಾವೆಲ್ಲರೂ ಭಾಗವಹಿಸಿ, ಹೃತ್ಪೂರ್ವಕ ಸಹಕಾರ ನೀಡುವಿರಾಗಿ ನಂಬಿದ್ದೇವೆ.

| ಪೂಜ್ಯ ದಯಾನಂದ ಸ್ವಾಮೀಜಿ | ಶರಣ. ಪುಟ್ಟರುದ್ರಪ್ಪ | ಶರಣ. ನಿಜಗುಣಾನಂದಸ್ವಾಮಿ |
|---|---|---|
| ಪ್ರಧಾನ ಸಂಚಾಲಕರು | ಪ್ರಧಾನ ಕಾರ್ಯದರ್ಶಿ | ಸಹ- ಕಾರ್ಯದರ್ಶಿ |

ವ್ಯವಹಾರಕ್ಕೆ ವಿಳಾಸ :
ದೂರವಾಣಿ : 325335
ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ
ಅಭಿನಂದನಾ ಸಮಿತಿ
ಬಸವ ಮಂಟಪ, 2035, 2 ನೇ ಬ್ಲಾಕು,
20 ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು-560010



## ಜೂನ್-ಜುಲೈ ತಿಂಗಳಲ್ಲಿ ವಿವಿಧ ಯೋಜನೆಗಳಿಗೆ ನೆರವು ನೀಡಿದ ದಾಸೋಹಿಗಳು.

### ಬಸವ ಧರ್ಮ ಪೀಠದ ಕಟ್ಟಡನಿಧಿಗೆ.

**ಶರಣರುಗಳಾದ :**

| | | |
|---|---|---|
| 1. | ಜಿ. ಚನ್ನಯ್ಯ, ಚಿತ್ರದುರ್ಗ. | 30001-00. |
| 2. | ಎಂ. ಸುಜಯಾದೇವಿ, ತಿಪಟೂರು. | 5001-00. |
| 3. | ಎ. ಎನ್. ಶಿವರುದ್ರಯ್ಯ, .. | 5001-00. |
| 4. | ಮದನಲಾಲ್ ರಾಜಕುಮಾರ್ .. | 5001-00. |
| 5. | ಜಿ. ರುದ್ರಯ್ಯ c/o ಜಿ. ಕೆ. ಶಿವಸ್ವಾಮಿ ,, | 5001-00. |
| 6. | ಎಸ್. ಪಿ. ಗಂಗಾಧರಪ್ಪ, ,, | 5001-00. |

### ಕೂಡಲ ಸಂಗಮದಲ್ಲಿ ನಡೆಯುವ ನಿತ್ಯದಾಸೋಹ ಯೋಜನೆಗೆ 1111-00 ರೂ ಕೊಟ್ಟವರು.

**ಶರಣರುಗಳಾದ :**

| ಕ್ರಮಸಂಖ್ಯೆ. | ಹೆಸರು ಮತ್ತು ಊರು |
|---|---|
| 748. | ಬಿ. ಎಸ್. ಬಳ್ಳೂರರವರು, ತಿಪಟೂರು |
| 749. | ಶಕುಂತಲಾ ಸಿದ್ಧರಾಮಶೆಟ್ಟಿ, ಬೀದರ್ |
| 750. | ವಿ. ರಾಮರೆಡ್ಡಿ, ಬಳ್ಳಾರಿ |
| 751. | ಹೆಚ್. ಚನ್ನಮಲ್ಲಪ್ಪ, ಶಿವಮೊಗ್ಗ |
| 752. | ಶಾಂತಾದೇವಿ ಜಗದೀಶ್ವರ ಗುರುಸ್ಥಳಮಠ, ಧಾರವಾಡ |
| 753. | ಕಮಲಮ್ಮ ಬಸವರಾಜ ಮುರಗೋಡ, ಅಣ್ಣಿಗೇರಿ. |
| 754. | ಗೌರಮ್ಮ ಈರಪ್ಪ ಬಳಿಗೇರ, ಅಣ್ಣೀಗೇರಿ. |
| 755. | ಚಂಬವ್ವ ಚನ್ನಪ್ಪ ಬಳ್ಳೊಳ್ಳಿ, ಅಣ್ಣೀಗೇರಿ. |
| 756. | ಚಂದ್ರಪ್ಪಗೌಡ ಸಿಕ್ಕೆ ದೇಸಾಯಿ, ಅಣ್ಣೀಗೇರಿ. |
| 757. | ಹೆಚ್. ಟಿ. ಸಿದ್ದಲಿಂಗಶೆಟ್ಟಿ, ತಿಪಟೂರು. |
| 758. | ಕೆ. ಎಸ್. ಮಲ್ಲಿಕಾರ್ಜುನ, ತಿಪಟೂರು. |
| 759. | ಓಬೇಗೌಡ, ತಿಪಟೂರು. |
| 760. | ಬಿ. ಬಸವಣ್ಣ, ತಿಪಟೂರು. |
| 761. | ಕರಿಸಿದ್ದಯ್ಯ, ತಿಪಟೂರು. |
| 762. | ಟಿ. ಸಿ. ಉಮೇಶಕುಮಾರ, ತಿಪಟೂರು, |
| 763. | ಜಿ. ಎನ್. ಪ್ರಕಾಶಕುಮಾರ, ತಿಪಟೂರು. |

**ಶರಣರುಗಳಾದ :**

764. ಎಸ್. ಆರ್. ವೆಂಕಟಾಚಲಪತಿ ಶೆಟ್ಟಿ, ತಿಪಟೂರು.
765. ನಾಗಮ್ಮ ಹೆಚ್. ಆರ್. ರಂಗಸ್ವಾಮಪ್ಪ ಮತ್ತು ಮಕ್ಕಳು, ಹಳೇಪಾಳ್ಯ.
766. ಜಿ. ಎಂ. ಸುರೇಶಬಾಬು, ಹಳೇಪಾಳ್ಯ.
767. ರಾಧಾ ರುಕ್ಮಿಣಿ ಬಿ. ಸುಬ್ಬರಾಯಪ್ಪ, ತಿಪಟೂರು;
768. ಮದನಲಾಲ್ ರಾಜಕುಮಾರ್, ತಿಪಟೂರು.
769. ಬಿ. ಹೆಚ್. ಚಿಕ್ಕಣ್ಣಯ್ಯ, ತಿಪಟೂರು.
770. ಜಿ. ಗಂಗಪ್ಪ, ತಿಪಟೂರು.
771. ಕೆ. ಬಸಪ್ಪ (ಕಂಚಾಗಟ್ಟಿ) ತಿಪಟೂರು.
772. ಬಿ. ಟಿ. ಲಿಂಗದೇವರು S/o ತಿಮ್ಮಣ್ಣ, ತಿಪಟೂರು.
773. ಹೆಚ್.,ಎಂ. ಮರಿಸಿದ್ಧಪ್ಪ, ತಿಪಟೂರು.
774. ಟಿ. ಜಿ. ಗುರುಮೂರ್ತಿ, ತಿಪಟೂರು.
775. ವಿಜಯಲಕ್ಷ್ಮಿ ಮಂಜುನಾಥ, ತಿಪಟೂರು.
776. ಬೋರಯ್ಯ, ಶೆಟ್ಟೀಕೆರೆ.
777. ಮೋಹನ್‌ರಾಜು, ಹಳೇಪಾಳ್ಯ.
778. ಸಿ. ಎಸ್. ಶಂಕರಲಿಂಗಪ್ಪ, ಶೆಟ್ಟಿಕೆರೆ.
779. ಬೆಟ್ಟೇಗೌಡರು ಮತ್ತು ಮಕ್ಕಳು, ತಿಪಟೂರು.
780. ಶ್ರೀ ಅಕ್ಕಮಹಾದೇವಿ ಸಮಾಜ, ತಿಪಟೂರು.
781. ಎಂ. ಜಿ. ನಂಜುಂಡಯ್ಯ, ತಿಪಟೂರು.
782. ಚನ್ನಬಸಪ್ಪ, ತಿಪಟೂರು.
783. ಟಿ. ಗಿರಿಜಮ್ಮ ಜಯದೇವಪ್ಪ, ತಿಪಟೂರು.
784. ಸರ್ವಮಂಗಳಮ್ಮ ಎಂ. ಎಸ್. ಬಸವಣ್ಣ, ತಿಪಟೂರು.
785. ಸಿ. ಎಸ್. ಕಾಂತಲಕ್ಷ್ಮಿ ಶ್ರೀನಿವಾಸ ಮೂರ್ತಿ, ತಿಪಟೂರು.
786. ಎಸ್. ಆರ್. ನಾಗರತ್ನಮ್ಮ, ತಿಪಟೂರು.
787. ಆರ್. ಎಸ್. ಬಸವರಾಜು, ತಿಪಟೂರು.
788. ದೊಡ್ಡಣ್ಣಗೌಡ ಅಯ್ಯನ ಗೌಡ, ಗೊರಗೊಂಡನಹಳ್ಳಿ, ತಿಪಟೂರು.
789. ಗೌರಮ್ಮ ಚಿದಾನಂದ ಮೂರ್ತಿ, ತಿಪಟೂರು.
790. ಸಿದ್ಧಗಂಗಮ್ಮ ಬಿ. ಬಿ. ಕರಿಬಸಪ್ಪ, ತಿಪಟೂರು.
791. ಲಿಂಗಪ್ಪ ಹಾಲುಬಾಣ, ತಿಪಟೂರು.
792. ಚಿಕ್ಕತಿಮ್ಮಗೌಡ ಪೋಲೀಸ್ ಪಾಟೀಲ, ಗೊರಗೊಂಡನಹಳ್ಳಿ, ತಿಪಟೂರು.

(73 ನೆ ಪುಟಕ್ಕೆ ಮುಂದುವರಿದಿದೆ)



ಓಂ ಶ್ರೀ ಗುರುಬಸವಲಿಂಗಾಯ ನಮಃ

# ' ವಚನ - ನಿರ್ವಚನ ' ಕೃತಿಯ ವಿಮರ್ಶೆ

ಬಸವ ಪುರಸ್ಕಾರವನ್ನು ಬಸವ ಸಮಿತಿಯವರು ಡಾ॥ ಪಿ. ವಿ. ನಾರಾಯಣರ ಕೃತಿ "ವಚನ-ನಿರ್ವಚನ" ಎಂಬ ಶರಣ ಸಾಹಿತ್ಯ ಕುರಿತಾದ ಬರಹಗಳ ಸಂಗ್ರಹಕ್ಕೆ ಕೊಟ್ಟಿದ್ದಾರೆ ಎಂಬ ಪತ್ರಿಕಾ ಪ್ರಕಟಣೆ ನೋಡಿದೆವು. ಆಗ ಏನೂ ಅನ್ನಿಸಲಿಲ್ಲ. ಕನ್ನಡ ಪ್ರಭಾ, ಶುಕ್ರವಾರ ದಿ. 5- 7- 1991ರ ಜನನಾಡಿಯಲ್ಲಿ ಪ್ರಕಟವಾದ ಶ್ರೀ ಬಿ. ವಿ. ಮಲ್ಲಿಕಾರ್ಜುನಯ್ಯ ಅವರ ಪತ್ರ ಬರಹ ನೋಡಿ ಹಲವಾರು ದೂರವಾಣಿ ಕರೆಗಳು ಬರಲು ತೊಡಗಿದವು. ಪುಸ್ತಕವನ್ನು ನಾನು ಓದಿರಲಿಲ್ಲ. ಆದ್ದರಿಂದ ನಮ್ಮ ಅಭಿಪ್ರಾಯ ಕೊಡುವುದು ಸರಿಯಲ್ಲ ಎಂದು, ಬಿ, ವಿ. ಮಲ್ಲಿಕಾರ್ಜುನಯ್ಯನವರ ಪತ್ರದ ಆಧಾರದ ಮೇಲೆ ಬಸವ ಪುರಸ್ಕಾರವನ್ನು ವಚನ-ನಿರ್ವಚನ ಪುಸ್ತಕಕ್ಕೆ ಕೊಡುವುದನ್ನು ತಡೆಹಿಡಿಯಿರಿ ಎಂದು ಸನ್ಮಾನ್ಯ ಶ್ರೀ ಬಿ. ಡಿ. ಜತ್ತಿಯವರಿಗೆ ದೂರವಾಣಿಯಲ್ಲಿ ಹೇಳಿ (5-7-91) ಪುನಃ 9-7-91 ರಂದು ಲಿಖಿತ ರೂಪದಲ್ಲಿಯೇ ತಿಳಿಸಿದೆ.

ಶ್ರೀ ಮಲ್ಲಿಕಾರ್ಜುನಯ್ಯನವರ ಪತ್ರ - ಬರಹದಲ್ಲಿ ಮೊದಮೊದಲು ಶರಣರು, ಶರಣ_ಧರ್ಮಕ್ಕೆ ಕಲಂಕತರುವ ವಸ್ತುನಿಷ್ಠ ವಿಚಾರಗಳಿದ್ದರೂ ಬರುಬರುತ್ತ ಬಸವ ಸಮಿತಿಯ ಕುರಿತು ಅಸಹನೆ ವ್ಯಕ್ತವಾಗಿದೆ. ನಮಗೆ ಉತ್ತರಾರ್ಧ ಅಪ್ರಸ್ತುತ, ಪೂರ್ವಾರ್ಧ ಕರ್ತವ್ಯ ಪರಿಪಾಲನೆಗೆ ಸಂಬಂಧಿಸಿದ್ದು. ಆದ್ದರಿಂದ ಸ್ವತಃ ಓದದೆ ನಿರ್ಣಯ ಕೊಡುವುದು ನಮ್ಮ ಪ್ರವೃತ್ತಿಗೆ ಸೂಕ್ತ ಎನಿಸಲಿಲ್ಲ. ಜೊತೆಗೆ ಡಾ॥ ಪಿ. ವಿ. ನಾರಾಯಣ ಕುರಿತು ವಿಶೇಷ ಬಾಂಧವ್ಯವೂ ಇಲ್ಲ, ವಿರಸವೂ ಇಲ್ಲ. ಬಸವ ಸಮಿತಿಯು ವಿಶ್ವಗುರು ಬಸವಣ್ಣನವರ ತತ್ತ್ವ ಪ್ರಚಾರಕ್ಕಾಗಿಯೇ ಇರುವಂಥದಾದ ಕಾರಣ, ಆದರ ಅಭಿಮಾನ ಇರುವುದು ಸ್ವಾಭಾವಿಕ. ಈ ಎಲ್ಲ ದೃಷ್ಟಿಯಿಂದ ತಾತ್ಕಾಲಿಕ ನಿಲುಗಡೆ ಮಾಡುವುದು ಒಳ್ಳೆಯದು ಎಂದು ಸೂಚಿಸಿದೆವು.

ದಿ. 9-7-91 ರಂದು ಪುಸ್ತಕ ತರಿಸಿ, ಮಧ್ಯಾಹ್ನ 3-30 ರಿಂದ ರಾತ್ರಿ 12-30 ರವರೆಗೆ ಕೂಲಂಕಷವಾಗಿ ಓದಿ, ಅಭಿಪ್ರಾಯ ಬರೆಯುತ್ತಿದ್ದೇನೆ.

' ವಚನ ನಿರ್ವಚನ ' ಹೊತ್ತಿಗೆಯು 12 ಬರಹಗಳ ಒಂದು ಸಂಗ್ರಹ. 1990 ರಲ್ಲಿ, ಮೈಸೂರಿನ ಪುಸ್ತಕಾಲಯ ಎಂಬ ಪ್ರಕಾಶನ ಸಂಸ್ಥೆಯಿಂದ ಪ್ರಕಾಶಗೊಂಡಿರುವ 186 + 4 ಪುಟಗಳ ಪುಸ್ತಕ. ಡಾ॥ ಪಿ. ವಿ. ನಾರಾಯಣ ಕರ್ತೃ.

ಇಡೀ ಪುಸ್ತಕದಲ್ಲಿ ' ಬಸವ ' ಎನ್ನುವ ಪದ ಏಕ ವಚನದಲ್ಲಿ ಬಳಕೆಯಾದುದನ್ನು ಕಾಣಬಹುದು. ಬಸವಣ್ಣ ಎನ್ನುವ ಪದವು ಬಂದರೂ ಅದು ಅವನು – ಇವನು ಎಂಬ ಏಕ ವಚನದಲ್ಲಿಯೇ ಸಂಬೋಧಿತವಾಗಿರುವುದು. ಪುಟ 163 ರಲ್ಲಿ 'ನೀಲಲೋಚನೆಯ ಎಲ್ಲ ವಚನಗಳಲ್ಲಿಯೂ **ಬಸವನ ಬಗೆಗಿನ** ' ಎಂಬ ಪ್ರಯೋಗ, ಪುನಃ ಅದರಲ್ಲೇ

'ಬಸವನ ಬಗ್ಗೆ' ನೀಲಮ್ಮ ಈ ಪರಿಯ ಹಂಬಲ ಇರಿಸಿಕೊಳ್ಳಲು ಕಾರಣವೇನಿರಬೇಕು ?' ಎಂದು ಬರೆಯುವಾಗ ಏಕವಚನದ ಪ್ರಯೋಗವಿದೆ. ವಿಶ್ವಗುರು ಬಸವಣ್ಣನವರು ಕೇವಲ ಒಬ್ಬ ಸಾಮಾನ್ಯ ಸಾಹಿತಿ, ಸಮಾಜ ಸುಧಾರಕ ಎಂದಷ್ಟೆ ತಿಳಿದವರಿಗೆ ಹೀಗೆ ಓದುವಾಗ ಏನೂ ಅನ್ನಿಸುವುದಿಲ್ಲ. ಅವರನ್ನು ಪೂಜ್ಯ ಗುರುವೆಂದು ಭಾವಿಸಿದವರಿಗೆ ಏಕವಚನದ ಸಂಬೋಧನೆ ಓದುವಾಗ ಎದೆಯಲ್ಲಿ ನೋವಿನ ಚಳಕು ಹಾಯ್ದು, ಮೊಸರನ್ನದ ತುತ್ತಿನಲ್ಲಿ ಕಲ್ಲುಸಿಕ್ಕಂತೆ ಆಗುತ್ತದೆ. ಬಹುಪಾಲು ಸಾಹಿತಿಗಳು ಹೀಗೇ ಬಳಸುವುದರಿಂದ ಈ ಬಗೆಯ ಪ್ರಯೋಗಕ್ಕಾಗಿ ಶ್ರೀ ನಾರಾಯಣರನ್ನು ದೂಷಿಸಿದರೆ ನಮ್ಮ ಸಣ್ಣತನವನ್ನು ತೋರಿಸಿದಂತಾಗುತ್ತದೆ. ಶಸ್ತ್ರಚಿಕಿತ್ಸೆ ಮಾಡುವ ವೈದ್ಯನು ಒಂದೊಂದು ಬಾರಿ ಚಾಕು, ಕತ್ತರಿ ಪ್ರಯೋಗಿಸುವಾಗಲೂ ಬಹಳ ಎಚ್ಚರಿಕೆಯಿಂದಿರುವನು. ಏಕೆಂದರೆ ರೋಗಿಯನ್ನು ಕೊಯ್ದು, ಎಸೆಯುವುದು, ಅವನ ಗುರಿಯಲ್ಲ. ಪುನಃ ಜೀವವನ್ನು ಬರಿಸಬೇಕಾಗಿರುತ್ತದೆ. ಸತ್ತ ಪ್ರಾಣಿಯ ಚರ್ಮ ತೆಗೆಯುವ ವ್ಯಕ್ತಿ ಅಷ್ಟು ಎಚ್ಚರಿಕೆ ವಹಿಸಬೇಕಾಗುವುದಿಲ್ಲ. ಹೇಗೆ ಬೇಕಾದರೂ ಅವನು ಆಯುಧಗಳನ್ನು ಪ್ರಯೋಗಿಸಬಹುದು.

## ತಾತ್ತ್ವಿಕ ದೋಷಗಳು

ಪುಸ್ತಕದಲ್ಲಿ ತಾತ್ತ್ವಿಕ ದೋಷಗಳು ಸಾಕಷ್ಟು. ದೈವ ಮತ್ತು ದೇವರು ಈ ಎರಡರ ಮಧ್ಯೆ ಇರುವ ಅಗಾಧವಾದ ವ್ಯತ್ಯಾಸವನ್ನು ಶ್ರೀ .ಪಿ. ವಿ. ನಾರಾಯಣರು ಅರಿತುಕೊಂಡಂತೆಯೇ ಕಾಣದು. ಬಸವಾದಿ ಪ್ರಮಥರು ಬರೆದಿರುವ ಸಾಹಿತ್ಯದಲ್ಲಿ ಸೃಷ್ಟಿಕರ್ತನನ್ನು ಮಾತ್ರ ದೇವರೆಂದೂ, ಅವನನ್ನು ಬಿಟ್ಟು ಉಳಿದೆಲ್ಲವನ್ನು ದೈವಂಗಳೆಂದು ಬಳಸಿದ್ದಾರೆ. God ಮತ್ತು deity ಇವುಗಳ ವ್ಯತ್ಯಾಸವನ್ನರಿಯದಿದ್ದರೆ ನಾವು ವಚನ ಸಾಹಿತ್ಯದ ಮಹಾಮನೆಯ ಹೊಸ್ತಿಲನ್ನೂ ತುಳಿದಿಲ್ಲ ಎಂದು ಅರಿತುಕೊಳ್ಳಬೇಕು.

1. "ರಾಜನನ್ನು ತಮ್ಮ ಅಧಿದೈವವಾದ ಶಿವನೊಂದಿಗೆ ಹೋಲಿಸಿ ನೋಡಿ ಅವನನ್ನು ಕೀಳು ಎಂದು ವಚನಕಾರರು ತೀರ್ಮಾನಿಸಿದರೇ ಹೊರತು, ಇತರ ಮನುಷ್ಯರ ಜೊತೆ ಅವನನ್ನು ನಿಲ್ಲಿಸಿ ಹೋಲಿಸುವ ಗೋಜಿಗೆ ಹೋಗಲಿಲ್ಲ". (ಪುಟ.98) ಲಿಂಗವಂತ ಧರ್ಮಾನುಯಾಯಿ ಶರಣರ ಅಧಿದೈವ'ಶಿವ' ಎಂದು ಇಲ್ಲಿ ಒಮ್ಮೆ ಉಲ್ಲೇಖಿಸಿದ್ದಾರೆ.
2. "ಗಂಡನ ದೈವವನ್ನೇ ತನ್ನದಾಗಿ ಮಾಡಿಕೊಳ್ಳದೆ, ತನ್ನ ಕಲ್ಪನೆಯ ದೈವವನ್ನೇ ಬೇರೆಯಾಗಿ ಆರಾಧಿಸುವುದು ಆ ಕಾಲದ ಸೋಪಜ್ಞ ಸ್ತ್ರೀಯರಿಗೆ ಸಾಧ್ಯವಾಯಿತು." (ಪುಟ 106)
3. ಶಿವಶರಣರ ಇಷ್ಟಲಿಂಗ ಕಲ್ಪನೆಯು ವಿಶಿಷ್ಟವಾದುದು. ಯಾರೋ ಕಟ್ಟಿಸಿದ ದೇವಸ್ಥಾನದ ಲಿಂಗಪೂಜೆಯನ್ನು ಅವರು ವಿರೋಧಿಸಿದರು. ಏಕೆಂದರೆ ದೈವದ



ಕಲ್ಪನೆ ವ್ಯಕ್ತಿ ವಿಶಿಷ್ಟವಾದುದು. ತನ್ನ ತಿಳುವಳಿಕೆ ಅನುಭವಗಳ ಹಿನ್ನೆಲೆಯಲ್ಲಿ ಪ್ರತಿವ್ಯಕ್ತಿಯೂ ತನ್ನದೇ ಆದ ದೈವವನ್ನೂ ರೂಪಿಸಿಕೊಳ್ಳಬೇಕು. ದೈವದ ಕಲ್ಪನೆ, ಭಕ್ತಿ ಪೂಜೆಗಳೆಲ್ಲ ವೈಯಕ್ತಿಕ ಜರೂರಿನಿಂದ ಆದವುಗಳು. ಎಲ್ಲರಿಗೂ ಸಾಮಾನ್ಯವಾದ, ಬದುಕಿಗೆ ಮಾರಕವಾಗದ ರೀತಿಯಲ್ಲಿ, ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟು ಸಂಖ್ಯೆಯ ದೈವಗಳಿರಬಹುದು, ಎಂದರೆ ಬದುಕುವ ಮನುಷ್ಯನ ಉದಾತ್ತ ಭಾವನೆಗಳೇ ದೈವ; (ಪುಟ. 108)

ಈ ನಾಲ್ಕೂ (ಮತ್ತು ಇಂತಹ ಮತ್ತಷ್ಟು) ಉಲ್ಲೇಖಗಳನ್ನು ನೋಡಿದರೆ, ಶ್ರೀ ಪಿ. ವಿ. ನಾರಾಯಣರು ವಚನ ವಾಙ್ಮಯ ಸಾಗರದ ಆಳಕ್ಕೆ ಇಳಿಯುವುದಿರಲಿ, ಇನ್ನೂ ಅದರ ದಂಡೆಯ ಮೇಲೂ ಕಾಲಿಟ್ಟಿಲ್ಲ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ಸಕಾರಣವಿಲ್ಲದೆ ನಾನು ಹೇಳುತ್ತಿಲ್ಲ.

'ದೈವ' ಪದದ ಸೈದ್ಧಾಂತಿಕ ಪರಿಕಲ್ಪನೆ ಇಲ್ಲದೆ ಮನಸ್ಸಿಗೆ ಬಂದಂತೆ ಬಳಸಿದ್ದಾರೆ. ಮೂರನೆಯ ಉಲ್ಲೇಖವಂತೂ, ಪಶುವೈದ್ಯ ಚಿಕಿತ್ಸಕರೊಬ್ಬರು ಮಾನವರಿಗೆ ಶಸ್ತ್ರಚಿಕಿತ್ಸೆ ಮಾಡಲು ಹೊರಟ ಪ್ರಯತ್ನದಂತಿದೆ. ವಚನಗಳಲ್ಲಿ ಉಕ್ತವಾಗಿರುವ ಧರ್ಮದಲ್ಲಿ 'ದೈವ' ಪದಕ್ಕೆ ಕೆಳಗಿನ ಅರ್ಥವಿದೆ.

1. ಜಗತ್ತಿನ ಕರ್ತನನ್ನು ಹೊರತುಪಡಿಸಿ, ಉಳಿದ ಉಪಾಸ್ಯ ವಸ್ತುಗಳೆಲ್ಲ ದೈವಂಗಳು.

ಅ) **ಕರ್ತಾರನ** ಪೂಜಿಸಿ ಕುಚ್ಚಿತ್ತ ದೈವಕ್ಕೆರಗುವರು
ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ (ಬ.ಷ.ವ 614)

ಆ) **ದೇವನೊಬ್ಬ** ನಾಮ ಹಲವು...............
ಹಲವು ದೈವದ ಎಂಜಲ ತಿಂಬುವವರನೇನೆಂಬೆ. (ಬ.ಷ.ವ 613)

ಇ) **ಲಿಂಗ** ಪ್ರಸಾದವನುಂಡು ಅನ್ಯದೈವಂಗಳ
ಕೊಂಡಾಡುವ ಆ ಭಂಡರಿಗೆ (ಬ.ಷ.ವ 615)

ಈ) ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ
ನಂಬ ಬಲ್ಲ ಭಕ್ತಂಗೆ **ದೇವನೊಬ್ಬ** ಕಾಣಿರೋ
ಬೇಡ ! ಬೇಡ! ಅನ್ಯದೈವದ ಸಂಗ ಹೊಲ್ಲ (ಬ.ಷ.ವ 616)

ಇಂಥ ವಚನೋಕ್ತಿಗಳನ್ನು ಸಾವಿರಾರು ಸಂಖ್ಯೆಯಲ್ಲಿ ಕೊಡಬಹುದು. ಕರ್ತಾರ, ದೇವ, ಲಿಂಗ, ಪರಶಿವ, ಇವು ಅಮೂಲ್ಯನು, ಅಪ್ರಮಾಣನು, ಜಗತ್ಕರ್ತನೂ ಆದ ಪರಮಾತ್ಮನನ್ನು ಸಂಕೇತಿಸಿದರೆ, ಕರ್ತನನ್ನು ಹೊರತುಪಡಿಸಿ ಪೂಜಿಸುವ, ಕಿಚ್ಚು, ಮಾರಯ್ಯ, ಬೀರಯ್ಯ, ಕೇತಯ್ಯ, ಅಂತರ, ಬೆಂತರ, ಮಾರಿಕವ್ವೆ ಮುಂತಾದುವೆಲ್ಲ ದೈವಂಗಳು. ದೈವಂಗಳ ಪೂಜೆಯನ್ನು ಖಂಡಿಸಿ ದೇವರ ಪೂಜೆಯನ್ನು ಬೋಧಿಸಿದರು ಶರಣರು.

ಅವಾಗಳೂ ಲೋಗರ ಮನೆಯಲ್ಲಿ ಬೇಡಿಕೊಂಡು ಉಣ್ಣುವುವು (ಬ.ಷ.ವ. 553) ಮತ್ತು ಭೀತಿಹುಟ್ಟಿಸಿ ಪೀಡಿಸಿ ತಿನ್ನುವುವು (554) ದೈವಂಗಳಾದರೆ, ಕಾರುಣ್ಯ

ನಿಧಿ, ವರದಾನಿ, ಅಭಯಂಕರ, ಹಾವು-ಕಿಚ್ಚುಗಳನ್ನು ಮಗು ಮುಟ್ಟಿ ಎಲ್ಲಿ ಅಪಾಯಕ್ಕೆ ಒಳಗಾಗುವುದೋ ಎಂದು ವಾತ್ಸಲ್ಯದಿಂದ ಬೆನ್ನುಹತ್ತಿ ಜೋಪಾನ ಮಾಡುವ ತಾಯಿಯಂತೆ, ದೇವರು.

ಬಸವಾದಿ ಪ್ರಮಥರು ಅಂದರೆ ಅಕ್ಕಮಹಾದೇವಿ, ಸಿದ್ಧರಾಮ ಇವರೆಲ್ಲರೂ ಸೇರಿಯೇ, ಆರಂಭದ ಜೀವನದಲ್ಲಿ ಶಿವ ಪೂಜಕರಾಗಿದ್ದರೂ, ಅಂದರೆ ಗಂಗಾಧರ, ಗೌರಿವಲ್ಲಭ, ಕೈಲಾಸವಾಸಿ ಶಿವನ ಪೂಜಕರಾಗಿದ್ದರೂ, ಬಸವಣ್ಣನವರು ಸ್ವಯಂ ಚಿಂತನೆಯಿಂದಲೂ, ಇನ್ನಿತರ ಶರಣರು ಬಸವ ಸಿದ್ಧಾಂತದ ಪ್ರಭಾವಕ್ಕೊಳಗಾಗಿಯೂ ನಿರಾಕಾರ ಕರ್ತನ ಆರಾಧಕರಾದರು. ಅವರು ಆರಾಧಿಸಿದ್ದು, ಬೆರೆಯ ಬಯಸಿದ್ದು ಯೋಗಿಯ ಆಕಾರದ ಶಿವನನ್ನಲ್ಲ, ನಿರಾಕಾರ ನಿರ್ಗುಣನಾದ ಪರಶಿವನನ್ನು(Absolute Reality) ಆದ್ದರಿಂದ ಡಾ|| ಪಿ. ವಿ. ನಾರಾಯಣರು ಪುಟ 98 ರಲ್ಲಿ ಹೇಳಿರುವುದು, 'ವಚನಕಾರರ ಅಧಿದೈವ ಶಿವ' ಎಂಬುದು ಪೂರ್ಣ ತಪ್ಪಿನ ಮಾತು.

"ಅಯ್ಯಾ ನಾಟಕನಲ್ಲ, ಬೂಟಕನಲ್ಲ......... ರುಂಡ ಮಾಲಿಗ, ಪುಲಿ ಚರ್ಮ ಗಜ ಚರ್ಮನಲ್ಲ,............ ಸರ್ಪಧರ ಚಂದ್ರಶೇಖರನಲ್ಲ, ಗಂಗಾಧರ ಗೌರಿಶಂಕರನಲ್ಲ, ಯೋಗಿ ಜೋಗಿಯಲ್ಲ......... ನಿರವಯ ಶೂನ್ಯ ಲಿಂಗ ಮೂರ್ತಿ ಗುಹೇಶ್ವರ ಲಿಂಗವು." (ವ. ಶಾ. ಸಾ 2)

ವಚನವು ಸಾಕಷ್ಟು ದೊಡ್ಡದಿರುವುದರಿಂದ ಪೂರ್ಣ ಪಾಠವನ್ನು ಕೊಟ್ಟಿಲ್ಲ. ನಾರಾಯಣರ ಇದೇ ಉಲ್ಲೇಖದ ಇನ್ನರ್ಥ ಭಾಗವು ಅಷ್ಟೇ ಅಪಾರ್ಥವನ್ನು ಕೊಡುತ್ತದೆ. "ಶರಣರು ಅಧಿದೈವ ಶಿವನಿಗೆ ಹೋಲಿಸಿ ಬಿಜ್ಜಳ ರಾಜನನ್ನು ಕೀಳು ಎಂದು ತೀರ್ಮಾನಿಸಿದರು." ಎಂಬುದು ಆ ಮಾತು. ವರ್ಣಾಶ್ರಮ ಸಮಾಜ ವ್ಯವಸ್ಥೆಯಲ್ಲಿ ಬ್ರಾಹ್ಮಣನ ನಂತರದ ಸ್ಥಾನ ರಾಜನಿಗೆ. ಆತ ವಿಷ್ಣುವಿನ ಅವತಾರ, ಅವನನ್ನು ಪ್ರತ್ಯಕ್ಷ ದೇವತೆ ಎಂದು ಆರಾಧಿಸಬೇಕು. ಈ ನಂಬಿಕೆಯನ್ನು ಪ್ರಗತಿಪರ ಧರ್ಮಗಳು ಒಪ್ಪಿಲ್ಲ. ಕ್ರೈಸ್ತ, ಇಸ್ಲಾಂ, ಲಿಂಗಾಯತ, ಸಿಖ್ ಧರ್ಮಗಳು ಜಗತ್‌ಕರ್ತನನ್ನು ಒಪ್ಪಿರುವುದೇ ಅಲ್ಲದೆ, ಅವನಿಗೆ ಪರಮೋಚ್ಚ ಸ್ಥಾನ ನೀಡಿವೆ. ಆಗ ಅವುಗಳು ಒಂದು ಸಮಸ್ಯೆ ಎದುರಿಸಬೇಕು. ಜಗದೀಶ ಮತ್ತು ಭೂಪಾಲಕ ಇಬ್ಬರ ಸ್ಥಾನವನ್ನು ಗುರುತಿಸುವುದೇ ಅದು, 'ಜಗತ್ಕರ್ತನು ಭೂಮಿಯನ್ನು ಸೃಷ್ಟಿಸದಿದ್ದರೆ ಭೂಪಾಲನು ಅದನ್ನು ಆಳಬಲ್ಲನೆ?' ಎಂದು ದೇವರಿಗೆ ಕೊಡುವ ಸ್ಥಾನವನ್ನು ಮನುಷ್ಯನಾದ ರಾಜನಿಗೆ ಕೊಡಲು ಒಪ್ಪುವುದಿಲ್ಲ. ಬಿಜ್ಜಳನು ಸಂಪ್ರದಾಯ- ವ್ಯವಸ್ಥೆಗಳ ಕಟ್ಟುಪಾಡುಗಳಿಗೆ ಬದ್ಧನಾದವನು, ಶರಣರ ಅಂತರಾತ್ಮ ಅವುಗಳಿಗೆ ವಿರುದ್ಧ. ಆದ್ದರಿಂದ ಅವರು ಅಂತರಾತ್ಮಕ್ಕೆ ಬದ್ಧರಾಗುವರೇ ವಿನಾ, ರಾಜನ ಆಜ್ಞೆಗಲ್ಲ. ಆದರೆ ಬಸವಾದಿ ಪ್ರಮಥರು ಯಾರನ್ನೂ ಕೀಳಾಗಿ ಕಾಣರು. ಯಾಕೆಂದರೆ

ಆನೆ ಅಂಕುಶಕ್ಕೆ ಅಂಜುವುದೇ ಅಯ್ಯಾ
**ಮಾಣದೆ ಸಿಂಹದ** ನಖವೆಂದು ಅಂಜುವುದಲ್ಲದೆ ?



ಆನೀ ಬಿಜ್ಜಳಂಗಂಜುವೆನೇ, ಅಯ್ಯಾ ಕೂಡಲಸಂಗಮದೇವಾ
ನೀನು ಸರ್ವಜೀವ ದಯಾಪಾರಿಯಾದ ಕಾರಣ,
ನಿನಗಂಜುವೆನಲ್ಲದೆ ? (ಬ.ಷ.ವ 736)

ಆನೆಯು ಅಂಕುಶವೆಂಬ ಚಿಕ್ಕದಾದ ಕಟ್ಟಿಗೆಯ ತುಂಡಿಗೆ ಹೆದರುವುದಿಲ್ಲ, ಆದರ ತುದಿಯಲ್ಲಿರುವ ಸಿಂಹದ ಉಗುರಿಗೆ ಹೆದರುತ್ತದೆ. ಅದೇ ರೀತಿ ನಾನು ಬಿಜ್ಜಳನೊಡನೆ ಸೌಜನ್ಯದಿಂದ ನಡೆದುಕೊಳ್ಳುವುದು, ಆತ ರಾಜನೆಂದಲ್ಲ, "ಪರಮಾತ್ಮನು ಎಲ್ಲರಲ್ಲಿಯೂ ಇರುವನು. ಯಾರನ್ನೂ ನೋಯಿಸಬಾರದು, ಅದರಿಂದ ಪರಮಾತ್ಮನಿಗೆ ನೋವಾಗಬಹುದು" ಎಂಬ ತತ್ತ್ವಕ್ಕೆ ಬದ್ಧನಾಗಿ ! ಕೆಲವು ತೀವ್ರವಾದಿ ಶರಣರು ಪರವಾದಿ ಅಂದರೆ ಭಿನ್ನ ವಿಚಾರದ ಬಿಜ್ಜಳನೊಡನೆ ನೇರ ಸಂಘರ್ಷಕ್ಕೆ ಇಳಿಯಲು ಪ್ರಯತ್ನಿಸುವುದರಲ್ಲಿ ಆಸಕ್ತಿ ತೋರಿದಾಗಲೆಲ್ಲ ಗುರು ಬಸವಣ್ಣನವರು ಕಡಿವಾಣ ಹಾಕಿ, ತೀವ್ರವಾದಿಗಳನ್ನು ಒಂದುಕಡೆ ನಿಯಂತ್ರಿಸುವ, ಇನ್ನೊಂದು ಕಡೆ ಬಿಜ್ಜಳನ ಮನಸ್ಸನ್ನು ಒಲಿಸಲು, ಒಡಂಬಡಿಸಲು ಯತ್ನಿಸುತ್ತಿದ್ದರು. ಅವನ ಬಗ್ಗೆ ತಿರಸ್ಕಾರಕ್ಕಿಂತಲೂ ಅಪಾರ ಅನುಕಂಪವನ್ನು ಹೊಂದಿದ್ದರು. ಆತ, ಸಂಪ್ರದಾಯ ಚೌಕಟ್ಟಿನಲ್ಲಿ ಬೆಳೆದು ಬಂದವನು; ಅದನ್ನು ಹೊರತುಪಡಿಸಿ ವಿಚಾರ ಮಾಡಲಾರ ಎಂಬ ಸಹಾನುಭೂತಿ ಇತ್ತು. ಬಸವಣ್ಣನವರು ಶತ್ರುಗಳನ್ನು, ಆಕಳನ್ನು ಕದ್ದವರನ್ನು, ಕೊಲೆಗಡುಕರನ್ನು, ವಂಚಿಸಬಂದವರನ್ನು ಕೀಳಾಗಿ ಕಾಣಲಿಲ್ಲ ; ಅಂದಾಗ ರಾಜನನ್ನು ಕೀಳಾಗಿ ಕಾಣುವರೆ ? ಅವನನ್ನು ರಾಜನೆಂದು ಅತಿಯಾಗಿ ಗೌರವಿಸದೆ ಇದ್ದರೂ, ಮನುಷ್ಯನೆಂದಾದರೂ ಗೌರವಿಸುವವರೆ !

## ಹಲವು ದೈವಂಗಳ ಆರಾಧನೆ

ಪುಟ 106 ಮತ್ತು 108ರಲ್ಲಿ ಬರುವ ಮಾತುಗಳಂತೂ ತೀರಾ ಬಾಲಿಶ. ಶರಣ ಧರ್ಮವು ಏಕದೇವೋಪಾಸನೆ- ಲಿಂಗಾಚಾರ (Consistant Monothism) ಪ್ರತಿಪಾದಿಸುವುದರಲ್ಲಿ ಇಡೀ ಭಾರತದಲ್ಲಿ, ಹಿಂದೂ ಪರಂಪರೆಯ ಧರ್ಮಗಳಲ್ಲಿ ಅಗ್ರ ಸ್ಥಾನದಲ್ಲಿದೆ. ಜೈನ-ಬೌದ್ಧ ನಿರೀಶ್ವರವಾದಿ ಧರ್ಮಗಳು. ವೈದಿಕ ಧರ್ಮವು ಸೇಶ್ವರವಾದಿ ಇದ್ದರೂ ಬಹುದೇವತೋಪಾಸಕವಾದುದು. ಲಿಂಗಾಯತ-ಸಿಖ್ ಧರ್ಮಗಳು ಕಡ್ಡಾಯ ಏಕದೇವೋಪಾಸಕ ಧರ್ಮಗಳು. ಗಂಡನಿಗೊಂದು, ಹೆಂಡತಿಗೊಂದು, ಅರಸನಿಗೊಂದು, ಆಳಿಗೊಂದು , ಹೀಗೆ ಮನಸ್ಸಿಗೆ ಬಂದಂತೆ ಚಿತ್ರವಿಚಿತ್ರಾಕಾರದ ವಸ್ತುಗಳನ್ನು ದೇವರೆಂದು ಪೂಜಿಸುವ ನೀರು, ಬೆಂಕಿ, ಮಣ್ಣು ಮುಂತಾದ ಪಂಚಭೂತಗಳನ್ನು ಪೂಜಿಸುವ ಮೂಢ ವಿಚಾರಗಳನ್ನು ತೊಡೆದು ಏಕದೇವೋಪಾಸನೆಯನ್ನು ಗುರು ಬಸವಣ್ಣನವರು ಪ್ರತಿಪಾದಿಸಿದರು. ಲಿಂಗಾಚಾರ ಎಂದರೆ ಪಿ. ವಿ. ನಾರಾಯಣರು ಹೇಳಿದಂತೆ ತಮ್ಮಂಗದ ಮೇಲಿನ ಇಷ್ಟಲಿಂಗ ನಿಷ್ಠೆ ಒಂದೇ ಅಲ್ಲ. "ಜಗತ್ತಿಗೆ ಇರುವವನು ಒಬ್ಬನೇ ಕರ್ತ, ಅವನನ್ನು ಒಂದೇ ಆಕಾರ(ವಿಶ್ವದಾಕಾರ)ದಲ್ಲಿ ಪೂಜಿಸಬೇಕು. ಮತ್ತು ಒಬ್ಬನೇ ಇರುವ ಜಗತ್ಕರ್ತನನ್ನು ದೃಢ ನಿಷ್ಠೆಯಿಂದ ನಂಬಿ ಆರಾಧಿಸಬೇಕು.

"ದೈವದ ಕಲ್ಪನೆ ವ್ಯಕ್ತಿ ವಿಶಿಷ್ಟ, ಭಕ್ತಿ-ಪೂಜೆಗಳು ವೈಯಕ್ತಿಕ ಜರೂರಿಂದ ಆದವು." ಎಂಬ **ನಾರಾಯಣರ ಮಾತು**, ಇವರು ತತ್ತ್ವಜ್ಞಾನದ ಗ್ರಂಥಗಳನ್ನು ಓದಿಯೇ ಇಲ್ಲವೇನೋ ಎಂಬ ಕಲ್ಪನೆ ನೀಡುತ್ತದೆ. ಫಿಲಾಸಫಿ ಆಫ್ ರಿಲಿಜಿಯನ್, ಫಿಲಾಸಫಿ ಅಂಡ್ ಮಿಸ್ಟಿಸಿಸಮ್, ಹಿಸ್ಟರಿ ಆಫ್ ರಿಲಿಜಿಯನ್, ಫಂಡಮೆಂಟಲ್ ಕ್ವೆಶ್ಚನ್ಸ್ ಆಫ್ ಫಿಲಾಸಫಿ ಮುಂತಾದ ಪುಸ್ತಕಗಳನ್ನು ಓದಿದ್ದರೆ, ವಚನ ಶಾಸ್ತ್ರವನ್ನು ತಾತ್ತ್ವಿಕವಾಗಿ ತಿಳಿಯಲು ಬರುತ್ತದೆ. ಏಕೆಂದರೆ ವಚನ ಸಾಹಿತ್ಯ, ಕೇವಲ ಸಾಹಿತ್ಯವಲ್ಲ. ಶಾಸ್ತ್ರವು ಅಹುದು; ದರ್ಶನವೂ ಅಹುದು. "ತನಗಿಂತ ಹಿರಿದಾದ ಒಂದು ಶಕ್ತಿಗೆ ಶರಣಾಗಿ, ತನ್ನ ಮನಸ್ಸು-ಕಷ್ಟಸುಖ ತೋಡಿಕೊಳ್ಳುವ ಪ್ರವೃತ್ತಿ-ಮನುಷ್ಯನ ಹುಟ್ಟು ಗುಣ(Instinct). ಇದಕ್ಕೆ ಒಂದು ಅಭಿವ್ಯಕ್ತಿಮಾಧ್ಯಮ ವಾಗುವುದು ಧರ್ಮ."

"ಎಷ್ಟು ವ್ಯಕ್ತಿಗಳಿರುವರೋ ಅಷ್ಟು ಸಂಖ್ಯೆಯ ದೈವಗಳಿರಬಹುದು, ಬದುಕುವ ಮನುಷ್ಯನ ಉದಾತ್ತ ಭಾವನೆಗಳೇ ದೈವ." ಈ ವಾಕ್ಯಗಳನ್ನು ಹಿಂಜಿದರೆ ಪಿ. ವಿ. ನಾರಾಯಣರು 'ದೇವರ ಕಲ್ಪನೆ' (Concept of God) ಬಗ್ಗೆ ಏನೇನೂ ತಿಳಿದಿಲ್ಲ ಎನಿಸಿ ಸೋಜಿಗವಾಗುತ್ತದೆ. ಭಾವನೆಗಳೇ ದೈವ, ಸತ್ಯವೇ ದೇವರು, ಸೌಂದರ್ಯವೇ ದೇವರು, ಪ್ರೇಮವೇ ದೇವರು ಮುಂತಾದುವು ಕಾವ್ಯಮಯ ಹೇಳಿಕೆಗಳೇ ಹೊರತು ಸೈದ್ಧಾಂತಿಕ ಸೂತ್ರಗಳಲ್ಲ. ದೇವರು ಎನ್ನುವುದು ತನ್ನದೇ ಆದ ಅಸ್ತಿತ್ವ ಹೊಂದಿರುವ ಸತ್-ಚಿತ್-ಆನಂದ-ನಿತ್ಯಪರಿಪೂರ್ಣವಾದ ಜಗತ್ತಿನ ಕ್ರಿಯಾಶಕ್ತಿ, ಆಧಾರ ಶಕ್ತಿ. ಇದರ ವರ್ಣನೆ ಉಪನಿಷತ್, ಖುರಾನ್. ಬೈಬಲ್, ವಚನ ಶಾಸ್ತ್ರ, ಗುರುಗ್ರಂಥ, ಎಲ್ಲದರಲ್ಲೂ ಇದೆ. ವ್ಯಕ್ತಿಗೊಂದು, ಮನೆಗೊಂದು, ಹಾದಿಗೊಂದು, ಬೀದಿಗೊಂದು ಇರುವ ದೈವಂಗಳು ಮಾನವ ಕಲ್ಪಿತ. ಇವಕ್ಕೆ ತತ್ತ್ವಜ್ಞಾನ-ದರ್ಶನಶಾಸ್ತ್ರಗಳಲ್ಲಿ ಮನ್ನಣೆಯಿಲ್ಲ. ಮತ್ತು ಬಸವಾದಿ ಪ್ರಮಥರು ಕೊಂಡಾಡುವುದು ದೇವರನ್ನು, ದೈವಂಗಳನ್ನಲ್ಲ.

## ಮತ – ಧರ್ಮ

ವಚನ ಸಾಹಿತ್ಯವು ಕೇವಲ ಸಾಹಿತ್ಯ ದೃಷ್ಟಿಯಿಂದ ಅಧ್ಯಯನ ಮಾಡುವಂಥದಲ್ಲ. ಅದು ತಾತ್ತ್ವಿಕ ದರ್ಶನ ಶಾಸ್ತ್ರ ಎಂದು ಹೇಳಿದ್ದೇನೆ. ಆದರೆ ಲೆಕ್ಕವಿಲ್ಲದಷ್ಟು ಬಾರಿ ಡಾ॥ ಪಿ.ವಿ. ನಾರಾಯಣರು 'ಮತ', 'ವೀರಶೈವ ಮತ' ಎಂದು ಬಳಿಸಿರುವರೇ ವಿನಾ ಧರ್ಮವೆಂದು ಒಂದು ಕಡೆಯೂ ಬಳಸಿಲ್ಲ. ಜಾತಿ, ಮತ, ಪಂಥ, ಧರ್ಮ ಈ ನಾಲ್ಕೂ ಮಹತ್ವದ ಪದಗಳು. ಜಾತಿ– ಹುಟ್ಟಿನಿಂದಲೇ ಒಂದು ವ್ಯಕ್ತಿಯನ್ನು ಒಂದು ವಿಶಿಷ್ಟ ಗುಂಪಿಗೆ ವರ್ಗೀಕರಿಸುವುದು. 'ಮತ' ಎಂಬುದೂ ಮೂಲತಃ 'Opinion' ಎಂಬ ಸೈದ್ಧಾಂತಿಕ ಪದದ ಮೇಲೆ ರೂಪುಗೊಂಡಿದ್ದರೂ, ಈಗ ಒಂದೊಂದು ಪಂಗಡದಲ್ಲಿ ಬೇರುಬಿಟ್ಟಿದೆ. ಅದ್ವೈತ ಮತ, ದ್ವೈತ ಮತ ಮುಂತಾದವು ವಿಶಿಷ್ಟ ಸೈದ್ಧಾಂತಿಕ ದೃಷ್ಟಿಕೋನಗಳು ; ಪಂಥಗಳು. ಒಬ್ಬ ವ್ಯಕ್ತಿ ಅಥವಾ ಒಂದು ವಿಚಾರ ಧಾರೆಯ ಸುತ್ತಲೂ ಬೆಳೆದ ಗುಂಪುಗಳು. ವಾರಕರಿ ಪಂಥ, ಅರವಿಂದ ಪಂಥ,



ರಾಮಕೃಷ್ಣ ಪಂಥ ಹೀಗೆ. ಧರ್ಮವು ಒಂದು ವ್ಯಾಪಕವಾದ ವ್ಯಾಖ್ಯಾನ ಉಳ್ಳುದು. ಅದು ಸ್ವಾವಲಂಬಿ. ಧರ್ಮಕ್ಕೆ ತನ್ನದೇ ಆದ 11 ಲಕ್ಷಣಗಳಿರುತ್ತವೆ. ಸಿದ್ಧಾಂತ, ಸಾಧನೆ, ದರ್ಶನ, ಧರ್ಮ ಸಂಸ್ಕಾರ, ಸಮಾಜಶಾಸ್ತ್ರ, ನೀತಿಶಾಸ್ತ್ರ, ಅರ್ಥಶಾಸ್ತ್ರ, ಸಂಸ್ಕೃತಿ, ಪರಂಪರೆ, ಸಾಹಿತ್ಯ ಮತ್ತು ಇವೆಲ್ಲವನ್ನೂ ಬೋಧೆ ಮಾಡಿದ ಧರ್ಮಗುರು. ಈ ವ್ಯಾಖ್ಯಾನವನ್ನು ಯಾವುದೇ ಸ್ವತಂತ್ರ ಧರ್ಮಕ್ಕೆ ಹೋಲಿಸಿ **ಅದು ಧರ್ಮವೇ**, ಇಲ್ಲ ಕೇವಲ ಒಂದು ಜಾತಿ, ಮತ, ಪಂಥವೇ ಎಂಬುದನ್ನು ನಿರ್ಧರಿಸಬಹುದು. ಈ ದೃಷ್ಟಿಯಿಂದ ನೋಡಿದಾಗ **'ಮತ'** ಎನ್ನುವುದು ಶರಣರು ವಚನ ವಾಙ್ಮಯದ ಮೂಲಕ ಪ್ರತಿಪಾದಿಸಿದ ವಿಚಾರಧಾರೆಗೆ ಅನ್ವಯವಾಗದು ಎಂಬುದು ತಿಳಿಯುವುದು.

## ವೀರಶೈವ ಮತ

ಹನ್ನೆರಡನೆಯ ಶತಮಾನದ ಶರಣರು ಪ್ರತಿಪಾದಿಸಿದ ಒಂದು ಧರ್ಮ ಅದು ವೀರಶೈವ ಮತವಲ್ಲ. ತಾತ್ತ್ವಿಕವಾಗಿ ಈ ಧರ್ಮವನ್ನು ಸಮಗ್ರವಾಗಿ ಅಧ್ಯಯನ ಮಾಡದವರು, ವೀರಶೈವ ಪದದ ಮೋಹಿಗಳು, ಯಾವುದೋ ವರ್ಗವನ್ನು ಸಮಾಧಾನ ಪಡಿಸಬೇಕೆನ್ನುವವರು, ಯಾರ ಅಸಮಾಧಾನಕ್ಕೂ ಒಳಗಾಗದೇ ಮುಂದೆ ಸಾಗಬೇಕೆನ್ನುವವರು ವಚನ ಶಾಸ್ತ್ರದಲ್ಲಿ ವ್ಯಕ್ತವಾದ ಧರ್ಮಕ್ಕೆ ಬಲವಂತವಾಗಿ ವೀರಶೈವವನ್ನು ಹೇರುತ್ತಾರೆ. ಬಸವಣ್ಣನವರ ಇಡೀ ವಚನಗಳಲ್ಲಿ ಕೇವಲ ಒಂದು ಬಾರಿ ಅದೂ ಖಂಡನಾತ್ಮಕವಾಗಿ ಬಂದಿದೆ. ಪ್ರಭುದೇವರ ಪೂರ್ಣವಚನ ಸಂಗ್ರಹದಲ್ಲಿ ಒಮ್ಮೆಯೂ ಬಂದಿಲ್ಲ. ಸಿದ್ಧರಾಮೇಶ್ವರರಲ್ಲಿಯೂ ಕೆಲವು ಬಾರಿ, ಅದೂ ಖಂಡನಾತ್ಮಕವಾಗಿ ಬಂದಿದೆ. ಅವರುಗಳು ತಾವುಕೊಟ್ಟ, ಪ್ರತಿಪಾದಿಸಿದ ವಿಚಾರಧಾರೆಗೆ ಸ್ವತಃ ಏನೆಂದು ಕರೆದರು ಎಂದು ಅರ್ಥಮಾಡಿಕೊಳ್ಳುವುದನ್ನು ಬಿಟ್ಟು ನಮ್ಮ ಸಾಹಿತಿಗಳು 'ವೀರಶೈವ' ಪದವನ್ನು ಹೇರುತ್ತಿದ್ದಾರೆ. ಈ ಕಾರಣಕ್ಕಾಗಿಯೇ ನಾವು ಪಿ.ವಿ. ನಾರಾಯಣರನ್ನು ದೂಷಿಸುವಂತಿಲ್ಲ, ಇದು ಪುಸ್ತಕದ ದೋಷವೆಂದು ಅನ್ನುವಂತಿಲ್ಲ.

## ಚಳುವಳಿಯ ನಾಯಕನಾರು?

ಡಾ॥ ಪಿ. ವಿ. ನಾರಾಯಣರು ವಚನಕಾರರ ಚಳುವಳಿ ಕುರಿತು ಬರೆಯುತ್ತ (ಪುಟ 171) ಇದರ ನಾಯಕನಾರು? ಎಂದು ಕೇಳಿದ್ದಾರೆ. ಬಸವಣ್ಣ, "ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ" ಎಂದು ವಿನಯವನ್ನು ವ್ಯಕ್ತಪಡಿಸುತ್ತಾನೆ ಎನ್ನುತ್ತಾರೆ. ಈ ಸಾಮೂಹಿಕ ಚಟುವಟಿಕೆಗಳು ಸಮೂಹ ವಿವೇಕದ ಹಿನ್ನೆಲೆಯಲ್ಲಿ ನಡೆಯುತ್ತಿತ್ತೆಂದು ತೋರುತ್ತದೆ. ಈ ಸಮೂಹ ನಾಯಕತ್ವಕ್ಕೆ ಕಾರಣ ಶರಣರು ಏಕನಾಯಕತ್ವದಲ್ಲಿ ನಂಬಿಕೆಯಿಡದೆ ಸಮಾನತೆಯಲ್ಲಿ ಪಡೆದಿದ್ದ ವಿಶ್ವಾಸ ಎಂದು ತೋರುತ್ತದೆ." (ಪುಟ 174) ಎಂದಿದ್ದಾರೆ.

ಯಾವ ಚಳುವಳಿಯಾಗಲೀ, ಕೆಲಸವಾಗಲೀ, ಕ್ರಾಂತಿಯಾಗಲಿ ಒಬ್ಬ ನಾಯಕನಿಲ್ಲದೆ ಆಗದು. ಸಮಗ್ರ ವಚನ ವಾಙ್ಮಯ ಓದಿದಾಗ ನಮ್ಮ ನಾಯಕ, ನೇತಾರ ವಿಶ್ವಗುರು ಬಸವಣ್ಣನವರು ಎಂಬುದನ್ನು ಶರಣರು ಹೇಗೆ ಗುರುತಿಸಿಕೊಂಡರೆಂಬು

ದನ್ನು ಕಾಣುತ್ತೇವೆ. ಸ್ತುತಿ ಪದ್ಯಗಳನ್ನು ಕಲೆ ಹಾಕಿದಾಗ ಅತಿ ಹೆಚ್ಚಿನವು ಬಸವಣ್ಣನವರನ್ನು ಕುರಿತು ಇರುವವು.

"ಇಂತೀ ಮಹಾಪ್ರಮಥರಿಗೆ– ಪುರಾತರಿಗೆ– ಅಸಂಖ್ಯಾತ
ಮಹಾಗಣಂಗಳಿಗೆ ಪ್ರಮಥ ನಾಯಕನಾಗಿ" (ಚನ್ನಬಸವಣ್ಣ 345)

ಗುರು ಬಸವಣ್ಣನವರ ಸುತ್ತಲೂ ಶರಣರು ಸೇರಿದರು, ಕಲ್ಯಾಣ ಬೆಳೆಯಿತು. ಅವರು ಕಲ್ಯಾಣದಿಂದ ಹೊರಡುತ್ತಲೇ ಎಂಥಾ ಅನಾಹುತವಾಯಿತು ! ಇವೇ ತೋರುತ್ತವೆ ಚಳುವಳಿಯ ನಾಯಕರಾರು ಎಂಬುದನ್ನು. ಅಂಥ ಪರಮೋಚ್ಚ ಸ್ಥಾನಕ್ಕೇರಿದ್ದರೂ ಅಹಂಕಾರದಿಂದ ಬೀಗದೆ "ಎನಗಿಂತ ಕಿರಿಯರಿಲ್ಲ. ಶಿವ ಭಕ್ತರಿಗಿಂತ ಹಿರಿಯರಿಲ್ಲ," ಎನ್ನುವುದು ಬಸವಣ್ಣನವರ ದೊಡ್ಡಗುಣ. "ನೀನು ಮಾಡಲು ಆನಾದೆನಲ್ಲದೇ ಎನಗೆ ಬೇರೆ ಸ್ವತಂತ್ರ ಉಂಟೆ ?" ಎಂದು ಪ್ರಭುದೇವರು ಬಸವಣ್ಣನವರು ನಿರ್ಮಿಸಿದ ವಾತಾವರಣ; ಕೊಟ್ಟ ಅವಕಾಶ, ಇಟ್ಟ ಹೆಜ್ಜೆ ಕುರಿತು ಮುಕ್ತಕಂಠದಿಂದ ಹೊಗಳಿದರೆ, ದೊಡ್ಡ ಮನಸ್ಸಿನ ಆ ಗುರು ಹೇಳುತ್ತಾರೆ,

"ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ
ಇವರೆಲ್ಲ ತಮ್ಮಿಂದ ತಾವಾದರು ?" ಎಂದು.

ಶರಣರು ಹೀಗೆ ಕೃತಜ್ಞತೆ ತೋರುವಲ್ಲಿ, ಅದನ್ನು ನಿರಾಕರಿಸುವಲ್ಲಿ ಬಸವಣ್ಣನವರ ನಾಯಕತ್ವವು ಸ್ವಯಂ ಸಿದ್ಧವಾಗಿದೆ.

## ವ್ಯಕ್ತಿತ್ವಕ್ಕೆ ಕಲಂಕ ತರುವ ಮಾತುಗಳು

ಈ ವರೆಗೆ ಪ್ರಸ್ತಾಪಿಸಿರುವುದು ತಾತ್ತ್ವಿಕ ದೋಷಗಳನ್ನು ಅವು ಸೈದ್ಧಾಂತಿಕ ತಪ್ಪುಗಳು. ಈಗ ಪ್ರಸ್ತಾಪಿಸುವುದು ಹೇಗೆ ಮಹಾಪುರುಷರ ಬಗ್ಗೆ ಪಿ.ವಿ. ನಾರಾಯಣರು ವ್ಯಂಗ್ಯೋಕ್ತಿಯ ಮೂಲಕ, ಸಹಜ ವಿವರಣೆ ಮೂಲಕ ಕಲಂಕ ಹೊರಿಸುತ್ತಾರೆಂಬುದನ್ನು ಕುರಿತು.

### 1. ಗುರು ಬಸವಣ್ಣನವರನ್ನು ಕುರಿತು :

"ಬಸವಣ್ಣನನ್ನು ತನ್ನ ಬ್ರಾಹ್ಮಣ ಮೂಲ ಎಷ್ಟೋ ವೇಳೆ ಕಾಡುತ್ತದೆ. ಅದು ಎರಡು ರೀತಿಯಲ್ಲಿ ; ತಾನು ಬ್ರಾಹ್ಮಣನಾದ್ದರಿಂದ ಇತರರಿಗಿಂತ ಮೇಲೆಂಬ ಭಾವನೆ ಒಂದು ಕಡೆ. ತಾನು ಶೋಷಕ ಜಾತಿಯಲ್ಲಿ ಹುಟ್ಟಿ ಬಂದೆನಲ್ಲ ಎಂಬ ತೀವ್ರ ಮುಜುಗರ ಇನ್ನೊಂದು ಕಡೆ (138–139). ಎರಡನೆಯ ಭಾವ ಸರಿ ; ಆದರೆ ಮೊದಲನೆಯ ಭಾವ ತಪ್ಪು. ಅವರನ್ನು ತಾನು ಮೇಲುಜಾತಿಯಲ್ಲಿ ಹುಟ್ಟಿದವನು ಎಂಬ ಅವರ ಜಾಗ್ರುತ್, ಸ್ವಪ್ನ ಸುಷುಪ್ತಾಅವಸ್ಥೆಯಲೂ ಕಾಡಿಲ್ಲ.

ಶೆಟ್ಟಿ ಎಂಬೆನೇ ಶಿರಿಯಾಳನ? ಎಂಬ ವಚನವನ್ನು ನುಡಿದಿರುವ ಹಿನ್ನೆಲೆ ಹೀಗಿದೆ. "ಬಸವಣ್ಣಾ, ನೀವು ಶ್ರೇಷ್ಠ ಜಾತಿಯಲ್ಲಿ ಹುಟ್ಟಿದವರು. ಬ್ರಾಹ್ಮಣ ಎಂದರೆ

–52 ನೇ ಪುಟಕ್ಕೆ ಮುಂದುವರಿದಿದೆ.



॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

## ಬಸವ ಧರ್ಮ ಪೀಠ (ರಿ. ಟ್ರಸ್ಟ್)

ಮಹಾಮನೆ ಮಹಾಮಠ, ಕೂಡಲ ಸಂಗಮ-587115
ತಾ॥ ಹುನಗುಂದ, ಜಿಲ್ಲಾ॥ ಬಿಜಾಪುರ

ಬಸವ ಪೀಠವು ಎದ್ದು । ಒಸೆದು ನಾಣ್ಯವು ಹುಟ್ಟಿ
ಬವಸನ ಮುದ್ರೆ ಮೆರೆದಾವು। ಧರೆಯವಗೆ
ವಶವಾಗದಿಹುದೆ ಸರ್ವಜ್ಞ ? (ಉತ್ತಂಗಿ ಚನ್ನಪ್ಪ-962)

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅವತರಿಸಿ ಬಂದ ಮಾನವತಾವಾದಿ, ಮಹಾಗುರು, ಮಂತ್ರಪುರುಷ, ಸಮತಾವಾದಿ. ಮರ್ತ್ಯಲೋಕದ ಈ ಕರ್ತನ ಕಮ್ಮಟವನ್ನು ಸ್ವಾರ್ಥಿಯಾದ ಮಾನವ ಮತ್ತು ಪಟ್ಟಭದ್ರ ಹಿತಾಸಕ್ತರು ವರ್ಣ, ಜಾತಿ, ವರ್ಗ, ಅಂತಸ್ತು ಭೇದಗಳಿಂದ ಅಂದಗೆಡಿಸಿದ್ದನ್ನು ಕಂಡು, ಮನಸೊಂದು ಕರ್ತನ ಮೇಲಿನ ಅನನ್ಯವಾದ ಭಕ್ತಿಯಿಂದಲೂ, ಸೃಷ್ಟಿಯ ಬಗೆಗಿದ್ದ ಅಭಿಮಾನದಿಂದಲೂ, ಮಾನವ ಕುಲದ ಮೇಲಿನ ಉತ್ಕಟವಾದ ಪ್ರೀತಿಯಿಂದಲೂ ಬಸವಣ್ಣನವರು ಸುಧಾರಣೆಯನ್ನು ಕೈಗೊಂಡರು. ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿದರು. ಜಾತಿ ವರ್ಣ ವರ್ಗರಹಿತವಾದ ಕಲ್ಯಾಣರಾಜ್ಯ ನಿರ್ಮಾಣಕ್ಕೆ ಶ್ರಮಿಸಿದರು. ಧರ್ಮವೇ ಸಾಧನ ಮತ್ತು ವಿಶ್ವಕಲ್ಯಾಣವೇ ಗುರಿ ಎಂದು ಭಾವಿಸಿದ ಅವರು ಇಷ್ಟಲಿಂಗವೆಂಬ ಕುರುಹನ್ನು, ಲಾಂಛನವನ್ನು ಯಾವುದೇ ಭೇದವಿಲ್ಲದೆ ಎಲ್ಲರಿಗೂ ಕೊಡುವಂತಹ ಧಾರ್ಮಿಕ ಸಮಾನತೆ–ಸ್ವಾತಂತ್ರ್ಯಗಳನ್ನು ಘೋಷಿಸಿದರು. ಇಷ್ಟಲಿಂಗವೆಂಬ, ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಭಾವಿಸುವ ಶ್ರೇಷ್ಠ ಲಾಂಛನವನ್ನು ಕಂಡುಹಿಡಿದು ಕೊಟ್ಟು "**ಲಿಂಗವಂತ ಧರ್ಮ**"ದ ಆದ್ಯರಾದರು. ಆ ವರೆಗೂ ಜಗತ್ತು ಕಂಡರಿಯದ ಕೇಳರಿಯದ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸಿದರು. ಧರ್ಮಶ್ರೀಯು ಜನಸಾಮಾನ್ಯರ ಮನೆ–ಮನಗಳನ್ನು ಪ್ರವೇಶಿಸುವಂತೆ ವಚನ ವಾಙ್ಮಯವನ್ನು ಕೊಟ್ಟರಲ್ಲದೆ, ಅನುಭವ ಮಂಟಪವೆಂಬ ಮಾದರಿ ಸಂಸ್ಥೆಯ ಮೂಲಕ ಬಯಸಿ ಬಂದವರಿಗೆಲ್ಲ ದೀಕ್ಷಾ ಸಂಸ್ಕಾರ, ಧಾರ್ಮಿಕ ತರಬೇತಿ ನೀಡಿದರು. ಶತಶತಮಾನಗಳ ಕಾಲದಿಂದಲೂ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಸಂಖ್ಯಾತರು ಬಸವ ಧರ್ಮದ ಪಾವನ ಜಲದಲ್ಲಿ ಮಿಂದು ಪುನೀತರಾದರು. ವಿಶ್ವಸಂಸ್ಥೆಯು ಸಮಸ್ತ ಮಾನವ ಕುಲಕೋಟಿಯ ಸಮಸ್ಯೆಗಳನ್ನು ಕುರಿತು ಚಿಂತನೆಗೈಯುವಂತೆ ಅನುಭವ ಮಂಟಪವು ಮಾನವ ಸಮಾಜದ ಸಮಸ್ಯೆಗಳನ್ನು ಚಿಂತಿಸಿತಲ್ಲದೆ ಉತ್ತಮ ಪರಿಹಾರ ನೀಡಿತು. ಜಗತ್ತಿನ ಧಾರ್ಮಿಕ ಇತಿಹಾಸದಲ್ಲೇ ಅಪೂರ್ವವೆನಿಸುವ ಶರಣ ಸಂದೋಹ

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಅವತರಿಸಿದ ನಮ್ಮ ಬಸವಣ್ಣ. –ಅಲ್ಲಮ ಪ್ರಭು

ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣದಲ್ಲಿ ವಿಜೃಂಭಿಸಿತು. ವಿಶ್ವಗುರು ಬಸವಣ್ಣನವರ ಉದಾತ್ತ ಉದ್ದೇಶದ ಕಾರ್ಯಾಚರಣೆಗೆ ಹೆಗಲೆಣೆಯಾಗಿ ದುಡಿಯಲು ಭಾರತದ ಮೂಲೆ ಮೂಲೆಗಳಿಂದ ಜನರು ಧಾವಿಸಿದರು. ಉದಾತ್ತ ಚಿಂತನೆ, ಉನ್ನತವಾದ ತ್ಯಾಗಗಳಿಂದ ಅಮರಾತ್ಮರಾದರು. ಇಷ್ಟೇ ಅಲ್ಲ ವಚನ ಸಾಹಿತ್ಯ ಸಂವಿಧಾನಕ್ಕೆ ಜಾತಿವಾದಿಗಳಿಂದ ಸಂಕಷ್ಟವೆರಗಿದಾಗ ಪ್ರಾಣಾರ್ಪಣೆಗೂ ಸಿದ್ಧರಾದರು.

ಗುರು ಬಸವಣ್ಣನವರು ಯಾವುದೇ ಒಂದು ಜಾತಿ ಮತಕ್ಕೆ ಸೀಮಿತರಾದ ವ್ಯಕ್ತಿಯಲ್ಲ; ಅವರು ಒಂದು ಜಾತಿಯನ್ನು ನಿರ್ಮಿಸಲೂ ಯತ್ನಿಸಿಲ್ಲ. ಸಮಸ್ತ ಮಾನವ ಜನಾಂಗಕ್ಕೆ ದೇವರು–ಧರ್ಮ–ಪೂಜೆಯ ಹಕ್ಕನ್ನು, ಸಮಬಾಳ್ವೆಯ ಸೌಲಭ್ಯವನ್ನೂ ಒದಗಿಸಲು ಶ್ರಮಿಸಿದ ಮಹಾಮಾನವತಾವಾದಿ. ಜಾತಿ ವರ್ಣ ವರ್ಗ ಲಿಂಗ ಭೇದಗಳಿಲ್ಲದ "ಕಲ್ಯಾಣ ರಾಜ್ಯ"ನಿರ್ಮಾಣಕ್ಕೆ, ವಿಶ್ವಚೇತನವನ್ನು ಚುಳುಕಾಗಿ ಮಾಡಿಕೊಂಡು ಇಷ್ಟಲಿಂಗ ರೂಪದಲ್ಲಿ ಅಂಗದ ಮೇಲೆ ಧರಿಸಿದ " ಲಿಂಗವಂತ "ರು (ದೇವ ಭಕ್ತರು) ಸ್ವಯಂ ಸೇವಕರಾಗಿ ದುಡಿಯಬೇಕು ಎಂಬುದೇ ಬಸವಣ್ಣನವರ ಆಶೋತ್ತರವಾಗಿತ್ತು. ಅನುಭವ ಮಂಟಪದ ಮಾದರಿಯಲ್ಲಿ ಧರ್ಮ ಸಂಸ್ಥೆಗಳು ಜನರನ್ನು ಸಂಘಟಿಸುವ, ಸಂಸ್ಕರಿಸುವ ಜ್ಞಾನಕೇಂದ್ರಗಳಾಗಬೇಕು ಎಂಬುದೇ ಗುರು ಬಸವಣ್ಣನವರ ಕನಸಾಗಿತ್ತು.

ಆದರೆ, ಆದುದೇನು? ಆ ಗುರುವಿನ ಹೃದ್ಗತ ಕನಸುಗಳನ್ನು ನಂತರದ ಅನುಯಾಯಿಗಳು ನನಸು ಮಾಡಲಿಲ್ಲ. ಅವರು ನಡೆದು ತೋರಿದ ಪಥವನ್ನು ಸರಿಯಾಗಿಡಲಿಲ್ಲ. ಮಹಾ ಮಾನವತಾವಾದಿಯಾದ ಬಸವ ಗುರುವು ಎಲ್ಲರನ್ನೂ ಮಾತೃಹೃದಯದಿಂದ ಸ್ವಾಗತಿಸಿದಂತೆ ನಂತರದವರು ಸ್ವಾಗತಿಸಲಿಲ್ಲ. ಹೀಗಾಗಿ ಸಂಪೂರ್ಣವಾಗಿ ವಿಕೃತಗೊಂಡ ಸಮಾಜವನ್ನಿಂದು ಕಾಣುತ್ತಿದ್ದೇವೆ. ಧರ್ಮಗುರು ಬಸವಣ್ಣನವರ ವಿಚಾರಕ್ಕೆ ವಿರುದ್ಧವಾದ, ವಚನ ಸಾಹಿತ್ಯ ಸಂವಿಧಾನ ಮನ್ನಿಸದ, ಶರಣ ಪಥಕ್ಕೆ ಸಲ್ಲದ ನಡೆ-ನುಡಿ, ಭೇದ-ಭ್ರಾಂತಿ, ಅಜ್ಞಾನ-ಮೌಢ್ಯತೆಗಳಿಂದ ತುಂಬಿರುವ ಅನುಯಾಯಿಗಳನ್ನೇ ಹೆಚ್ಚಾಗಿ ಕಾಣುತ್ತೇವೆ. ಇದು ಸರಿಯೆ ? ಆದ್ದರಿಂದ ಎಲ್ಲರೂ ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ, ಹಳಿ ತಪ್ಪಿದ ಈ ಸಮಾಜದ ಗಾಡಿಯನ್ನು ಹಳಿಯ ಮೇಲೆ ಕೂಡ್ರಿಸುವ ಪ್ರಾಮಾಣಿಕ ಪ್ರಯತ್ನವನ್ನಿಂದು ಮಾಡಬೇಕಾಗಿದೆ.

ಶ್ರೀ ಗುರು ಬಸವಣ್ಣನವರ ದಿವ್ಯಪ್ರೇರಣೆಯಂತೆ, ಅವರು ಲಿಂಗೈಕ್ಯರಾದ ಕೂಡಲ ಸಂಗಮ ಸುಕ್ಷೇತ್ರದಲ್ಲಿಯೇ ದಿ. 30-7-1987, ಶ್ರಾವಣ ಶುದ್ಧ ಬಸವ ಪಂಚಮಿಯಂದು "ಬಸವ ಧರ್ಮ ಪೀಠ" ಎಂಬ ವಿಶ್ವಸ್ಥ ಸಂಸ್ಥೆಯನ್ನು ವಿದ್ಯುಕ್ತವಾಗಿ ಸ್ಥಾಪಿಸಿ, ಮುಂಬಯಿಯ 1950ನೇ ಇಸವಿಯ ಟ್ರಸ್ಟ್ ಆಕ್ಟಿನ 18ನೇ ಕಲಮಿನನ್ವಯ ಬೆಳಗಾಂವಿಯ ಅಸಿಸ್ಟೆಂಟ್ ಚಾರಿಟಿಕಮೀಷನರ್ ಅವರಲ್ಲಿ ನೋಂದಾಯಿಸಲಾಗಿದೆ. ನೋಂದಣಿ ಸಂಖ್ಯೆ A 1798 (BJP) dated· 19-10-1987· ತಕ್ಷಣವೇ ಕಾರ್ಯೋನ್ಮುಖವಾಗಲು ಅನುಕೂಲವಾಗುವಂತೆ ಮೂವರು ಸದಸ್ಯರೊಡನೆ ವಿಶ್ವಸ್ಥ ಸಂಸ್ಥೆಯನ್ನು ಆರಂಭಿಸಿದ್ದು ಇನ್ನೂ ಮೂವರ ಸೇರ್ಪಡೆಗೆ ಅವಕಾಶವಿದೆ.

---

ಮಹಾಮಹಿಮ ಸಂಗನ ಬಸವಣ್ಣನು ಎನಗೆಯೂ ಗುರು
ನಿನಗೆಯೂ ಗುರು ಜಗವೆಲ್ಲಕ್ಕೆಯೂ ಗುರು ಕಾಣಾ, ಗುಹೇಶ್ವರ.



# ಬಸವ ಧರ್ಮ ಪೀಠ ವಿಶ್ವಸ್ಥ ಮಂಡಳಿಯ ಸದಸ್ಯರು



**ಪೂಜ್ಯ ಶ್ರೀ ಸದ್ಗುರು**
**ಲಿಂಗಾನಂದ ಸ್ವಾಮಿಗಳವರು**
**ಗೌರವಾಧ್ಯಕ್ಷರು,**
**ಬಸವ ಧರ್ಮ ಪೀಠ**

❖

ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕ್ಯವಾಗಿ 15-9-1931 ರಂದು ಜನಿಸಿ, ಬಿ. ಎ. ಆನರ್ಸ್ ಪದವೀಧರರಾಗಿ ಬಸವ ಗುರು ಪ್ರೇರಣೆಯಿಂದ 25-4-1955 ರಂದು ಅಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನದಾಸೋಹ ಮಾಡುತ್ತಿರುವ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಅಪೂರ್ವ ವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರವಚನಗಳ ಮೂಲಕ ಮಾತ್ರವಲ್ಲ ಸಾಹಿತ್ಯ ಕೃತಿಗಳ ಮೂಲಕ ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಮಲ ಸಂಜಾತೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ. ಸ್ತ್ರೀ ಸಮಾನತಾ ತತ್ತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್

ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸುಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾಮೂರ್ತಿ.



## ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

### ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

❋

ಚಿನ್ಮೂಲಾದ್ರಿಯ ಚಿತ್ಕಳೆಯಾಗಿ 1946ರಲ್ಲಿ ಮಾರ್ಚ್ 13ರಂದು ಜನಿಸಿ, ವಿಜ್ಞಾನ ಪದವೀಧರರಾಗಿ, ತತ್ತ್ವಜ್ಞಾನದ ಸ್ನಾತಕೋತ್ತರ ಪದವೀಧರರಾಗಿ, ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು 1970 ರಲ್ಲಿ ಆರೋಹಿಸಿ ಪ್ರಪ್ರಥಮ ಮಹಿಳಾ ಜಗದ್ಗುರುವೆಂಬ ವಿಶೇಷ ಕೀರ್ತಿಗೆ ಪಾತ್ರರಾದವರು, ಪೂಜ್ಯ ಮಾತಾಜಿ. ಭರತಭೂಮಿಯಿಂದ ಆಂಗ್ಲ ನಾಡಿಗೆ ಹೋಗಿ ಬಸವ ತತ್ತ್ವ ಪ್ರಚಾರವನ್ನು ಮಾಡಿ ಬಂದ ಧೀರ ಮಹಿಳೆ. ಅಪೂರ್ವ ವಾಗ್ಮಿತ್ವದಿಂದ ಜನಜಾಗೃತಿಯನ್ನು ಮಾಡಿರುವುದೇ ಅಲ್ಲದೆ, ಸಾಹಿತ್ಯ ಕೃತಿಗಳ ರಚನೆಯಲ್ಲೂ ಉನ್ನತವಾದ ಸಾಧನೆ ಮಾಡಿದ್ದಾರೆ. ವಿಶ್ವಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ವರ್ಷಕ್ಕೊಮ್ಮೆ ನಡೆಯುತ್ತಿರುವ "ಶರಣ ಮೇಳ" ಹಾಗೂ ರಾಷ್ಟ್ರೀಯ ಬಸವ ದಳ, ಬಸವ ಧರ್ಮ ಸಂಸತ್ ಮುಂತಾದ ಸಂಘಟನೆಗಳು ಪೂಜ್ಯ ಮಾತಾಜಿಯವರ ಚಿಂತನೆಯ ಫಲ.



## ಪೂಜ್ಯ ಶ್ರೀ ಶ್ರೀ ಸದ್ಗುರು ಮಾತೆ ಗಂಗಾದೇವಿ

### ಕೋಶಾಧ್ಯಕ್ಷೆ, ಬಸವ ಧರ್ಮ ಪೀಠ

❋

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಕರಕಮಲ ಸಂಜಾತೆಯಾದ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಬೀದರ ಜಿಲ್ಲೆಯ ಚಟ್ನಳ್ಳಿ ಗ್ರಾಮದ ಶರಣ. ಮಾಣಿಕ್ಯಪ್ಪ ಬೆಣ್ಣೆಯವರ ಮಗಳು. 1958ನೆಯ ಇಸವಿಯಲ್ಲಿ ಜನಿಸಿ, 1973ರಲ್ಲಿ ಅಂದರೆ 15ನೆಯ ವಯಸ್ಸಿನಲ್ಲಿ ಪೂಜ್ಯ ಗುರುದ್ವಯರ ಆಶ್ರಯಕ್ಕೆ ಬಂದು, ಸಾಧನೆಯಲ್ಲಿ ತೀವ್ರವಾಗಿ ಪ್ರಗತಿ ಹೊಂದಿ 16-7-79 ರಂದು ಜಂಗಮ ದೀಕ್ಷೆಯನ್ನು ಪಡೆದರು. ಬೆಂಗಳೂರು ವಿಶ್ವಕಲ್ಯಾಣ ಮಿಷನ್‌ನ ವೈಸ್ ಚೇರ್ಮನ್ ಆಗಿ, ಜಗನ್ಮಾತಾ ಅಕ್ಕಮಹಾದೇವಿ ಅನುಭವ ಪೀಠ ಟ್ರಸ್ಟಿನ ಉಪಾಧ್ಯಕ್ಷೆಯಾಗಿ, ಬಸವ ಧರ್ಮಪೀಠ ಟ್ರಸ್ಟಿನ ಕೋಶಾಧ್ಯಕ್ಷೆಯಾಗಿದ್ದಾರೆ. ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಹಾಗೂ ತಮಿಳುನಾಡು, ಆಂಧ್ರ, ಮಹಾರಾಷ್ಟ್ರದಲ್ಲೂ ಅವಿರತವಾಗಿ ಪ್ರವಚನ ಮಾಡಿಬಂದಿದ್ದಾರೆ. ಶರಣ ಮೇಳದ ಯಶಸ್ಸಿನಲ್ಲಿ ಪ್ರಮುಖ ಸೂತ್ರಧಾರಿಗಳಾಗಿ, ಬಸವ ತತ್ತ್ವಕ್ಕೆ ಬಸವ ಧರ್ಮ ಪೀಠಕ್ಕೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡು ದುಡಿಯುವ ಚೇತನ ಪೂಜ್ಯ ಗಂಗಾದೇವಿ ಮಾತಾಜಿಯವರು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಬಸವ ಧರ್ಮ ಪೀಠದ ಗೌರವಾಧ್ಯಕ್ಷರಾಗಿಯೂ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಕಾರ್ಯಾಧ್ಯಕ್ಷೆಯಾಗಿಯೂ, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಸದಸ್ಯರಾಗಿಯೂ ಪ್ರತಿಜ್ಞಾಬದ್ಧರಾಗಿದ್ದಾರೆ. ಸಂಸ್ಥಾಪಕ-ಕಾರ್ಯಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಕೊಡಮಾಡಿದ 11001.00 (ಹನ್ನೊಂದು ಸಾವಿರದ ಒಂದು) ರೂ ನಗದು ಮತ್ತು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಖರೀದಿಸಲ್ಪಟ್ಟಿದ್ದ 4 ಎಕರೆ 33 ಗುಂಟೆ (ಖರಾಬು ಸೇರಿ 5 ಎಕರೆ 21 ಗುಂಟೆ) ವ್ಯವಸಾಯದ ಜಮೀನನ್ನು ಆಸ್ತಿಯಾಗಿ ಪಡೆದು ಬಸವ ಧರ್ಮ ಪೀಠವು ಕಾರ್ಯಾರಂಭ ಮಾಡಿತು.

ಮೇಲೆ ಕಾಣಿಸಿದ ಜಮೀನು, ಬಸವ ಧರ್ಮ ಪೀಠದ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಕಾಗದೆಂದು, ಟ್ರಸ್ಟ್ ಪುನಃ ಅದಕ್ಕೆ ಹೊಂದಿಕೊಂಡಂತೆ 4 ಎಕರೆಯಷ್ಟು ಬಿನ್ ಶೇತಗಿಯಾದ (N. A) ಜಮೀನನ್ನು ಕೊಂಡುಕೊಂಡಿತು. ಮುಖ್ಯ ರಸ್ತೆ ಮತ್ತು ಪ್ರಸ್ತುತ ಜಮೀನಿಗೆ ಮಧ್ಯದಲ್ಲಿ ಇದ್ದ ಅರ್ಧ ಎಕರೆಯ ಇನ್ನೊಂದು ಜಮೀನನ್ನು ಟ್ರಸ್ಟ್ ಖರೀದಿಸಿದೆ.

ಸುಮಾರು ಹತ್ತು ಎಕರೆಯಷ್ಟು ವಿಸ್ತೀರ್ಣ ಉಳ್ಳ ಮಹಾಮನೆ ಆವರಣವು ಕೂಡಲ ಸಂಗಮ ಸುಕ್ಷೇತ್ರದಲ್ಲಿ, ಸಂಗಮೇಶ್ವರ ದೇವಾಲಯಕ್ಕೆ ಹೋಗುವ ಮುಖ್ಯ ರಸ್ತೆಗೆ ಹೊಂದಿಕೊಂಡು, ಸರ್ಕಾರಿ ಪ್ರವಾಸಿ ಮಂದಿರದ ಸಮೀಪದಲ್ಲಿದೆ.

## ಬಸವ ಧರ್ಮ ಪೀಠದ ಧ್ಯೇಯೋದ್ದೇಶಗಳು

ಈ ಸಂಸ್ಥೆಯು ಬಹಳ ವ್ಯಾಪಕವಾದ ಉದ್ದೇಶವನ್ನು ಹೊಂದಿದೆ. ಜನರಿಗೆ ಧರ್ಮಜ್ಞಾನ ನೀಡುವ ಜ್ಞಾನಾಂಗವನ್ನಷ್ಟೇ ಅಲ್ಲದೆ ಸೇವಾ ಕಾರ್ಯ ಮಾಡುವ ಕ್ರಿಯಾಂಗವನ್ನೂ ಹೊಂದಿದೆ.

**ಕೆಲವು ಪ್ರಮುಖ ಉದ್ದೇಶಗಳು ಹೀಗಿವೆ :**

- ಸಮಾಜ ಮತ್ತು ಆಚರಣೆಗಳ ಶುದ್ಧೀಕರಣ ಮತ್ತು ನವೀಕರಣ.
- ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಮಾರ್ಗದರ್ಶನ.

---

ಸಾಧು ಸಾಧಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು । ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು ॥

೩. ಪ್ರಾರ್ಥನಾ ಮಂದಿರ ಮತ್ತು ಶಿಬಿರಗಳ ಮೂಲಕ ಜನರಿಗೆ ಸಂಸ್ಕಾರವನ್ನು ನೀಡುವುದು.

೪. ನಾಡಿನಾದ್ಯಂತ ಪ್ರಾರ್ಥನಾ ಮಂಟಪ ರಚನೆ ಮತ್ತು ಪ್ರಾರ್ಥನಾ ಕೂಟಗಳ ಸಂಘಟನೆ.

೫. ವಚನ ವಾಙ್ಮಯ ಸಂಶೋಧನೆ, ಅಧ್ಯಯನ, ಭಾಷಾಂತರ, ಸಾಹಿತ್ಯ ಪ್ರಕಟಣೆ ಮೂಲಕ ವಚನ ಸಾಹಿತ್ಯವನ್ನು ಜನಮನಕ್ಕೆ ಮುಟ್ಟಿಸುವುದು.

೬. ಮೂಢನಂಬಿಕೆ, ಧರ್ಮದ ಹೆಸರಿನಲ್ಲಿ ಶೋಷಣೆಗೆ ಒಳಗಾಗುವ ಜನತೆಗೆ ನಿಜ ಧರ್ಮದ ಜ್ಞಾನವನ್ನು ನೀಡಿ ಪ್ರಗತಿಪರ ಚಿಂತನೆಗೆ ಅಣಿ ಮಾಡುವುದು.

೭. ದಾಸೋಹ, ಅರವಟ್ಟಿಗೆ, ವೈದ್ಯಕೀಯ ನೆರವು, ಕ್ಷಾಮ-ದುರ್ಭಿಕ್ಷ್ಯಗಳ ಕಾಲದಲ್ಲಿ ಗಂಜೀ ಕೇಂದ್ರ ಮುಂತಾಗಿ ನಡೆಸುವುದು.

೮. ಗ್ರಂಥಾಲಯ, ವಸ್ತು ಸಂಗ್ರಹಾಲಯ ಮುಂತಾದುವುಗಳ ಮೂಲಕ ಶರಣ ಸಂಸ್ಕೃತಿಯ-ಪರಂಪರೆಯ ದರ್ಶನ ಮಾಡಿಸುವುದು.

೯. ಶರಣರ ಗದ್ದುಗೆ, ಚಾರಿತ್ರಿಕ ಸ್ಥಾನಗಳ ಸಂರಕ್ಷಣೆ ಮತ್ತು ಅಭಿವೃದ್ಧಿ.

೧೦. ರಾಷ್ಟ್ರೀಯ ಬಸವ ದಳಗಳನ್ನು ಸಂಘಟಿಸುತ್ತ ಜನರಲ್ಲಿ ರಾಷ್ಟ್ರಾಭಿಮಾನ, ಕರ್ತವ್ಯ ಪ್ರಜ್ಞೆ, ಆಧ್ಯಾತ್ಮಿಕ ಪ್ರವೃತ್ತಿ ಬೆಳೆಸುವುದು.

೧೧. ಧರ್ಮ ಬೋಧಕರ(ಗುರುಮೂರ್ತಿ) ತರಬೇತಿ ವಿದ್ಯಾಲಯ ತೆರೆಯುವುದು.

೧೨. ಪ್ರಕಟಗೊಂಡ ಧಾರ್ಮಿಕ ಸಾಹಿತ್ಯವನ್ನು ಸಂಗ್ರಹಿಸಿ ಮಾರಾಟಕ್ಕೆ ಲಭ್ಯವಾಗುವಂತೆ ಮಾಡುವುದು.

೧೩. ವಿವಾಹ ವಿಧಿ, ನಾಮಕರಣ, ದೀಕ್ಷಾ ಸಂಸ್ಕಾರ, ಗೃಹ ಪ್ರವೇಶ, ಶವ ಸಂಸ್ಕಾರ ಮುಂತಾದ ಕ್ರಿಯೆಗಳನ್ನು ಶರಣರ ತತ್ತ್ವಕ್ಕನುಗುಣವಾಗಿ ಮಾಡುವ ಕ್ರಿಯಾ ಮೂರ್ತಿಗಳನ್ನು ತರಬೇತಿಗೊಳಿಸುವುದು.

೧೪. ಬಸವ ಜಯಂತಿ, ಬಸವ ಲಿಂಗೈಕ್ಯ ದಿನಾಚರಣೆಗಳನ್ನೇ ಅಲ್ಲದೆ ವಿವಿಧ ಶರಣರ ಜಯಂತಿಗಳನ್ನು ಪುಣ್ಯಕ್ಷೇತ್ರದಲ್ಲಿ ಆಚರಿಸುವುದು.

೧೫. ಪ್ರತಿ ವರ್ಷದ ಜನವರಿ 14, ಬಸವ ಕ್ರಾಂತಿ ದಿನ (ಸಂಕ್ರಾಂತಿ) ದಂದು "ಶರಣ ಮೇಳ" ಎಂಬ ಬೃಹತ್ ಶರಣ ಸಮಾವೇಶವನ್ನು ಏರ್ಪಡಿಸುವುದು. ಇದು ಲಿಂಗವಂತ ಧರ್ಮೀಯರ, ಬಸವ ತತ್ತ್ವಾಭಿಮಾನಿಗಳ ಜಾಗತಿಕ ವಾರ್ಷಿಕ ಉತ್ಸವವಾಗುವಂತೆ ಬೃಹತ್ ಪ್ರಮಾಣದಲ್ಲಿ ಯೋಜಿಸುವುದು.

ಈ ಮುಂತಾಗಿ ಇನ್ನೂ ಹಲವಾರು ಉದ್ದೇಶಗಳನ್ನು ಬಸವ ಧರ್ಮ ಪೀಠವು ಹೊಂದಿದ್ದು, ಇದಕ್ಕನುಗುಣವಾಗಿ ಯೋಜನೆಯನ್ನು ಹಾಕಿಕೊಂಡಿದೆ.



## ನ್ಯಾಯಾಂಗ— ಶಾಸಕಾಂಗ— ಕಾರ್ಯಾಂಗ

ಲಿಂಗವಂತ ಧರ್ಮಾನುಯಾಯಿಗಳು, ಬಸವ ತತ್ತ್ವಾನುಯಾಯಿಗಳು ತಮ್ಮ ಆಚಾರ–ವಿಚಾರ ರೂಪಿಸಲು, ನಿರ್ಧರಿಸಲು, ಸಂದೇಹ ಪರಿಹರಿಸಿಕೊಳ್ಳಲು ಒಂದು ವೇದಿಕೆ ಹೊಂದದೆ ಇರುವ ಕೊರತೆಯನ್ನು ಕಂಡು ಬಸವ ಧರ್ಮ ಪೀಠವು ಸೂಕ್ತ ಮತ್ತು ಸಮಗ್ರ ಯೋಜನೆಯನ್ನು ಹಾಕಿಕೊಂಡಿದೆ. ಬಸವ ಧರ್ಮ ಪೀಠವು ನಿರ್ಧಾರವನ್ನು ತೆಗೆದುಕೊಳ್ಳಲು ಸಹಾಯಕವಾಗುವ ಅಂಗ ಸಂಸ್ಥೆಗಳನ್ನಾಗಿ ಬಸವ ಧರ್ಮ ಸಂಸತ್ತನ್ನು ಮತ್ತು ರಾಷ್ಟ್ರೀಯ ಬಸವ ದಳವನ್ನು ರೂಪಿಸಿದೆ.

ಬಸವ ಧರ್ಮ ಸಂಸತ್ ವ್ಯಾಪಕವಾಗಿ ಮತ್ತು ಎಲ್ಲ ರಾಜ್ಯಗಳಿಂದಲೂ ಧರ್ಮ ನಿಷ್ಠರಾದ, ಬಸವ ತತ್ತ್ವಾನುಯಾಯಿಗಳಾದ ಶರಣರನ್ನು ಪ್ರತಿನಿಧಿಗಳನ್ನಾಗಿ ತೆಗೆದುಕೊಂಡು, ಧರ್ಮ, ಸಮಾಜ, ಸಾಹಿತ್ಯ, ಸಂಸ್ಕೃತಿ ಮುಂತಾದ ಎಲ್ಲ ವಿಷಯಗಳನ್ನು ಚರ್ಚಿಸುವುದು. ಕೆಲವು ವಿಷಯಗಳಲ್ಲಿ ಅಗತ್ಯಬಿದ್ದರೆ ತಿದ್ದುಪಡಿ ತರುವುದು. ಹೀಗೆ ಶಾಸಕಾಂಗವು ನಿರ್ಣಯಿಸಿದ್ದನ್ನು ಬಸವ ಧರ್ಮ ಪೀಠವು ಘೋಷಿಸುವುದು. ರಾಷ್ಟ್ರೀಯ ಬಸವ ದಳವು ಕಾರ್ಯಾಂಗವಾಗಿ ಈ ಘೋಷಿತ ತತ್ತ್ವ-ಆಚಾರಗಳನ್ನು ಕಾರ್ಯರೂಪಕ್ಕೆ ತರುವುದು.

## ಮಹಾಮನೆ ಮಹಾಮಠ

ಆದಿ ಗುರು ಬಸವಣ್ಣನವರು ಮಹಾಮನೆಯನ್ನು ಕಟ್ಟಿ, ಅದರ ಮೂಲಕ ಉದಾತ್ತ ಸಂದೇಶಗಳನ್ನು ಜಗತ್ತಿಗೆ ನೀಡಿದರು, ನವ ಸಮಾಜವನ್ನು ನಿರ್ಮಾಣ ಮಾಡಿದರು. ಅದೇ ಆದರ್ಶದ ಬೆಂಬಳಿವಿಡಿದು ಕೂಡಲ ಸಂಗಮದಲ್ಲಿಯೂ ಮಹಾಮನೆಯನ್ನು ಕಟ್ಟುವ ಯೋಜನೆಯನ್ನು ಬಸವ ಧರ್ಮ ಪೀಠವು ಹಮ್ಮಿಕೊಂಡಿದೆ. ಮಹಾಮನೆಯ ಆವರಣದಲ್ಲಿ ನಿರ್ಮಾಣವಾಗುತ್ತಲಿರುವ ಕೆಲವು ಕಟ್ಟಡಗಳು ಇವು.

1. **ಬಸವ ಮಂಟಪ :** ಶ್ರೀ ಗುರು ಬಸವಣ್ಣನವರ ದಿವ್ಯ ಮೂರ್ತಿಯನ್ನು ಒಳಗೊಂಡ ದಿವ್ಯಾಲಯ. ಅಮೃತ ಶಿಲೆಯ ಮೂರ್ತಿ, ಅಮೃತ ಶಿಲೆಯ ಗರ್ಭಗುಡಿಯನ್ನು, ಸುಂದರವಾದ ಗೋಪುರವನ್ನು ಹೊಂದಲಿದೆ. ಅಂದಾಜು ವೆಚ್ಚ 3 ಲಕ್ಷ ರೂಗಳು.

2. **ಅಕ್ಕಮಹಾದೇವಿ ಶಿವಯೋಗ ಮಂಟಪ :** ಅಂತರ್ಮುಖಿಗಳಾಗಿ ಕುಳಿತು ಪೂಜೆ–ಶಿವಯೋಗ ಸಾಧನೆ ಮಾಡಬೇಕೆನ್ನುವವರಿಗಾಗಿ ರಚನೆಗೊಳ್ಳುತ್ತಿರುವ ಧ್ಯಾನ ಮಂಟಪ. ಧ್ಯಾನಕ್ಕೆ ಶ್ರೀಮೂರ್ತಿಯಾಗಿರುವ ಅಭಯ ಮುದ್ರೆಯ ಬಸವಣ್ಣನವರ ಮೂರ್ತಿ, ಅಮೃತ ಶಿಲೆಯ ಮಂಟಪ, ಅಮೃತ ಶಿಲೆಯ ನೆಲಹಾಸನ್ನು ಹೊಂದಲಿರುವ ಈ ಶಿವಯೋಗ ಮಂಟಪದ ಅಂದಾಜು ವೆಚ್ಚ 5 ಲಕ್ಷ ರೂಗಳು.

3. **ಅಲ್ಲಮ ಪ್ರಭು ಪ್ರವಚನ ಮಂಟಪ :** ದಿನ ನಿತ್ಯದ ಪ್ರಾರ್ಥನೆ, ಚಿಂತನೆ, ಅನುಭವ ಗೋಷ್ಠಿ ನಡೆಸಲಿಕ್ಕಾಗಿ ವಿಶಾಲವಾದ ಮಂದಿರ. ಅಂದಾಜು ವೆಚ್ಚ 2 ಲಕ್ಷ ರೂಗಳು.

4. **ಶರಣ ಮಂಟಪಗಳು :** ಶ್ರೀ ಗುರು ಬಸವಣ್ಣನವರ ಮಂಟಪದ ಸುತ್ತಲೂ, ಭವ್ಯಾಕಾರದಲ್ಲಿ ಒಂದೂ ಕಾಲು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದೊಂದು ಮಂಟಪದಂತೆ, ಅಲ್ಲಮಪ್ರಭು, ಸಿದ್ಧರಾಮೇಶ್ವರ, ಚನ್ನಬಸವಣ್ಣ, ಅಕ್ಕ ಮಹಾದೇವಿಯವರ ನಾಲ್ಕು ಮಂಟಪಗಳು, ಸರ್ವಜ್ಞಮೂರ್ತಿ, ಷಣ್ಮುಖ ಶಿವಯೋಗಿಗಳು, ಮನ್ಮಥಸ್ವಾಮಿ, ಡೋಹರ ಕಕ್ಕಯ್ಯ, ನೀಲಾಂಬಿಕಾದೇವಿ, ಅಕ್ಕನಾಗಲಾಂಬಿಕೆ, ಹಡಪದ ಅಪ್ಪಣ್ಣ, ನಿಜಗುಣ ಶಿವಯೋಗಿಗಳು, ಮಡಿವಾಳ ಮಾಚಿದೇವರು, ಹರಳಯ್ಯ-ಕಲ್ಯಾಣಮ್ಮ, ತೋಂಟದ ಸಿದ್ಧಲಿಂಗೇಶ್ವರರು ಪಾಲ್ಕುರಿಕೆ ಸೋಮನಾಥ ಇವರ 12 ಮಂಟಪಗಳು, ಮೂರ್ತಿಸಹಿತವಾಗಿ ಒಂದೊಂದೂ 50 ಸಾವಿರ ರೂಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿವೆ. ಕಮಲದಾಕೃತಿಯ ವಚನ ಮಂಟಪ, ಸುಜ್ಞಾನ ಮಂಟಪಗಳು ಈ ಆವರಣದಲ್ಲಿ ರೂಪುಗೊಳ್ಳುತ್ತಿವೆ.

5. **ಅಕ್ಕನಾಗಲಾಂಬಿಕಾ ಅತಿಥಿ ಗೃಹ :**
ವಿವಿಧ ಸ್ಥಳಗಳಿಂದ ಕೂಡಲ ಸಂಗಮಕ್ಕೆ ಯಾತ್ರಾರ್ಥಿಗಳಾಗಿ ಬರುವ ಜನರಿಗಾಗಿ ವಸತಿ ಗೃಹ. 3 ಅಂತಸ್ತಿನ ಈ ಕಟ್ಟಡವು ಪ್ರತಿ ಅಂತಸ್ತಿನಲ್ಲಿಯೂ 12 ಸಿಂಗಲ್ ಕೋಣೆ, 2 ಡಬ್ಬಲ್ ಕೋಣೆಗಳನ್ನು ಹೊಂದಲಿದೆ. ಒಟ್ಟು 42 ಕೋಣೆಗಳ ಒಂದು ಸಮುಚ್ಚಯ.

6. **ಚನ್ನಬಸವೇಶ್ವರ ಜ್ಞಾನ ಮಂಟಪ :**
ವಿಶ್ವಕಲ್ಯಾಣ ಮಿಷನ್, ಬಸವ ಧರ್ಮ ಪೀಠ ಸಂಸ್ಥೆಗಳೇ ಅಲ್ಲದೆ ಶರಣ ಸಾಹಿತ್ಯ ಕುರಿತು ಇನ್ನಿತರ ಸಂಘ-ಸಂಸ್ಥೆಗಳು ಪ್ರಕಟಿಸಿರುವ ಪುಸ್ತಕ, ಫೋಟೋ ಕೆಸೆಟ್ಟು ಮುಂತಾದುವುಗಳ ಮಾರಾಟ ಮಳಿಗೆ. ಇದಕ್ಕೆ ಹೊಂದಿಕೊಂಡು ಒಂದು ಸ್ವಾಗತ ಕೊಠಡಿ ಮತ್ತು ಚಿಕ್ಕ ಉಪಾಹಾರ ಗೃಹ.

7. **ನೀಲಾಂಬಿಕಾದೇವಿ ದಾಸೋಹ ಮಂಟಪ :**
ಈಗಾಗಲೇ 1990 ರ ಬಸವ ಜಯಂತಿಯಿಂದ ನಿತ್ಯದಾಸೋಹದ ಕಾರ್ಯಕ್ರಮ ಆರಂಭಿಸಲಾಗಿದ್ದರೂ, ಇನ್ನೂ ಪ್ರತ್ಯೇಕವಾದ ಪಾಕ ಗೃಹ, ಪ್ರಸಾದ ನಿಲಯ ವಿಲ್ಲದ ಕಾರಣ, ಈ ದಾಸೋಹ ಮಂಟಪವನ್ನು 25 ಲಕ್ಷ ರೂ ವೆಚ್ಚದಲ್ಲಿ ಕಟ್ಟಿಸುವ ಯೋಜನೆ ಇದೆ.

---

ಸಾಗಿ ಬಸವನು ಬಂದು ಸೇರಿದನು ಕಲ್ಯಾಣ
ಬೇಗದಲಿ ಕಟ್ಟಿ ಅನುಭಾವ । ಮಂಟಪದ
ಕೂಗು ಕೇಳುತಲಿ ಜನವೆದ್ದು ॥



8. **ಶ್ರೀ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ :**
ಧರ್ಮಬೋಧಕರು (ಗುರುಮೂರ್ತಿ) ಮತ್ತು ಕ್ರಿಯಾಮೂರ್ತಿಗಳನ್ನು ತರಬೇತಿ ಮಾಡುವ ವಿದ್ಯಾಲಯ.

9. **ಕಲ್ಯಾಣ ಮಂಟಪ :** ಸುಕ್ಷೇತ್ರದಲ್ಲಿ ಮದುವೆ ಮಾಡಲು, ಮಾಡಿಸಿಕೊಳ್ಳಲು ಇಷ್ಟಪಡುವವರಿಗಾಗಿ ಕಲ್ಯಾಣ ಮಂಟಪ.

10. **ವಸ್ತು ಸಂಗ್ರಹಾಲಯ :** ಶರಣಧರ್ಮ-ಸಂಸ್ಕೃತಿಗೆ, ಶರಣರ ಬದುಕಿಗೆ ಸಂಬಂಧ ಪಟ್ಟಂತೆ ವಸ್ತುಗಳನ್ನು, ಭಾವಚಿತ್ರಗಳನ್ನು, ತಾಡವೋಲೆಗಳನ್ನು ಸಂಗ್ರಹಿಸಿ ಪ್ರದರ್ಶಿಸುವ ವಸ್ತು ಸಂಗ್ರಹಾಲಯ.

11. **ಶರಣೋದ್ಯಾನ :** ವಿವಿಧ ಶರಣರುಗಳ ಪೂರ್ಣಾಕಾರದ ಸಿಮೆಂಟ್ ಪುತ್ಥಳಿ ಗಳನ್ನು ಸುಂದರ ಉದ್ಯಾನವನದಲ್ಲಿ ಅಲ್ಲಲ್ಲೇ ನಿಲ್ಲಿಸುವುದು.
ಈ ಮುಂತಾಗಿ ಇನ್ನೂ ಹಲವು ಯೋಜನೆಗಳಿವೆ.

12. **ಶ್ರೀಬಸವೇಶ್ವರ ಬಯಲ ಪುತ್ಥಳಿ :** ಕನಿಷ್ಠ 63ಅಡಿ ಎತ್ತರದ, ಬಸವಣ್ಣ ನವರು ಅಭಯ ಹಸ್ತದಿಂದ ಆಶೀರ್ವದಿಸುವ ಒಂದು ಭವ್ಯ ಮೂರ್ತಿ.

## ಕೈಗೆತ್ತಿಕೊಂಡಿರುವ ಯೋಜನೆಗಳು

ಬಸವ ಧರ್ಮ ಪೀಠವು ಹೀಗೆ ಹಲವಾರು ಯೋಜನೆಗಳನ್ನು ರೂಪಿಸಿದ್ದು, ಈಗಾಗಲೇ ಅನೇಕವನ್ನು ಕಾರ್ಯಗತಗೊಳಿಸಿದೆ, ಗೊಳಿಸುತ್ತಲಿದೆ.

ಈ ಸ್ಥಳದಲ್ಲಿ, ಜುಲೈ 1987 ರಲ್ಲಿ ಜಮೀನು ಖರೀದಿಸಿದ ನಂತರ ಕೆಲವಾರು ಕಾರ್ಯಗಳನ್ನು ಮಾಡಲಾಗಿದೆ. ಕಾರ್ಯಾಲಯ ಕಟ್ಟಡ, ಚನ್ನಬಸವೇಶ್ವರ ಜ್ಞಾನ ಮಂಟಪ (BooK Stall), ಒಂದು ವಾಸಗೃಹ, ಬಯಲು ರಂಗಮಂದಿರ, ಬೃಹದಾಕಾರದ ನೀರಿನ ತೊಟ್ಟಿ, ಕೆಲವು ಸ್ನಾನಗೃಹ-ಶೌಚಗೃಹಗಳು; ಇವುಗಳನ್ನೆಲ್ಲ ದಾನಿಗಳ ನೆರವಿನಿಂದ ಕಟ್ಟಿಸಲಾಗಿದೆ. ಕೊಳವೆ ಭಾವಿಯೊಂದನ್ನು ತೋಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಹತ್ತು ಎಕರೆ ಆವರಣಕ್ಕೆ ಕಲ್ಲಿನ ಕಂಭಗಳನ್ನು ನಟ್ಟು ತಂತಿ ಬೇಲಿ ಹಾಕಿ ಮಾವು, ತೆಂಗು, ಹುಣಸೆ, ಬೇವು ಮುಂತಾದ ಗಿಡಗಳನ್ನು ನೆಡಲಾಗಿದೆ.

## ದಾನಿಗಳಿಗೆ ಅವಕಾಶ.

1. ದಾನಿಗಳು ಪೂರ್ತಿಯಾಗಿ ಒಂದೊಂದು ಕಟ್ಟಡಕ್ಕೆ ನಿಗದಿ ಪಡಿಸಿದಂತೆ ಧನ ಸಹಾಯ ಮಾಡಬಹುದು. ಅದಕ್ಕೆ ಪೂರ್ತಿಯಾಗಿ ಆವರ ಒಬ್ಬರ ಹೆಸರನ್ನೇ ಶಿಲಾಫಲಕದಲ್ಲಿ ಕೆತ್ತಿಸಿ ಹಾಕಲಾಗುವುದು.

2. ಇಲ್ಲವೇ 1ಲಕ್ಷ ರೂಪಾಯಿ, 50,000-00 ಹೀಗೆ ಕೊಟ್ಟರೆ ಶಿಲಾ ಫಲಕದಲ್ಲಿ ದಾನಿಗಳ ಹೆಸರು,ಕೊಟ್ಟ ಮೊತ್ತ ಇವುಗಳನ್ನು ಕಾಣಿಸಲಾಗುವುದು.

3. **ಅತಿಥಿಗೃಹದಲ್ಲಿ ಕಟ್ಟಿಸುವ ಕೋಣೆಗಳಿಗೆ**
ಡಬ್ಬಲ್ ಕೋಣೆ (ಶೌಚಾಲಯ-ಸ್ನಾನಗೃಹಗಳೊಡನೆ) ಗೆ 60.000-00ರೂ
ಸಿಂಗಲ್ ಕೋಣೆ ( ,, ,, ) 40.000-00 ರೂ
ಒಂದು ವೇಳೆ ಇಬ್ಬರು ದಾನಿಗಳು ಪರಸ್ಪರ ಹಂಚಿಕೊಂಡು ಕೊಡುವುದಾದರೆ ಡಬ್ಬಲ್ ಕೋಣೆಗೆ ಒಬ್ಬೊಬ್ಬರು 30,000-00ರೂ ಮತ್ತು ಸಿಂಗಲ್ ಕೋಣೆಗೆ ಒಬ್ಬೊಬ್ಬರು 20,000-00. ಹೀಗೆ ಇಬ್ಬರು ಕೊಟ್ಟಲ್ಲಿ, ಉಭಯತರ ಹೆಸರನ್ನೂ ಕೋಣೆಯ ಹೊರಗೆ ಶಿಲಾಫಲಕ ಮಾಡಿ ಹಾಕಿಸಲಾಗುವುದು.

[**ವಿಶೇಷ ಸೂಚನೆ :** ದಾನಿಗಳಿಗೆ ತಾವು ಬಂದು ಉಳಿಯುವ ಕೋಣೆಗಳಲ್ಲಿ ಏನಾದರೂ ವಿಶೇಷ ಸೌಲಭ್ಯ ಬೇಕಾಗಿದ್ದರೆ ಪ್ರತ್ಯೇಕವಾಗಿ ಹಣಕೊಟ್ಟು ಅದನ್ನು ಕಲ್ಪಿಸಿಕೊಳ್ಳಬಹುದು. ಯಾವ ಸೌಲಭ್ಯ ಬೇಕು ಎಂಬ ಬಗ್ಗೆ ಮೊದಲೇ ಸಂಸ್ಥೆಯ ನೇತಾರರೊಡನೆ ಚರ್ಚಿಸಿ, ಒಪ್ಪಿಗೆ ಪಡೆದುಕೊಳ್ಳಬೇಕು.]

4. **ಕಟ್ಟಡ ನಿಧಿಗೆ ನೆರವು;** ಸಾಕಷ್ಟು ಕಟ್ಟಡದ ಕೆಲಸ ನಡೆಯುತ್ತಿರುವುದರಿಂದ ದಾನಿಗಳು ತಮ್ಮ ತಮ್ಮ ಶಕ್ತ್ಯಾನುಸಾರ 501ರೂಗಳಿಂದ 15000 ರೂಗಳ ವರೆಗೆ ಎಷ್ಟಾದರೂ ಕೊಡಬಹುದು. 5000-00 (ಐದು ಸಾವಿರ)ರೂಗಳಿಂದ ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾಫಲಕದಲ್ಲಿ ಬರೆಸಿ, ಹಾಕಿಸಲಾಗುವುದು.

5. **ಶರಣರ ಮಂಟಪ ಯೋಜನೆ :** ಕೇಂದ್ರದಲ್ಲಿ ಶ್ರೀಗುರು ಬಸವಣ್ಣನವರ ದಿವ್ಯಾಲಯವನ್ನು ಹೊಂದಿ, ಸುತ್ತಲೂ 106 ಅಡಿ ಅಗಲ, 106 ಅಡಿ ಉದ್ದದ ಆವರಣದಲ್ಲಿ 16 ಜನ ಶರಣರ ಸುಂದರ ಮಂಟಪಗಳನ್ನು ಮೂರ್ತಿಗಳನ್ನು ಹೊಂದಿರುವ ಈ ಸಮುಚ್ಚಯ ಪೂರ್ತಿಗೊಳ್ಳಲು ಒಟ್ಟು 8 ಲಕ್ಷ ರೂಪಾಯಿ ಅಗತ್ಯವಿದೆ. ಈಗಾಗಲೇ ಮಂಟಪಗಳು ಪೂರ್ಣಗೊಂಡಿವೆ. ಈ ಆವರಣಕ್ಕೆ ಸುತ್ತಲೂ ಗ್ರಿಲ್, ನೆಲದ ಮೇಲೆ ಸುಂದರವಾದ ಬೇತಮ್ ಚರ್ಲಾ ಆಂಧ್ರ ಮಾರ್ಬಲ್, ಅಂದವಾದ ಮೆಟ್ಟಿಲು, ವಿದ್ಯುದೀಕರಣ ಮಾಡಲು ಇನ್ನೂ 3 ಲಕ್ಷ ರೂಪಾಯಿಗಳ ಆಗತ್ಯವಿದೆ. ಆದ್ದರಿಂದ ದಾನಿಗಳು ತಮ್ಮ ಶಕ್ತ್ಯಾನುಸಾರ 5000, 10,000 ಹೀಗೆಲ್ಲ ಕೊಡಲು ಮುಂದೆ ಬಂದರೆ ಕೆಲಸವು ಬೇಗನೆ ಪೂರ್ತಿಗೊಳ್ಳಲು ಸಾಧ್ಯವಾಗುತ್ತದೆ.

6. ಅಕ್ಕಮಹಾದೇವಿ ಶಿವಯೋಗ ಮಂಟಪವು ಶಬ್ದ ರಹಿತ 20 ಅಡಿ×35ಅಡಿಯ ವಿಶಾಲವಾದ ಕೋಣೆಯಾಗಿ 5ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಸಿದ್ಧವಾಗುತ್ತಿದೆ. ಇಬ್ಬರು ದಾನಿಗಳು ತಲಾ ಒಂದೊಂದು ಲಕ್ಷದಂತೆ ಕೊಟ್ಟಿರುವರಾದರೂ, ಸಂಗಮರವರಿ (ಅಮೃತ ಶಿಲೆ) ಕಲ್ಲಿನ ನೆಲ ಹಾಸನ್ನು ಹಾಕಲು, ಸುಂದರ ಹೂವುಗಳನ್ನು ಬಿಡಿಸಿ, ಅಂದವಾದ ದೀಪಗಳಿಂದ ಅಲಂಕರಿಸಲು ಇನ್ನೂ 3 ಲಕ್ಷ ರೂಪಾಯಿಗಳ ಅಗತ್ಯವಿದೆ.



ಆದ್ದರಿಂದ ದಾನಿಗಳು ಸ್ವಯಂ ಪ್ರೇರಣೆಯ ಕೊಡುಗೆ ನೀಡಲು ಮುಂದೆ ಬರಬೇಕು.

## ಇನ್ನಿತರ ರೀತಿಯಲ್ಲಿ ನೆರವು

1. **ಸಾಹಿತ್ಯ ಪ್ರಕಟಣೆ :** ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮತ್ತು ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಬರೆದ, ಬರೆಯುವ ಪುಸ್ತಕಗಳು ಅತ್ಯಂತ ಉಪಯುಕ್ತವೂ ವಿಚಾರ ಶೀಲವೂ ಆಗಿರುವುದರಿಂದ ಅವುಗಳ ಪ್ರಕಟಣೆಗೆ ನೆರವು ನೀಡುವ ಪವಿತ್ರ ಕಾರ್ಯಕ್ಕೆ ಅವಕಾಶವಿದೆ.

ಪುಸ್ತಕದ ಗಾತ್ರ ಮತ್ತು ಪ್ರತಿಗಳ ಸಂಖ್ಯೆಯ ಮೇಲೆ ಹಣದ ಮೊತ್ತವನ್ನು ನಿರ್ಧರಿಸಲಾಗುವುದು. 3,000 ರೂಗಳಿಂದ, 10,000 ರೂಗಳವರೆಗೆ ಗ್ರಂಥ ಪ್ರಕಟಣೆಗೆ ನೆರವು ನೀಡಲು ಸಾಧ್ಯವಿದೆ.

2. **ದಾಸೋಹ ನಿಧಿ ಯೋಜನೆ ;** ಕೂಡಲ ಸಂಗಮವು ಬಹಳ ಮಹತ್ವಪೂರ್ಣ ಕ್ಷೇತ್ರವಾದರೂ, ಅದು ಯಾವುದೇ ರೀತಿ ಅಭಿವೃದ್ಧಿ ಕಾಣದಂತಿದೆ. ಕ್ಷೇತ್ರಕ್ಕೆ ಬರುವವರು ಎದುರಿಸುವ ಮುಖ್ಯ ಸಮಸ್ಯೆ, ಊಟ ಮತ್ತು ವಸತಿಯದು. ವಸತಿ ಸಮಸ್ಯೆ ನಿವಾರಿಸಲು ಅಕ್ಕನಾಗಲಾಂಬಿಕಾ ಅತಿಥಿ ಗೃಹವನ್ನೇ ಅಲ್ಲದೆ ಬಸ್ಸುಗಳಲ್ಲಿ ಬಂದ ಪ್ರವಾಸಿಕರು ಒಟ್ಟೊಟ್ಟಾಗಿ ಇರಲು ವಿಶಾಲವಾದ ಹಾಲ್‌ಗಳನ್ನೂ ಕಟ್ಟಿಸುವ ಯೋಜನೆ ಇದೆ. ನಿತ್ಯ ದಾಸೋಹವನ್ನು 1990ರ ಬಸವ ಜಯಂತಿಯಂದು ಆರಂಭಿಸಲಾಗಿದ್ದು, ದಾನಿಗಳಿಂದ 1111-00 ರೂ ಸಂಗ್ರಹಿಸಿ, ಇದರ ಬಡ್ಡಿಯನ್ನು ವಿನಿಯೋಗಿಸಿ, ವರ್ಷದಲ್ಲಿ ಒಂದು ದಿವಸ (ದಾನಿಗಳು ಸೂಚಿಸಿದ ದಿನಾಂಕ) ಆ ದಾನಿಗಳ ಹೆಸರಿನಲ್ಲಿ ಪ್ರಸಾದ ದಾಸೋಹ ಏರ್ಪಡಿಸಲಾಗುವುದು. ದಾನಿಗಳು ತಮ್ಮ ಹಿರಿಯರ ಹೆಸರಿನಲ್ಲಿ, ಅಥವಾ ಹುಟ್ಟು, ಲಿಂಗೈಕ್ಯದಿನ, ವಿವಾಹದ ದಿನ– ಹೀಗೆ ತಮಗೆ ಇಷ್ಟವಾದ ದಿನದಂದು ದಾಸೋಹ ಮಾಡಲು ಸೂಚಿಸಬಹುದು. ಶರಣ ಧರ್ಮಕ್ಕೆ ಸಂಬಂಧಿಸಿದ ಹಬ್ಬ-ಹುಣ್ಣಿಮೆ, ಶರಣರ ಜಯಂತಿಗಳಂದೂ ದಾಸೋಹ ಏರ್ಪಡಿಸಬಹುದು.

3. **ಪೂಜಾನಿಧಿ :** 501-00 ರೂಗಳನ್ನು ಪೂಜಾನಿಧಿಗೆಂದು ಕೊಟ್ಟರೆ ದಾನಿಗಳು ಸೂಚಿಸಿದ ಒಂದು ದಿನದಂದು ಪೂಜೆಯನ್ನು ಏರ್ಪಡಿಸಲಾಗುವುದು. ಇಲ್ಲವೇ ಒಂದು ಕ್ರಮಸಂಖ್ಯೆಯಪ್ರಕಾರ ದಿನವನ್ನು ನಾವೇ ಆಯ್ಕೆಮಾಡುತ್ತೇವೆ.

15 ದಿವಸಗಳ ಮೊದಲೇ ಸೂಚನಾಪತ್ರ ಕಳಿಸಿ, ದಾನಿಗಳ ಹೆಸರಿನಲ್ಲಿ ದಾಸೋಹ ಮತ್ತು ಪೂಜೆ ಇರುವ ದಿನವನ್ನು ತಿಳಿಸಲಾಗುವುದು. ದಾನಿಗಳು ಬಂದು ಭಾಗಿಯಾಗಬಹುದು. ಒಂದು ವೇಳೆ ಬರಲು ಆಗದೆ ಇದ್ದರೆ ನಂತರ ಅವರಿಗೆ ಪ್ರಸಾದವನ್ನು ಅಂಚೆಯಲ್ಲಿ ಕಳಿಸಿಕೊಡಲಾಗುವುದು.

ಬಸವ ಧರ್ಮ ಪೀಠದ ಆಜೀವ ಸದಸ್ಯತ್ವ 1001-00 ರೂ. ಇಂತಹವರ ಯಾದಿಯನ್ನು ಇರಿಸಿಕೊಂಡು ಅವರಿಗೆ ವಿಶೇಷ ಕಾರ್ಯಕ್ರಮಗಳ ಆಹ್ವಾನ ಪತ್ರ ಕಳಿಸಿಕೊಡಲಾಗುವುದು.

4. **ಧರ್ಮ ಗ್ರಂಥ ನಿಧಿ :** ಧರ್ಮಗ್ರಂಥ ಪ್ರಕಟಣೆಗಾಗಿ ನಿಧಿಯನ್ನು ಸಂಗ್ರಹಿಸುತ್ತಿದ್ದು, 1001 ರೂ ಮತ್ತು ಅದರ ಮೇಲೆ ಎಷ್ಟು ಮೊತ್ತವನ್ನಾದರೂ ದೇಣಿಗೆಯನ್ನಾಗಿ ಕೊಡಬಹುದು. ಗ್ರಂಥವು ಪ್ರಕಟವಾಗುತ್ತಲೇ ಉಚಿತ ಪ್ರತಿಯೊಂದನ್ನು ದಾನಿಗಳಿಗೆ ಕಳಿಸಿಕೊಡಲಾಗುವುದು ಮತ್ತು ಯಾರು ಆರ್ಥಿಕವಾಗಿ ದುರ್ಬಲರಿದ್ದು ಗ್ರಂಥವನ್ನು ಕೊಳ್ಳಲು ಅಸಮರ್ಥರಿರುವರೋ ಅವರಿಗೆ, ರಿಯಾಯಿತಿ ಬೆಲೆಯಲ್ಲಿ ಪುಸ್ತಕ ಕೊಡಲು, ದಾನಿಗಳ ಹಣವನ್ನು ಬಳಸಿಕೊಳ್ಳಲಾಗುವುದು.

5. **ಧರ್ಮ ಪ್ರಚಾರಕರ ನಿಧಿ :** ಪರಮ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿ ಅವರು, ಧರ್ಮ ಪ್ರಚಾರಕ **(Missionary)** ವ್ಯವಸ್ಥೆಯೊಂದನ್ನು ಆರಂಭಿಸಿದ ಮಹಂತರು. ಶ್ರೀಗುರು ಬಸವಣ್ಣನವರು ಅಂಥದೊಂದು ವ್ಯವಸ್ಥೆ ರೂಪಿಸಿದರು ; ನಂತರ ಎಡೆಯೂರು ಸಿದ್ಧಲಿಂಗೇಶ್ವರರು ಹಲವಾರು ಜನ ಚರ ಜಂಗಮ ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿದರು. ಇದೀಗ ಪೂಜ್ಯರು ಪ್ರೇರಣೆಯನ್ನು ನೀಡಿ ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿದ್ದಾರೆ. ಈ ಕಾರ್ಯವು ನಿರಂತರವಾಗಿ ಸಾಗಬೇಕೆಂದು ಯೋಜಿಸಿ, ಪೂಜ್ಯ ಗುರೂಜಿಯವರ ಅಭಿಮಾನಿಗಳು ಧರ್ಮ ಪ್ರಚಾರಕ ನಿಧಿಯೊಂದನ್ನು ಸ್ಥಾಪಿಸಿದ್ದಾರೆ. ಬಸವ ಧರ್ಮ ಪೀಠದ ಅಂಗವಾಗಿ ಇರುವ ಈ ವಿಭಾಗವು ನಿಧಿಯಿಂದ ಬರುವ ಬಡ್ಡಿಯ ಹಣದ ಪ್ರಮಾಣದ ಮೇಲೆ ಮಾಸಿಕವಾಗಿ ಒಬ್ಬರಿಗೆ 500/- ರೂ ಗೌರವ ಧನವನ್ನು ಕೊಡುವಂತೆ, ಪ್ರಚಾರಕರನ್ನು ನೇಮಕ ಮಾಡಿಕೊಳ್ಳುವುದು. ಪೂರ್ಣಾವಧಿ ಕಾರ್ಯ ಕರ್ತರನ್ನೇ ಅಲ್ಲದೆ ಅಲ್ಪಾವಧಿ, ಅರ್ಧಾವಧಿ ಕಾರ್ಯಕರ್ತರನ್ನು ನೇಮಿಸಿಕೊಂಡು ಪ್ರಚಾರ ಕಾರ್ಯಕ್ಕೆ ತೊಡಗಿಸುವುದು. ಇದರಿಂದ ಧರ್ಮಾಭಿಮಾನ, ಪ್ರತಿಭೆ, ಧರ್ಮ ಪ್ರಚಾರದ ಕಳಕಳಿಯುಳ್ಳ ಬಡ ಯುವಕರಿಗೂ ಸಹಾಯವಾಗುವುದು. ಈ ನಿಧಿಗೆ ಕೊಡುವ ದಾನಿಗಳು 1001/- ರೂದಂತೆ ಕೊಡಬಹುದು.

6. **ಶರಣ ಮೇಳದ ದಾಸೋಹಕ್ಕೆ ಪುದುವಟ್ಟು ;** ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಪ್ರತಿವರ್ಷದ ಬಸವ ಕ್ರಾಂತಿ ದಿನ (ಮಕರ ಸಂಕ್ರಾಂತಿ)ದ ಅಂಗವಾಗಿ ಬೃಹತ್ ಶರಣ-ಮೇಳವು 1988 ರಲ್ಲಿ ಆರಂಭವಾಗಿ ನಡೆಯುತ್ತಲಿದೆಯಷ್ಟೆ. ಪ್ರತಿವರ್ಷದ ಜನವರಿ ತಿಂಗಳಲ್ಲಿ 13, 14 ಮತ್ತು 15 ರಂದು ಲಕ್ಷಾಂತರ ಜನಕ್ಕೆ ಅನ್ನ ದಾಸೋಹ ಮತ್ತು ಜ್ಞಾನದಾಸೋಹವು ನಡೆಯುತ್ತದೆ. ಈ ಪವಿತ್ರ ಶರಣ ಮೇಳ ಮುಸ್ಲೀಮ್ ಧರ್ಮದ ಹಜ್‌ನಂತೆ, ಜಗತ್ತಿನ ವಿವಿಧ ಕಡೆಗಳಲ್ಲಿರುವ ಬಸವ ತತ್ತ್ವಾನುಯಾಯಿಗಳನ್ನು ಒಂದೆಡೆಗೆ ಸಂಗಮಿಸುವಂತೆ ಮಾಡುತ್ತದೆ. ಇಂಥ ಪವಿತ್ರ ಸಮಾವೇಶದ ಕಾಲದಲ್ಲಿ ತಮ್ಮ ದೇಣಿಗೆಯೂ ಸೇರಲಿ ಎಂಬ



ಉದಾರಮನೋಭಾವದ ದಾಸೋಹಿಗಳು 5000/, 10,000/ ರೂ ಹೀಗೆ ಪುದುವಟ್ಟು (ಫಿಕ್ಸೆಡ್ ಡಿಪಾಸಿಟ್) ಇಡಲು ಕೊಟ್ಟಲ್ಲಿ, ಆ ಹಣವನ್ನು ಬ್ಯಾಂಕಿನಲ್ಲಿ ಇಟ್ಟು ಅದರ ಬಡ್ಡಿಯನ್ನು ಶರಣ ಮೇಳದಲ್ಲಿ ಬಳಸಲಾಗುವುದು. ವಾರ್ಷಿಕವಾಗಿ ಎಷ್ಟು ದೇಣಿಗೆ ಕೊಡಬೇಕು ಎಂಬ ಅಪೇಕ್ಷೆ ಇರುವುದೋ ಆ ಪ್ರಕಾರ ಪುದುವಟ್ಟಿನ ಮೊತ್ತವನ್ನು ದಾನಿಗಳು ನಿರ್ಧರಿಸಬಹುದು.

7. **ವಸ್ತುಗಳ ರೂಪದಲ್ಲಿ :** ಬಸವ ಧರ್ಮ ಪೀಠದಲ್ಲಿ ನಡೆಯುವ ನಿತ್ಯ ದಾಸೋಹಕ್ಕೆ, ಶರಣ ಮೇಳದಲ್ಲಿ ನಡೆಯುವ ದಾಸೋಹಕ್ಕೆ ಉಪಯೋಗವಾಗುವಂತೆ ದವಸ-ಧಾನ್ಯ, ಪಾತ್ರೆ-ಪಡುಗ, ಗಡಿಯಾರ, ಫ್ಯಾನ್ ಮುಂತಾದ ಉಪಯುಕ್ತ ಸಾಮಗ್ರಿಗಳನ್ನು ಕಾಣಿಕೆಯಾಗಿ ಸದ್ಭಕ್ತರು ಕೊಡಬಹುದು.

## ಶರಣ ಮೇಳಕ್ಕಾಗಿ ಮುಡಿಪು

ಪ್ರತಿವರ್ಷವೂ ಬಸವ ಕ್ರಾಂತಿ ದಿನದಂದು (ಜನವರಿ 14, ಮಕರ ಸಂಕ್ರಾಂತಿ) ನಡೆಯುವ ಶರಣ ಮೇಳದಲ್ಲಿ ಭಾಗಿಗಳಾಗುವುದು ಎಲ್ಲರ ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಮುಸ್ಲೀಮರಿಗೆ ಮೆಕ್ಕಾ, ಕ್ರೈಸ್ತರಿಗೆ ಜೆರೂಸಲೆಮ್, ಬೌದ್ಧರಿಗೆ ಗಂಯೆ, ಸಿಖ್ಖರಿಗೆ ಅಮೃತಸರ ಪವಿತ್ರ ಕ್ಷೇತ್ರವಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಕೂಡಲಸಂಗಮವೇ ಧರ್ಮಕ್ಷೇತ್ರ. ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಭೂಮಿ, ಐಕ್ಯಸ್ಥಾನ ಕೂಡಲ ಸಂಗಮದಲ್ಲಿ ವರ್ಷಕ್ಕೊಮ್ಮೆ ಬಸವ ತತ್ತ್ವಾನುಯಾಯಿಗಳು ಸೇರಲೆಂದೇ ರೂಪುಗೊಂಡಿದೆ ಚಾರಿತ್ರಿಕ ಶರಣ ಮೇಳ. ಪ್ರತಿಯೊಬ್ಬರೂ ಬರಲು ಆರ್ಥಿಕ ಅನುಕೂಲತೆಯಾಗಲೆಂದು "ಶರಣ ಮೇಳ"ಕ್ಕಾಗಿ ಮುಡಿಪು ತೆಗೆದಿಡಿ. ನೀವು ಬಂದು ಭಾಗಿಗಳಾಗಲು ಈ ನಿಧಿ ಸಹಕಾರಿಯಾಗುತ್ತದೆ. ಅಕಸ್ಮಾತ್ ನಿಮಗೆ ಬರಲು ಅನುಕೂಲವಾಗದಿದ್ದರೆ ನಿಮ್ಮ ಮುಡುಪಿನ ಹಣವನ್ನು ಡಿ.ಡಿ./ಎಂ.ಓ. ಮೂಲಕ ಕಳಿಸಿಕೊಟ್ಟು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಲು ಅನುಕೂಲವಾಗುವುದು.

## ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್

ಕೂಡಲ ಸಂಗಮ ಸುಕ್ಷೇತ್ರವನ್ನು ಸರ್ವಾಂಗೀಣವಾಗಿ ಬೆಳೆಸುವ ಸಂಕಲ್ಪ ಹೊತ್ತು ಕಾರ್ಯ ಮಾಡುತ್ತಿರುವ ಬಸವ ಧರ್ಮ ಪೀಠಕ್ಕೆ ಸಂಪೂರ್ಣವಾಗಿ ಸಹಕಾರ ಹಸ್ತ ನೀಡಲೆಂದು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸ್ಥಾಪನೆಗೊಂಡಿದ್ದು, ಇದು ಕೆಳಕಂಡ ಸದಸ್ಯರನ್ನು ಹೊಂದಿದೆ.

1. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
2. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ.
3. ಶರಣ. ಎನ್. ಪುಟ್ಟರುದ್ರಪ್ಪ.
4. ಶರಣ. ನಿಜಗುಣಾನಂದ ಸ್ವಾಮಿ.
5. ಶರಣ. ಚನ್ನಬಸವಾನಂದ ಸ್ವಾಮಿ.

ಈ ಸಂಸ್ಥೆಯು ಬೆಂಗಳೂರಿನ ಬಸವ ಮಂಟಪ ಮತ್ತು ಕೂಡಲ ಸಂಗಮದ ಮಹಾಮನೆ ಆವರಣದಲ್ಲಿ ತನ್ನ ಕಾರ್ಯಾಲಯ ಹೊಂದಿದೆ.

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿಗೆ, 80 G ಇನ್ ಕಮ್ ಟ್ಯಾಕ್ಸ್ ರಿಯಾಯಿತಿ ಸೌಲಭ್ಯ ದೊರಕಿದ್ದು, ದಾನಿಗಳು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು. ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ : (✆ 325335)**
ಬಸವ ಮಂಟಪ, 2035, ಎರಡನೆಯ ಬ್ಲಾಕು,
20 ನೆಯ ಮುಖ್ಯ ರಸ್ತೆ, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560010

**ಬಸವ ಧರ್ಮೀಯನ ಕರ್ತವ್ಯ**

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

## ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ

# ಶರಣ ಮೇಳ

ಪ್ರತಿ ವರ್ಷದ ಜನವರಿ
13, 14 ಮತ್ತು 15 ರಂದು

**ಶರಣ ಬಂಧುಗಳೇ.**

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನ ಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಕ್ರಾಂತಿ ದಿನ(ಮಕರಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು, ಜನವರಿ 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಪವಿತ್ರ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

**✻ ಶರಣರ ಬರವೆಮಗೆ ಪ್ರಾಣಜೀವಾಳ ✻**

**ಬೆಂಗಳೂರು ವಿಳಾಸ :**
ಬಸವ ಮಂಟಪ, 2035,
2ನೇ ಬ್ಲಾಕು, ಕಾರ್ಡ್ ರಸ್ತೆ,
ರಾಜಾಜಿನಗರ. ಬೆಂಗಳೂರು-560010

**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ.
ಕೂಡಲ ಸಂಗಮ-587115.
ತಾ-ಹುನಗುಂದ, ಜಿಲ್ಲೆ- ಬಿಜಾಪುರ

## ಬಸವ (ಲಿಂಗಾಯತ) ಧರ್ಮದ

### ಆರು ಸೂತ್ರಗಳು

1. ಧರ್ಮ ಗುರು - ಮಂತ್ರಪುರುಷ ಬಸವಣ್ಣನವರು
2. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ.
3. ಧರ್ಮ ಲಾಂಛನ - ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗ.
4. ಧರ್ಮ ಕ್ಷೇತ್ರ - ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ.
5. ಧರ್ಮ ಧ್ವಜ - ಬಸವ ಮಂತ್ರಸಹಿತ ಷಟ್ಕೋನ ಧ್ವಜ.
6. ಧರ್ಮದ ಧ್ಯೇಯ - ಜಾತಿವರ್ಣವರ್ಗರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

### ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂ ಪ್ರೇರಣೆಯ ಕೊಡುಗೆ ನೀಡುವುದು ಅವಶ್ಯವಿದೆ.

1. ಮಹಾಪೋಷಕರು 5000 ರೂ ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ. ಮತ್ತು ಮೇಲೆ ಕೊಟ್ಟವರು.
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ -125 ರೂ. (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100ರೂ. ,,

**ವಿ. ಸೂ. :** ಶರಣ ಮೇಳ ಉತ್ಸವ ಸಮಿತಿಯಿಂದ ನಿಯೋಜಿಸಲ್ಪಟ್ಟ ಪ್ರತಿನಿಧಿಗಳ ಬಳಿ ಹಣ ಕೊಟ್ಟವರು, ಶರಣ ಮೇಳಕ್ಕೆ ಬರುವಾಗ ತಪ್ಪದೆ ಹಣಕೊಟ್ಟ ಪಾವತಿ ತಂದು, ಕೌಂಟರಿನಲ್ಲಿ ತೋರಿಸಿ ನಿಗದಿಪಡಿಸಿದ ಸೌಲಭ್ಯ ಪಡೆಯಬೇಕು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚಕ್ಕುಗಳನ್ನು, "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು ಅಥವಾ ಪ್ರಚಾರ ಕಾಲದಲ್ಲಿ ನೇರವಾಗಿ ಹಣ ಸಲ್ಲಿಸಬಹುದು.



## ದಾಸೋಹದ ಮಹತ್ವ

ತೊಟ್ಟು ಬಿಡದನ್ನಕ್ಕ ಮತ್ತಾಬುಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ
ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು. -ಆಯ್ದಕ್ಕಿ ಲಕ್ಕಮ್ಮ

ಒಂದು ಹಣ್ಣು ಎಲ್ಲಿಯವರೆಗೆ ತೊಟ್ಟಿನ ಮೂಲಕ ಗಿಡಕ್ಕೆ ಅಂಟಿಕೊಂಡಿರುವುದೋ ಅಲ್ಲಿಯವರೆಗೆ ಅದು ಗಿಡದ ಹಿತಚಿಂತನೆಯನ್ನು ಮಾಡಲೇಬೇಕು. ಗಿಡಕ್ಕೆ ಏನಾದರೇನು ಎಂದುಬಿಟ್ಟರೆ ತನ್ನ ಅವನತಿಯೂ ಅದರಲ್ಲಿದೆ ಎಂಬ ತಿಳುವಳಿಕೆ ಇಲ್ಲವೆಂದೇ ಅರ್ಥ ! ಹಾಗೆ ವ್ಯಕ್ತಿ ಎನ್ನುವ ಹಣ್ಣು ಮರ್ತ್ಯ ಎನ್ನುವ ಗಿಡಕ್ಕೆ ಧರ್ಮ ಎನ್ನುವ ತೊಟ್ಟಿನ ಸಹಾಯದಿಂದ ಅಂಟಿಕೊಂಡಿರುವ ಕಾರಣ ವ್ಯಕ್ತಿಯು ಮರ್ತ್ಯದ ಹಿತಚಿಂತನೆ ಮಾಡಲೇಬೇಕು. ಮರ್ತ್ಯದ ಬದುಕು ಮಂಗಲಮಯವಾಗಬೇಕಾದರೆ ಸತ್ಯ ಶರಣರ ಸಂಗದಲ್ಲಿದ್ದು, ಜಂಗಮ ಸೇವೆಯನ್ನು ಮಾಡುತ್ತಿರಬೇಕು. ದಾಸೋಹದ ಮಹತ್ವವನ್ನರಿತು ನೀವು ಕೊಡುವುದಲ್ಲದೆ ನಿಮ್ಮ ಬಂಧುಬಳಗ, ಮಿತ್ರರು, ಆತ್ಮೀಯರುಗಳಿಂದಲೂ ಉದಾರವಾದ ಧನ ಸಹಾಯ ಮಾಡಿಸಲು ಪ್ರಯತ್ನಿಸಿರಿ.

### ಧರ್ಮಕ್ಷೇತ್ರದ ಅಭಿವೃದ್ಧಿಗಾಗಿ ಮುಡಿಪು

ಇಂದು ನಮ್ಮ-ನಿಮ್ಮೆಲ್ಲರ ಮೇಲೆ ಬಹುದೊಡ್ಡ ಹೊಣೆ ಬಿದ್ದಿದೆ. ಜಗತ್ತಿಗೆ ಸಮತಾವಾದದ ಸಂದೇಶವನ್ನು ಸಾರಿದ, 'ದೇವನೊಬ್ಬನೇ ತಂದೆ, ಮನುಜರೆಲ್ಲರು ಒಂದೇ', 'ಅರಿದೊಡೆ ಶರಣ, ಮರೆದೊಡೆ ಮಾನವ' ಎಂದು ಅರ್ಹತಾ ಪರಂಪರೆಯನ್ನೇ ಎತ್ತಿ ಹಿಡಿದ ಬಸವ ಸಂಸ್ಕೃತಿಯ ಬೀಡನ್ನಾಗಿ ಕೂಡಲ ಸಂಗಮವನ್ನಿಂದು ಬೆಳೆಸಿ, ರೂಪಿಸಿ ಭಾವೀಜನಾಂಗಕ್ಕೆ ಕೊಟ್ಟು ಹೋಗಬೇಕಾಗಿದೆ. ಈ ಮಹಾನ್ ಕಾರ್ಯಕ್ಕಾಗಿ ನಮ್ಮನ್ನು ನಾವಿಂದು ಸಮರ್ಪಿಸಿಕೊಂಡು ದುಡಿಯಬೇಕಾಗಿದೆ. ಅದಕ್ಕಾಗಿ ನಿಮ್ಮೆಲ್ಲರ ಮನೆಗಳ ಪೂಜಾ ಮಂದಿರಗಳಲ್ಲಿ, ಟ್ರೆಷರಿಗಳಲ್ಲಿ ಮುಡುಪಿನ ಡಬ್ಬಿ ಸ್ಥಾನವನ್ನಲಂಕರಿಸಲಿ. ನಿಮಗೆ ಅನುಕೂಲವಾದಷ್ಟನ್ನು ಭಕ್ತಿ ತುಂಬಿ ಮೀಸಲಿರಿಸಿ, ಮುಡುಪಿನ ಪೆಟ್ಟಿಗೆಯಲ್ಲಿ ಶೇಖರಿಸಿರಿ. ತನು ದಾಸೋಹ, ಮನ ದಾಸೋಹ, ಧನ ದಾಸೋಹ ಈ ಮೂರರಿಂದಲೂ ಸಂಗಮಕ್ಷೇತ್ರವನ್ನು ಕಟ್ಟೋಣ ; ಶರಣ ತತ್ತ್ವ ಸೌರಭ ಇಲ್ಲಿಂದ ಹರಡುವಂತೆ ಶ್ರಮಿಸೋಣ. ನಿಮ್ಮ ಮುಡುಪಿನ ಹಣವನ್ನು ಸೂಕ್ತ ಸಮಯದಲ್ಲಿ ಸಮರ್ಪಿಸಲು ನಿಶ್ಚಯಿಸಿ, ಸಂಗ್ರಹಿಸಲು ಆರಂಭಿಸಿರಿ.

ಮನಿಯಾರ್ಡರ್, ಚೆಕ್ಕು, ಡ್ರಾಫ್ಟ್ ಯಾವುದೇ ರೀತಿಯಲ್ಲಿ ಕಳಿಸಬೇಕೆನ್ನುವವರು ಕೊಡಲಾಗಿರುವ ವಿಳಾಸಕ್ಕೆ ಕಳಿಸಿಕೊಡಿರಿ.

ಮೊದಲ ಪುಟದಲ್ಲಿ ಸರ್ವಜ್ಞನ ತ್ರಿಪದಿಯೊಂದನ್ನು ಉಲ್ಲೇಖಿಸಲಾಗಿದೆ. ಇದು ಸರ್ವಜ್ಞನ, ಹೀಗಾಗಬೇಕೆಂಬ ಬಯಕೆಯ ಮಾತೋ ಅಥವಾ ಹೀಗಾಗುವುದೆಂಬ ಭವಿಷ್ಯ ನುಡಿಯೋ, ಅದನ್ನು ನನಸು ಮಾಡಲು ಒಟ್ಟಾಗಿ ದುಡಿಯೋಣ ಬನ್ನಿ.

ದಿ. 25-5-1991 —**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.**
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ.

# ವಿಶ್ವಧರ್ಮ ಪ್ರವಚನ

**ಭಾಗ–೨, ಕಂತು-೬**

**ಅಧ್ಯಾಯ–೨೦ ಕಾಯಕ-ದಾಸೋಹ**

**—ಮಾತಾಜಿ**

(ಜೂನ್ 1991 ರ ಸಂಚಿಕೆಯಿಂದ ಮುಂದುವರಿದುದು)

## ದಾಸೋಹಿಗಳಲ್ಲಿ ಹಲವು ಬಗೆ

ಅನೇಕ ಜನ ಶ್ರೀಮಂತರು ಕೆಲವರು ಕಡುಲೋಭಿಗಳಾಗಿದ್ದರೆ, ಮತ್ತೆ ಕೆಲವರು ತಮ್ಮ ಸುಖಕ್ಕಾಗಿ ವಿಪರೀತ ವ್ಯಯಿಸುವರು; ಒಳ್ಳೆಯ ಕಾರ್ಯಕ್ಕೆ ನೀಡರು. ಈ ಉಭಯತರಿಗೂ ದಾನ-ದಾಸೋಹ ಮಾಡುವುದರಿಂದ ಆಗುವ ಪ್ರಯೋಜನ, ಸಮಾಧಾನ-ಸಂತೃಪ್ತಿಗಳ ಕಲ್ಪನೆಯೇ ಇರದು. ಮೊದಲನೆಯ ವ್ಯಕ್ತಿ ಸಂಪತ್ತನ್ನು ಮುಚ್ಚಿ ಮುಚ್ಚಿ ತಾನೂ ಬಳಸದೆ ಇತರರಿಗೂ ಕೊಡದೆ ಇಟ್ಟುಕೊಳ್ಳುತ್ತಾನೆ. ಎರಡನೆಯವನು ತನಗಾಗಿ, ತನ್ನ ಮಡದಿ ಮಕ್ಕಳು ಬಂಧು-ಬಾಂಧವರಿಗಾಗಿ ಎಷ್ಟು ಬೇಕಾದರೂ ಖರ್ಚು ಮಾಡುತ್ತಾನೆ. ಆದರೆ ಇನ್ನಿತರರಿಗೆ, ಧರ್ಮಕಾರ್ಯಕ್ಕೆ, ಬಡ-ಬಗ್ಗರು, ದೀನದಲಿತರಿಗಾಗಿ ಎಷ್ಟೂ ಖರ್ಚು ಮಾಡುವುದಿಲ್ಲ.

ಉಂಬಾಗ ಇಲ್ಲೆನ್ನ ಉಡುವಾಗ ಇಲ್ಲೆನ್ನ
ಬಂಧುಗಳು ಬಂದಾಗ ಇಲ್ಲೆನ್ನ
ಲಿಂಗಕ್ಕೆ ಇಲ್ಲೆಂಬ ಜಂಗಮಕ್ಕೆ ಇಲ್ಲೆಂಬ
ಬಂದ ಪುರಾತರಿಗೆ ಇಲ್ಲೆಂಬ
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ
ದೇವರಿಗೆ ಹೆಣ ಬಿಟ್ಟಿ ಹೇಳಿತ್ತೇ ಕೂಡಲ ಸಂಗಮದೇವಾ

ಎಂಬ ವಚನವು ತಾನು, ತನ್ನ ಮಡದಿ ಮಕ್ಕಳು ತಿನ್ನುಣ್ಣಲು, ವೈಭವದ ಜೀವನ ನಡೆಸಲು ಎಷ್ಟು ಬೇಕಾದರೂ ಖರ್ಚು ಮಾಡುವರು. ಸಮಾಜಕ್ಕೆ ಮಾತ್ರ ಇಲ್ಲವೆನ್ನು-ವರು ಎಂಬುದನ್ನು ಮಾರ್ಮಿಕವಾಗಿ ಬಣ್ಣಿಸುತ್ತದೆ.

ಇನ್ನೊಂದು ತರದ ದಾನಿಗಳೆಂದರೆ ಯಾವುದಾದರೂ ಒತ್ತಡಕ್ಕೊ, ದಾಕ್ಷಿಣ್ಯಕ್ಕೊ ಕಟ್ಟುಬಿದ್ದು, ಕಡೆಗೆ ಕೀರ್ತಿವಾರ್ತೆಯ ಆಸೆಗೋ ವಾಗ್ದಾನ ಮಾಡುತ್ತಾರೆ. ಆ ವಾಗ್ದಾನ ಮಾಡಲು ಪಡೆಯುವವರನ್ನು ಸುತ್ತಿಸುತ್ತಾರೆ, ವಾಗ್ದಾನ ಮಾಡಿಯಾದ ಮೇಲೆ ಹಣವನ್ನು ಕೊಡಲು ಸುತ್ತಿಸುತ್ತಾರೆ. ಸಮಾಜಕ್ಕಾಗಿ ದುಡಿಯುವ ಸಂಘ-ಸಂಸ್ಥೆಯ ಪದಾಧಿಕಾರಿಗಳು ಸಣ್ಣ ಮುಖ ಮಾಡಿಕೊಂಡು ಸುತ್ತಿ ಸುತ್ತಿ ಬಸವಳಿಯ-ಬೇಕು, ಆಗ ಕೊಟ್ಟವನಿಗೆ ( ಕೆಟ್ಟ ) ಸಮಾಧಾನ.



ಇನ್ನು ಅತಿಶ್ರೇಷ್ಠ ದಾಸೋಹಿ ಎಂದರೆ, ತಾನು ಗಳಿಸಿದ ಆದಾಯದಲ್ಲಿ ಒಂದು ಪಾಲನ್ನು ಸ್ವಯಂ ಇಚ್ಛೆಯಿಂದ ತೆಗೆದು ಇಟ್ಟುಬಿಡುವನು. ಅದನ್ನು ಸ್ವಯಂ ಪ್ರೇರಣೆಯಿಂದ ಒಳ್ಳೆಯ ಕಾರ್ಯಗಳಿಗೆ ಸಲ್ಲಿಸುವನು. ಕೊಡುವುದರಲ್ಲೂ ಸಂತೋಷ, ಸೌಜನ್ಯ ತುಂಬಿ ತುಳುಕುವುದು.

ಒಂದು ತೆಂಗಿನ ಗಿಡವಿದೆ, ಅದು ಕಾಯನ್ನು ಬಿಡುವುದು. ಕಾಯಿಯು ಪಕ್ವ-ವಾಗಿ ಗಿಟುಕಾಗುವುದು. ಕಾಯಿ ಪೂರ್ಣವಾಗಿ ಮಾಗುತ್ತಿದ್ದಂತೆಯೇ ತೊಟ್ಟು ಕಳಚಿ ತಾನೇ ಬೀಳುವುದು. ಹಾಗೆ, ದಾನಿಗಳು ಸ್ವಯಂ ಇಚ್ಛೆಯಿಂದ ಎಲ್ಲಿ ಒಳ್ಳೆಯ ಕಾರ್ಯ ನಡೆಯುವುದೋ ಅಲ್ಲಿಗೆ ತಾವಾಗಿ ಮುಂದಾಗಿ ಸಹಾಯ ಮಾಡುವರು. ಇವರು ಉತ್ತಮ ದರ್ಜೆಯವರು.

ಮೋಡವಿದೆ; ಅದು ನೀರನ್ನು ತುಂಬಿಕೊಂಡಿರುತ್ತದೆ. ಆ ನೀರನ್ನು ಸುರಿಸಲೇ ಬೇಕು. ಆದರೆ ಹಾಗೆ ಸುರಿಸುವ ಮುನ್ನ ಸಿಡಿಸಿಡಿ ಫಡಫಡ ಎಂದು ಗುಡುಗಿ-ಮಿಂಚಿ ನೀರನ್ನು ಕೊಡುವುದು. ಹಾಗೆ ಕೆಲವು ದಾನಿಗಳು ಕೊಡುವ ಮುನ್ನ ಸಿಟ್ಟಿಗೆದ್ದು ಬೈದು ನಾಲ್ಕಾರು ಭಾರಿ ತಿರುಗಿಸಿ ಅಂತೂ ಕೊಡುವರು.

ಹಸುವಿದೆ ಅದರ ಕೆಚ್ಚಲಿನಲ್ಲಿ ಹಾಲು ತುಂಬಿರುತ್ತದೆ. ಯಾರಾದರೂ ಹಿಂಡಿಕೊಳ್ಳದ ಹೊರತು ಅದಕ್ಕೆ ಕೊಡಲು ಆಗುವುದಿಲ್ಲ. ಹಾಗೆ ಹಿಂಡಿಕೊಳ್ಳುವಾಗ ಅದು ಸಂತೋಷದಿಂದ ನಿಂತು, ಹಾಲನ್ನು ನೀಡುತ್ತಿರುತ್ತದೆ.

ಹಲಸಿನ ಗಿಡವಿದೆ ; ಅದರಲ್ಲಿ ಹಣ್ಣು ಬಿಟ್ಟು ಮಾಗಿ ಸುವಾಸನೆ ಕೊಡುವುದು. ಹಣ್ಣಿನ ವಾಸನೆ ಸುತ್ತ ಮುತ್ತ ಹರಡಿರುವುದು. ಆದರೂ ಅದು ತಾನಾಗಿ ಉದುರಿ-ಸದು. ಯಾರಾದರೂ ಹೋಗಿ ಕಿತ್ತುಕೊಳ್ಳಲೇ ಬೇಕು. ಹಾಗೆಯೇ ಕೆಲವು ದಾನಿಗಳು ಹಸುವಿನಂತೆ, ಹಲಸಿನ ಗಿಡದಂತೆ ಬಂದು ಕೇಳುವವರೆಗೂ ದಾನ ಮಾಡುವುದಿಲ್ಲ. ಯಾರಾದರೂ ಕೇಳಿದಾಗ ಸಂತೋಷದಿಂದ ಕೊಡುವರು.

ಇನ್ನು ಓರೆಯಾವು ಎಂದು ಇರುತ್ತದೆ. ಅದರ ಕೆಚ್ಚಲಿನಲ್ಲಿ ಹಾಲು ಇರುತ್ತದೆ. ಹಾಲು ಹಾಗೆಯೇ ಕೆಚ್ಚಲಲ್ಲಿ ಉಳಿದರೆ ಅದಕ್ಕೆ ಬಾಧೆಯೂ ಆಗುತ್ತಿರುತ್ತದೆ. ಆದರೂ ಅದು ಹಾಲು ಕೊಡದೆ ಸತಾಯಿಸುತ್ತದೆ, ಹಿಂಡಿಕೊಳ್ಳಲು ಬಂದವರನ್ನು ಸುತ್ತಾಡಿಸಿ, ಗೋಳುಗುಟ್ಟಿಸುತ್ತದೆ. ಹಾಗೆಯೇ ಕೆಲವು ಶ್ರೀಮಂತರಿರುತ್ತಾರೆ. ಗೊಡ್ಡಾಕಳ ಬಳಿ ಯಾರೂ ಹಾಲು ಹಿಂಡಿಕೊಳ್ಳಲು ಹೇಗೆ ಹೋಗರೋ ಹಾಗೆಯೇ ಬಡವರ ಬಳಿ ಯಾರೂ ದೇಣಿಗೆ ಕೇಳಲು ಹೋಗರು. ಆದರೆ ಈ ಶ್ರೀಮಂತರನ್ನು ಅವರ ವ್ಯವಹಾರ, ಬಂಗಲೆ, ಮುಂತಾದುವನ್ನು ನೋಡಿ ಸಂಘ-ಸಂಸ್ಥೆಗಳವರು ಹೋಗುತ್ತಾರೆ. ಆ ಶ್ರೀಮಂತರೋ ಸುತ್ತಾಡಿಸಿ, ಆಸೆ ಹುಟ್ಟಿಸಿ, ಹಲವಾರು ಬಾರಿ ಬರುವಂತೆ ಮಾಡಿ, ಕಡೆಗೆ ನಿರಾಕರಿಸುವರು. ಇಂಥವರು ನಂತರ ಮಾಡುವುದು ದಂಡಕ್ಕೆ. ಅಧಿಕಾರಿಗಳಿಗೆ ಹೆದರಿ ಕೊಡುವರು ಇಲ್ಲವೇ ಕೋರ್ಟು ಕಛೇರಿಗಳಿಗೆ ದಂಡ ಕೊಡಲು ಹಣ ವ್ಯಯ

ಮಾಡುವರು. ಇಂಥ ಸ್ವಾರ್ಥಿಗಳು ಸಮಾಜ ಜೀವಿಗಳೇ ಅಲ್ಲ ; ಸಿರಿವಂತಿಕೆಯ ದೌಲತ್ತು ಇರುವಾಗ ಮದಾಂಧರಾಗಿ ವರ್ತಿಸುವರು.

ಅಂಥವರನ್ನು ಕುರಿತು ಅಕ್ಕಮಹಾದೇವಿ ಹೀಗೆ ಹೇಳುವಳು !

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ ?

ಗಿಡವು ನೆಪಮಾತ್ರಕ್ಕೆ ಇದ್ದು, ಅದು ನೆಳಲನ್ನು ಕೊಡದಂತಿದ್ದರೆ ಅದರಿಂದ ಪ್ರಯೋಜನ ಹೇಗಿಲ್ಲವೋ, ಹಸುವು ಮನೆಯಲ್ಲಿದೆ ಎಂಬುದಷ್ಟೇ ಸತ್ಯ ; ಅದು ಹಾಲನ್ನು ಕೊಡದಂಥದಾಗಿದ್ದರೆ ಹೇಗೆ ಉಪಯೋಗವಿಲ್ಲವೋ ಹಾಗೆ, ಶ್ರೀಮಂತಿಕೆ ಇದ್ದು ಅವನಲ್ಲಿ ದಯಾಗುಣವಿಲ್ಲದಿದ್ದರೆ, ಲೋಭಿಯೂ, ಸ್ವಾರ್ಥಿಯೂ ಆದ ಶ್ರೀಮಂತನಿಂದ ಸಮಾಜಕ್ಕಾಗಲೀ, ಧರ್ಮಕ್ಕಾಗಲೀ, ಬಡವರಿಗಾಗಲೀ ಏನೂ ಪ್ರಯೋಜನವಾಗದು.

## ಯಾವ ಯಾವ ರೀತಿ ದಾಸೋಹ ಮಾಡಬಹುದು ?

ದಾಸೋಹ ಎಂದರೆ ಕೇವಲ ಅನ್ನದಾಸೋಹವೇ? ಅನ್ನದಾಸೋಹ, ವಿದ್ಯಾದಾಸೋಹ, ಜ್ಞಾನದಾಸೋಹ, ಧನದಾಸೋಹ, ಇವೆಲ್ಲವನ್ನೂ ಮಾಡಬಹುದು.

1. ಹಸಿದವರಿಗೆ ಉಣ್ಣಿಸುವುದು, ಅನ್ನದಾಸೋಹ ನಡೆಯುವಲ್ಲಿಗೆ ಧನ ಸಹಾಯ ಮಾಡುವುದು, ಬೆಳೆದ ದವಸಧಾನ್ಯ ಕೊಡುವುದು, ಬಡ ವಿದ್ಯಾರ್ಥಿಗಳಿಗೆ ಊಟಕ್ಕೆ ಕೊಡುವುದು ಮುಂತಾದ್ದು ಅನ್ನದಾಸೋಹ.
2. ಬಡ ವಿದ್ಯಾರ್ಥಿಗಳಿಗೆ ಶುಲ್ಕ ಕೊಟ್ಟು ನೆರವಾಗುವುದು, ಅವರಿಗೆ ಓದಲು ಪುಸ್ತಕ, ಉಡಲು ಬಟ್ಟೆ ಕೊಡಿಸುವುದು ಮುಂತಾದ್ದು ವಿದ್ಯಾದಾಸೋಹ.
3. ಧಾರ್ಮಿಕ ಸಾಹಿತ್ಯಗಳ ಮುದ್ರಣಕ್ಕೆ ನೆರವು; ತಮ್ಮ ಮನೆಯಲ್ಲಿ ನಡೆಯುವ ವಿಶೇಷ ಧಾರ್ಮಿಕ ಸಮಾರಂಭಗಳಲ್ಲಿ ಧಾರ್ಮಿಕ ಸಾಹಿತ್ಯದ ಪುಟ್ಟ ಪುಟ್ಟ ಪುಸ್ತಕ ಮಾಡಿ ನೆನಪಿನ ಕಾಣಿಕೆಯಾಗಿ ಕೊಡುವುದು. ಧಾರ್ಮಿಕ ಸಾಹಿತ್ಯ ಪ್ರಕಟಿಸುವ ಧರ್ಮ ಸಂಸ್ಥೆಗಳಿಗೆ ಮುಕ್ತ ಮನದಿಂದ ಕೊಡುವುದು.
4. ಧರ್ಮಸಂಸ್ಥೆಗಳು ಕಟ್ಟಿಸುವ ಕಟ್ಟಡಗಳಿಗೆ, ಧರ್ಮಕ್ಷೇತ್ರಗಳ ಅಭಿವೃದ್ಧಿಗೆ, ಸಮಾಜ ಸೇವೆ ಮಾಡಲು ನಿಂತ ತ್ಯಾಗಿಗಳಿಗೆ, ಯೋಗಿಗಳಿಗೆ ಕೊಡುವುದೆಲ್ಲ ಧನ ಸಹಾಯ. ಒಬ್ಬ ವ್ಯಕ್ತಿ ವಿದ್ಯೆ, ಬುದ್ಧಿ, ಹಣ, ಅಧಿಕಾರಗಳಲ್ಲಿ ಮೇಲೇರಿದಂತೆಲ್ಲ, ತಾನು ಬೇರೆ ಯಾವುದೋ ಲೋಕದವನು ಎಂದು ಭಾವಿಸದೆ, ಪರಮಾತ್ಮನು ಒಲಿದು ಕೊಟ್ಟುದು ಇದು ಎಂಬ ಭಾವನೆಯಿಂದ ಕೃತಜ್ಞನಾಗಿ ಎಲ್ಲರೊಡನೆ ಪ್ರೀತಿಯಿಂದ ಒಡನಾಡುತ್ತ, ತನ್ನ ಕೈಲಾದಷ್ಟು ನೆರವನ್ನು ಇನ್ನೊಬ್ಬರಿಗೆ ನೀಡುತ್ತ ಹೋಗಬೇಕು. ಆಗ ಮಾತ್ರ ಪರಸ್ಪರ ಪೂರಕವಾಗಿ ಸಮಾಜದಲ್ಲಿ ಜನರು ಬಾಳಲು ಸಾಧ್ಯ.



## ತ್ರಿವಿಧ ದಾಸೋಹ

ಗುರು ಬಸವಣ್ಣನವರು ತಮ್ಮ ವಚನಗಳಲ್ಲಿ ಒತ್ತಿ ಒತ್ತಿ ಹೇಳಿರುವ ಸಂಗತಿ "ತ್ರಿವಿಧ ದಾಸೋಹ."

* ಆಡಿದಡೇನು, ಹಾಡಿದಡೇನು ಓದಿದಡೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ?
ಆಡದೆ ನವಿಲು, ಹಾಡದೆ ತಂತಿ, ಓದದೆ ಗಿಳಿ ?
ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ. (ಬ.ಷ.ವ ೨೦೭)

ವಚನಗಳನ್ನು, ಧರ್ಮಶಾಸ್ತ್ರಗಳನ್ನು ಅಭಿನಯ ರೂಪದಲ್ಲಿ ತೋರಿಸಿ ಮೆಚ್ಚುಗೆ ಪಡೆಯಬಹುದು, ಸ್ವರಬದ್ಧವಾಗಿ ಹಾಡಿ ಎಲ್ಲರಿಗೂ ಕರ್ಣಾನಂದ ಉಂಟು ಮಾಡಬಹುದು, ಚೆನ್ನಾಗಿ ಓದಬಹುದು, ಬರೆಯಬಹುದು. ಇವೆಲ್ಲ ಇದ್ದು ಏನು ಪ್ರಯೋಜನ, ತ್ರಿವಿಧ ದಾಸೋಹವಿಲ್ಲದಿದ್ದರೆ. ನವಿಲೂ ಚೆನ್ನಾಗಿ ನರ್ತಿಸಿ, ಅಭಿನಯ ನೀಡುವುದು, ವೀಣೆ-ತಂಬೂರಿಗಳಲ್ಲಿರುವ ತಂತಿಗಳೂ ಚೆನ್ನಾಗಿ ಹಾಡುತ್ತವೆ. ಗಿಳಿಯೂ ಧರ್ಮಶಾಸ್ತ್ರವನ್ನು ಓದುತ್ತದೆ, ಏನು ಪ್ರಯೋಜನ? ಇವಾವೂ ತಾವು ಮಾಡುವ ಕ್ರಿಯೆಯ ಮರ್ಮವನ್ನು ತಿಳಿದಿರುವುದಿಲ್ಲ, ಅವುಗಳಲ್ಲಿ ಭಕ್ತಿಯು ಇರುವುದಿಲ್ಲ.

* ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು
ತನು-ಮನ-ಧನವ ಸವೆಸಲೇಬೇಕು.
ನಮ್ಮ ಕೂಡಲ ಸಂಗನ ಶರಣರಿಗೆ ಅಂಜಲೇ ಬೇಕು. (ಬ.ಷ.ವ ೨೦೪)

"ಪರಮಾತ್ಮನು ಎಲ್ಲರಲ್ಲಿಯೂ ಚೈತನ್ಯ ಸ್ವರೂಪನಾಗಿ ನೆಲೆಸಿದ್ದಾನೆ." ಎಂದು ಬರೀ ಮಾತನಾಡಿದರೆ ಸಾಲದು ; ಆ ಪರಮಾತ್ಮನ ಅಂಶಕ್ಕೆ ಎಷ್ಟಾದರೂ ಒಳ್ಳೆಯದು, ಉಪಕಾರ ಮಾಡಲೇಬೇಕು."

* ತನು-ಮನ-ಧನವ ಹಿಂದಿಕ್ಕಿಕೊಂಡು
ಮಾತಿನ ಬಣಬೆಯ, ಒಳಲೊಟೆಯ ನುಡಿವರು, ನೀವೆಲ್ಲ ಕೇಳಿರಿ
ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ
ಗುರಿಯ ತಾಗಬಲ್ಲದೆ ?
ಮಾಯಾಪಾಶ ಹಿಂಗಿ, ಮನದ ಗಂಟು ಬಿಡದನ್ನಕ್ಕ
ಕೂಡಲ ಸಂಗಮದೇವನೆಂತೊಲಿವನಯ್ಯಾ ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಗಾದೆ ಇದೆ, "ನನಗೂ-ನಿನಗೂ ಎಷ್ಟೇ ವಿಶ್ವಾಸ ಇರಲಿ ಮೀನಿನ ಬುಟ್ಟಿಗೆ ಮಾತ್ರ ಕೈಹಾಕಬೇಡ." ಎಂದು. ಹಾಗೆ, ತನು-ಮನ-ಧನ ಸ್ವಲ್ಪವೂ ಸವೆಯದೆ, ಬರಿ ತತ್ತ್ವಶಾಸ್ತ್ರ, ಆತ್ಮಜ್ಞಾನ, ದಯೆ, ಮಾನವೀಯತೆ ಕುರಿತು ಮಾತಿನ ಬಣವೆಯ ಏರಿಸುವ ಜನರು ಇರುತ್ತಾರೆ. ಇವರುಗಳ ಮಾತು-ಬರಹ ತಲಹಿಲ್ಲದ ಕೋಲಿನಂತೆ. ಕೋಲು, ಬಾಣ ಯಾವುದೇ ಇರಲಿ, ಅದಕ್ಕೆ ತಲೆ ಇರಬೇಕು. ಇಲ್ಲವಾದರೆ ಗುರಿಯ ಕಡೆಗೆ ಎಸೆಯಲು ಸಾಧ್ಯವಿಲ್ಲ. ಬರೀ ನಾನು, ನನ್ನದು, ನನಗೆ

ಎಂಬ ಮಮಕಾರ ಹಿಂಗಿ, ಮನಸ್ಸಿನ ಸ್ವಾರ್ಥದ ಗಂಟು ಬಿಡದ ಹೊರತು ದೇವರು ಒಲಿಯನು.

ಇದಕ್ಕೆ ಉತ್ತಮ ಉದಾಹರಣೆ ಕೆಲವು ಬುದ್ಧಿ ಜೀವಿಗಳು ಎಂದು ಭಾವಿಸಿಕೊಂಡವರು. ಅವರು ಧರ್ಮ-ಸಮಾಜಗಳಿಗಾಗಿ ತನುವಿನಿಂದಲೂ ದುಡಿಯರು, ಮನದಿಂದಲೂ ದುಡಿಯರು, ಧನವನ್ನಂತೂ ಎಂದು ವ್ಯಯಿಸರು ಸಾಮಾನ್ಯವಾಗಿ ಕೆಲವು ಜನರಂತೂ "ಸಾಹಿತ್ಯವನ್ನು ಕೊಂಡು ಓದಬೇಕು, ಸಾಹಿತಿ ಬದುಕಬೇಕು" ಎಂದು ನಿರರ್ಗಳವಾಗಿ ಮಾತಾಡುತ್ತಾರೆ. ತಾವು ಎಂದೂ ಪುಸ್ತಕ ಕೊಂಡು ಓದುವುದಿಲ್ಲ; ಯಾರಾದರೂ ಉಚಿತ ಪ್ರತಿ ಕೊಟ್ಟರೇನೇ ಓದುವುದು. ಇದಕ್ಕೊಂದು ಅತ್ಯುತ್ತಮ ಉದಾಹರಣೆ ಕೊಡುತ್ತೇನೆ. ಮೈಸೂರಿನಿಂದ ಪ್ರಕಟವಾಗುವ ಶುದ್ಧ ಸಾಹಿತ್ಯ- "ಗ್ರಂಥಲೋಕ" ಎನ್ನುವ ಪತ್ರಿಕೆ ಆರ್ಥಿಕ ದುಃಸ್ಥಿತಿ ಎದುರಿಸುವ ಬಗ್ಗೆ, ಆದ್ದರಿಂದ ಅದನ್ನು ನಿಲ್ಲಿಸಬೇಕು ಎಂಬ ದುಃಖಪೂರ್ಣ ಅಭಿಪ್ರಾಯದೊಡನೆ ಅನೇಕ ಪತ್ರಗಳು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟವಾದವು. ಓದಿ ನನಗಂತೂ ಸಖೇದಾಶ್ಚರ್ಯವಾಯಿತು. ಏಕೆಂದರೆ ಇಂದು ಕನ್ನಡಕ್ಕಾಗಿ ಪ್ರಾಣಕೊಡುವ ಭಾಷಣಕಾರರು ಎಷ್ಟೊಂದು ಜನ ಹುಟ್ಟಿದ್ದಾರೆ. ಅವರ ಪ್ರಾಣ ಅಮೂಲ್ಯ ; ಅವರ ದೇಹದಲ್ಲಿಯೇ ಅದಿರಲಿ, ಜೇಬಿನಿಂದ ತೆಗೆದು ಚಂದಾ ಕೊಟ್ಟು ಪತ್ರಿಕೆಯನ್ನು ಉಳಿಸಿಕೊಳ್ಳಬಹುದಲ್ಲವೆ ? ವಿಶ್ವವಿದ್ಯಾಲಯದಿಂದ ಹೊರಬಂದು, ಉಪನ್ಯಾಸಕರು, ಪ್ರಾಧ್ಯಾಪಕರು ಆಗಿರುವವರು, ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷಾಪ್ರವೀಣರಾಗಿರುವವರೆಲ್ಲ ಚಂದಾ ತುಂಬಿದರೆ, ಆ ಪತ್ರಿಕೆ ಉಳಿಯದೆ? ಶುದ್ಧ ಸಾಹಿತ್ಯಿಕ ಪತ್ರಿಕೆ ಜನಸಾಮಾನ್ಯರಿಗೆ, ಅದೇ ವರ್ಗದಲ್ಲಿ ಬರುವ ಕನ್ನಡ ಅಧ್ಯಾಪಕರುಗಳ ಪತ್ನಿಯರಿಗೆ (ಅವರಿಗೆ ಏನಿದ್ದರೂ ಕಥೆಗಳಿಂದ ತುಂಬಿತುಳುಕುವ ಪತ್ರಿಕೆಗಳು, ಕಾದಂಬರಿಗಳೂ ಬೇಕು) ಉಪಯುಕ್ತವೆನಿಸಿದು. ಆದ್ದರಿಂದ ಅವರು ಕೊಳ್ಳರು. ಕನ್ನಡದ ಉಪನ್ಯಾಸಕರಾಗಿ ಅದರಿಂದಲೇ ಉಪಜೀವನ ಮಾಡುವವರಿಗೆ, ಅಂಥದೊಂದು ಪತ್ರಿಕೆ ಉಳಿಸಿಕೊಳ್ಳಲು ಆಗದೆ ? ಅನೇಕರು ಸಮತೆ-ಮಾನವೀಯತೆ ಬಗ್ಗೆ ದೊಡ್ಡ ಗ್ರಂಥಗಳನ್ನು ಬರೆಯುತ್ತಾರೆ, ಅನುವಾದಿಸುತ್ತಾರೆ, ಅವರ ಜೀವನದಲ್ಲಿ ಒಂದಾದರೂ ಮಾನವೀಯ ಕೆಲಸಗಳನ್ನು ಮಾಡಿದ ದಾಖಲೆ ಇರದು. ಅಂಥ ಕೆಲಸಗಳನ್ನು ಮಾಡುವವರೆಲ್ಲ ಸಾಮಾನ್ಯವಾಗಿ, ಜಗತ್ತಿನ ದುಃಖ ಕಂಡು ಮರುಗುವ ಭಾವುಕ ಜನರು.

ಆದ್ದರಿಂದಲೇ ಬಸವಣ್ಣನವರು ತ್ರಿವಿಧ ದಾಸೋಹದ ಬಗ್ಗೆ ಒತ್ತಿ ಒತ್ತಿ ಹೇಳುವುದು. " ತನು-ಮನ-ಧನ ಮೂರೂ ದಾಸೋಹದಲ್ಲಿ ನಿರತವಾಗಬೇಕು," ಎಂದು. "ಕಾಯಕ (ದಾಸೋಹ)ದ ಬಗ್ಗೆ ಮಾತನಾಡಿದರೆ ಕಾಯಕ ಮಾಡಿದಂತಾಗದು ನಡೆಯಿರಿ." ಎಂದು ಪತಿಯನ್ನು ಎಚ್ಚರಿಸಿ ಕಳಿಸುವ ಲಕ್ಕಮ್ಮನ ವಾಣಿಯಲ್ಲಿ ಈ ಸಂದೇಶವಿದೆ. ಸಿಖ್ಖರಲ್ಲಿ ಒಂದು ಆಚರಣೆ ಇದೆ. ಗುರುದ್ವಾರ ದರ್ಶನಕ್ಕೆ ಆ ಜನರು ಬರುತ್ತಾರೆ. ದರ್ಶನಾನಂತರ ಅವರು ಎಷ್ಟೇ ದೊಡ್ಡವರಿರಲಿ ಕೆಲವು ಸೇವೆ ಮಾಡುತ್ತಾರೆ. ಗುರುದ್ವಾರದೊಳಗೆ ಹೋಗುವಾಗ ಸಂದರ್ಶಕರು ಬಿಟ್ಟುಹೋದ ಚಪ್ಪಲಿ, ಬೂಟುಗಳನ್ನು ಶುಭ್ರಗೊಳಿಸುವುದು; ಕಟ್ಟಡದ ಕೆಲಸ ನಡೆಯುತ್ತಿದ್ದರೆ, ಇಟ್ಟಿಗೆ ಹೊರುವುದು ; ಸಿಮೆಂಟ್ ಕಲೆಸುವುದು, ಹೆಣ್ಣುಮಕ್ಕಳು ಅಡಿಗೆ ಮನೆಗೆ ಹೋಗಿ ಚಪಾತಿ ಮಾಡುವುದು, ಗುರುದ್ವಾರವನ್ನು ಒರೆಸುವುದು, ತೊಳೆಯುವುದು, ಕಾಳು ಹಸನು ಮಾಡುವುದು ಮುಂತಾಗಿ ಮಾಡುತ್ತಾರೆ. ನೋಡಿ ನಮಗೆ ಆಶ್ಚರ್ಯವಾಯಿತು. ಇದು ತನು ದಾಸೋಹ.

ಧರ್ಮಬೋಧೆ, ಸಾಹಿತ್ಯ ಬರೆಯುವುದು, ಉಪನ್ಯಾಸ ಇವೆಲ್ಲ ಮನ ದಾಸೋಹ. ಹಣವನ್ನು ನೀಡಿ ಉತ್ತಮ ಕಾರ್ಯಗಳಿಗೆ ಪ್ರೇರಣೆ ನೀಡುವುದು ಧನ ದಾಸೋಹ. ಬಹಳ ಜನ ಶ್ರೀಮಂತರು ಧನ ದಾಸೋಹ ಮಾಡಿ ತೃಪ್ತಿ ಪಟ್ಟುಕೊಳ್ಳುವರೇ ವಿನಾ ತಾವು ಆ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತನು ದಾಸೋಹ ಮಾಡರು. ಕಾಯಕ-ದಾಸೋಹ-ಮಾನವೀಯತೆ ಮುಂತಾಗಿ ಸಾಹಿತ್ಯ ಬರೆಯುವ ಅನೇಕರು ಅಷ್ಟೇ ಸಮಾಜದ ಮಧ್ಯೆ ಬೆರೆತು ಎಂದೂ ತನು ದಾಸೋಹ ಮಾಡರು, ಇನ್ನು ಧನ ದಾಸೋಹದ ವಿಷಯ ಅವರ ಬಳಿ ಎತ್ತಬಾರದು. ಇಡೀ ಜೀವಮಾನ ಪರ್ಯಂತರ ತಗೊಂಡು ಗೊತ್ತೇ ವಿನಾ ಕೊಟ್ಟುಗೊತ್ತಿರದು.

ಇನ್ನು ಕೆಲವರು ಹೇಳುತ್ತಾರೆ. "ನಾನೊಬ್ಬ ವೈದ್ಯ, ನನ್ನ ಕೆಲಸವನ್ನು ನಾನು ನಿಷ್ಠೆಯಿಂದ ಮಾಡುತ್ತೇನೆ, ಅದೇ ನನಗೆ ಪೂಜೆ, ಇನ್ನು ಪ್ರತ್ಯೇಕ ಪೂಜೆ ಏಕೆ ? ನಾನು ಪ್ರಾಮಾಣಿಕನಿರುವೆ. ನನಗೆ ದಾನ-ದಾಸೋಹ ಮಾಡುವ ಅಗತ್ಯವಿಲ್ಲ." "ಅಂಥವರಿಗೆ ನಾನು ಹೇಳುವೆ, " ವೈದ್ಯರಾಗಿ ಹೀಗೆ ಹೇಳುವುದೆ ? ವೈಟಮಿನ್ ಎ ಒಂದೇ ಸಾಕು ಬೇರಿನ್ನೇಕೆ ? ವೈಟಮಿನ್ ಡಿ ಇದ್ದರೆ ಸಾಲದೆ 'ಬಿ' ಏಕೆ ಎನ್ನುವಿರಾ ? ಎಲ್ಲ ಅನ್ನಾಂಗಗಳೂ ಶರೀರಕ್ಕೆ ಅತ್ಯಗತ್ಯ ಎಂದು ನೀವು ಹೇಳುವಂತೆ ನಾವು ಹೇಳುತ್ತೇವೆ. ಕಾಯಕ, ಅನುಭಾವ, ಅರ್ಚನೆ ಮೂರೂಬೇಕು ಎಂದು ; ತನುದಾಸೋಹ, ಮನ ದಾಸೋಹ, ಧನ ದಾಸೋಹ ಮೂರೂ ಇರಬೇಕೆಂದು."

ಗಿಡ-ಪ್ರಾಣಿ ಮುಂತಾದುವುಗಳಲ್ಲಿ ಒಂದು ಚಕ್ರವಿದೆ. ಅವು ತಾವು ಪ್ರಕೃತಿಯಿಂದ ಪಡೆದ ಋಣವನ್ನು ತೀರಿಸದೆ ಹೋಗುವುದಿಲ್ಲ. ಹಾಗೆ ಮನುಷ್ಯನು ಈ ಪ್ರಕೃತಿಯಿಂದ, ಸಮಾಜದಿಂದ ಋಣವನ್ನು ಪಡೆಯುತ್ತಾನೆ. ಅದನ್ನು ತೀರಿಸಲು ಇರುವ ವಿಧಾನಗಳೇ ತನು-ಮನ-ಧನಗಳಿಂದ ಮಾಡುವ ತ್ರಿವಿಧ ದಾಸೋಹ. ಒಬ್ಬ ಆಂಗ್ಲ ವಿದ್ವಾಂಸ ಹೇಳುವನು, 'ಒಬ್ಬ ವ್ಯಕ್ತಿಯ ಜೀವನ-ಮಟ್ಟ ಅವನು ಎಷ್ಟು ಗಳಿಸುವನು ಎಂಬುದರ ಮೇಲಿದ್ದರೆ, ಜೀವನದ ಮಟ್ಟ ಎಷ್ಟು ಕೊಡುವನು ಎಂಬುದರ ಮೇಲೆ ಇರುತ್ತದೆ." ಎಷ್ಟು ಗಳಿಸಿದರೂ ತನ್ನ ವೈಯಕ್ತಿಕ ಸುಖ ಭೋಗಕ್ಕೇ ಕಳೆಯುವವನಿಂದ ಸಮಷ್ಟಿಗೆ ಏನು ಪ್ರಯೋಜನವಿದೆ ?

## ಕಾಯಕ ಸಿದ್ಧಾಂತ

ಹೀಗೆ ಬಸವಣ್ಣನವರು ಬೋಧಿಸಿದ ಕಾಯಕವು ಕೇವಲ ಒಂದು ಉಪಜೀವನಕ್ಕೆ ಸಂಬಂಧಿಸಿದ ಉದ್ಯೋಗವಾಗದೆ, ಅನೇಕ ಮೌಲ್ಯಗಳಿಂದ ಕೂಡಿದ ಸೈದ್ಧಾಂತಿಕ ಹಿನ್ನೆಲೆಯಿಂದ ಕೂಡಿದೆ. 5 ಕೋನಗಳ ಒಂದು ವಿಭೂತಿ ಗಟ್ಟಿ ತೆಗೆದುಕೊಳ್ಳುವಾ. ಅದಕ್ಕೆ ಮೇಲ್ಭಾಗ-ತಳಭಾಗ ಇವೆ. ಮೇಲಿಂದ ಧರಿಸುತ್ತ ಹೋದಂತೆ ಅದು ಸವೆಯುತ್ತಾ ಹೋಗುತ್ತದೆ. ಔದ್ಯೋಗಿಕ, ನೈತಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಎಂಬುವು ಜೀವನದ ವಿಭೂತಿ ಗಟ್ಟಿಗೆ ಇರುವ ಐದು ಮುಖ ಎಂದುಕೊಳ್ಳುವ. ಲೌಕಿಕ. ಪಾರಮಾರ್ಥ ಎನ್ನುವವು ಗಟ್ಟಿಯ ಮೇಲ್ಮುಖ ಕೆಳಮುಖ. ನಾವು ವಿಭೂತಿ ಧರಿಸಲು ಮೂರು ಬೆರಳಿನಿಂದ ಉಜ್ಜುತ್ತೇವೆ. ಹಾಗೆ ಲೌಕಿಕವಾದ ಒಂದು ಕಾಯಕವನ್ನು ಮಾಡತೊಡಗುತ್ತೇವೆ. ಇದು ಐದೂ ಮುಖಗಳನ್ನು ತಾಗಿಕೊಂಡೇ ಸಾಗುತ್ತದೆ. ಐಹಿಕವಾದ ಒಂದು ಚಟುವಟಿಕೆಯಾಗಿ ಕಾಯಕವು ಆರಂಭವಾದರೂ ಅಂತಿಮವಾಗಿ ಪಾರಮಾರ್ಥಿಕ ಧ್ಯೇಯವನ್ನು ಉಳ್ಳದ್ದು. ವಿಭೂತಿ ಗಟ್ಟಿ ಉಪಯುಕ್ತವಾಗಿ ಸವೆದು ಬಯಲಲ್ಲಿ, ಬಯಲಾಗುವಂತೆ ಜೀವನವೂ ಐಹಿಕತೆಯಿಂದ ಆಮುಷ್ಮಿಕತೆಗೆ ಲೌಕಿಕತೆಯಿಂದ ಪಾರಮಾರ್ಥಿಕಕ್ಕೆ ಸಾಗುತ್ತದೆ. ಆದ್ದರಿಂದ ಕಾಯಕ ಕುರಿತು ಹೀಗೆ ಹೇಳಬಹುದು.

ಔದ್ಯೋಗಿಕ : ಕಾಯಕವು ಲೌಕಿಕ ಜೀವನದ ನಿರ್ವಹಣೆಗಾಗಿ ವ್ಯಕ್ತಿಯು ಕೈಗೊಂಡ **ಉದ್ಯೋಗ** (ಅಥವಾ ದೈಹಿಕ ಪರಿಶ್ರಮ)

\+ ನೈತಿಕ : ಕಾಯಕವು **ಪ್ರಾಮಾಣಿಕತೆ. ನಿರ್ವಂಚನೆ** ಮುಂತಾದ ನೈತಿಕ ಮೌಲ್ಯಗಳಿಂದ ಕೂಡಿದ ಲೌಕಿಕ ಜೀವನದ ನಿರ್ವಹಣೆಗಾಗಿ ವ್ಯಕ್ತಿಯು ಕೈಗೊಂಡ ಉದ್ಯೋಗ.

\+ ಧಾರ್ಮಿಕ : ಕಾಯಕವು ಪ್ರಾಮಾಣಿಕತೆ, ನಿರ್ವಂಚನೆ ಮುಂತಾದ ನೈತಿಕ ಮೌಲ್ಯಗಳಿಂದ ಕೂಡಿದ, **ದೇವರಲ್ಲಿ ಅನನ್ಯವಾದ ಶರಣಾಗತ ಭಾವನೆ ಹೊಂದಿ, ಅದು ದೇವನನ್ನೊಲಿಸುವ ಸಾಧನಯೆಂಬಂತಹ ಶ್ರದ್ಧೆಯಿಂದ** ಲೌಕಿಕ ಜೀವನದ ನಿರ್ವಹಣೆಗಾಗಿ ವ್ಯಕ್ತಿಯು ಕೈಗೊಂಡ ಉದ್ಯೋಗ.

\+ ಆರ್ಥಿಕ : ಕಾಯಕವು ಪ್ರಾಮಾಣಿಕತೆ, ನಿರ್ವಂಚನೆ ಮುಂತಾದ ನೈತಿಕ ಮೌಲ್ಯಗಳಿಂದ ಕೂಡಿದ, ದೇವರಲ್ಲಿ ಅನನ್ಯವಾದ ಶರಣಾಗತ ಭಾವನೆ ಹೊಂದಿ, ಅದು ದೇವನನ್ನೊಲಿಸುವ ಸಾಧನ ಎಂಬಂತಹ ಶ್ರದ್ಧೆಯಿಂದ, **ಸಮಾಜದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದಲೂ,** ಲೌಕಿಕ ಜೀವನದ ನಿರ್ವಹಣೆಗಾಗಿಯೂ ವ್ಯಕ್ತಿಯು ಕೈಗೊಂಡ ಉದ್ಯೋಗ.



\+ ಸಾಮಾಜಿಕ : ಕಾಯಕವು ಪ್ರಾಮಾಣಿಕತೆ, ನಿರ್ವಂಚನೆ ಮುಂತಾದ ನೈತಿಕ ಮೌಲ್ಯಗಳಿಂದ ಕೂಡಿದ, ದೇವರಲ್ಲಿ ಅನನ್ಯವಾದ ಶರಣಾಗತ ಭಾವನೆ ಹೊಂದಿ, ಅದು ದೇವನನ್ನೊಲಿಸುವ ಸಾಧನ ಎಂಬಂತಹ ಶ್ರದ್ಧೆಯಿಂದ, ಸಮಾಜದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದಲೂ, ಲೌಕಿಕ ಜೀವನದ ನಿರ್ವಹಣೆಗಾಗಿಯೂ, **ಸಮಾಜದ ಸರ್ವಾಂಗೀಣ ಪ್ರಗತಿಗಾಗಿಯೂ ವ್ಯಕ್ತಿಯು** ಕೈಗೊಂಡ ಉದ್ಯೋಗ.

ಈ ವ್ಯಾಖ್ಯೆಯು ಕಾಯಕದ ಸಮಗ್ರ ಕಲ್ಪನೆಯನ್ನು ತಂದುಕೊಡುವುದು ಎಂದು ನನಗೆ ಅನ್ನಿಸುತ್ತಿದೆ. "ಅರ್ಚನೆ-ಅರ್ಪಣೆ-ಅನುಭಾವ ಎಂಬ ಮೂರು ಬೆರಳುಗಳಿಂದ ಜೀವನದ ವಿಭೂತಿ ಗಟ್ಟಿಯನ್ನು ಕಾಯಕದ ಮೂಲಕ, ಔದ್ಯೋಗಿಕ, ನೈತಿಕ, ಧಾರ್ಮಿಕ, ಆರ್ಥಿಕ, ಮುಖಗಳನ್ನು ತಾಗಿಸುತ್ತ ಒಂದೇ ಮಟ್ಟದಲ್ಲಿ ಸವೆಸುತ್ತ ಹೋದರೆ, ಇದು ಪಾರಮಾರ್ಥಿಕ ಮುಖವನ್ನು ಮುಟ್ಟುವುದು. ಅಂತಿಮವಾಗಿ ಬಯಲಾಗುವುದು ಬದುಕು. ಕಾಯಕವು ಲೌಕಿಕ ಚಟುವಟಿಕೆಯಾದರೆ 'ಕೈಲಾಸ', ಕಾಯಕವು ನೀಡುವ ಪರಮತೃಪ್ತಿ (ಬ್ಲಿಸ್ ಡಿವೈನ್). ಆದ್ದರಿಂದಲೇ ಶರಣರು ಕಾಯಕದಿಂದ ಕೈಲಾಸ ಎನ್ನಲಿಲ್ಲ, ಕಾಯಕವೇ ಕೈಲಾಸ ಎಂದರು. ಕಾಯಕವು ಕೈಲಾಸ ತಲ್ಪಲು ಒಂದು ಸೋಪಾನ ಎಂಬ ಭಾವ 'ಕಾಯಕದಿಂದ ಕೈಲಾಸ' ಎಂಬುಕ್ತಿಯಲ್ಲಿ ಅಭಿವ್ಯಕ್ತವಾದರೆ, ಕಾಯಕದಲ್ಲಿ ಸಿಗುವ ಸಂತೃಪ್ತಿಯೇ ಪರಮಸಿದ್ಧಿ ಎಂಬುದು "ಕಾಯಕವೇ ಕೈಲಾಸ" ಎಂಬ ಪದಪುಂಜದಲ್ಲಿ ವ್ಯಕ್ತವಾಗುವುದು. ಹೀಗಾಗಿ ಕಾಯಕವು ತಾನೇ ಸಾಧನವೂ ಹೌದು— ಸಿದ್ಧಿಯೂ ಅಹುದು. ಮೂಲತಃ ಇದು ಸಂಸ್ಕೃತ ಪದವಾದರೂ ಅದು ವಚನಕಾರರಿಂದಾಗಿ ಕನ್ನಡದ ಅಂತರ್ಗತ ಪದ ಮತ್ತು ಸೈದ್ಧಾಂತಿಕ ಸೂತ್ರವಾಗಿಬಿಟ್ಟಿದೆ. ಸಂಸ್ಕೃತದಲ್ಲಿ ಕೇವಲ ದೈಹಿಕ ಪರಿಶ್ರಮವಾದುದು ಇಲ್ಲಿ ಬಹುರೂಪಿ ವಿರಾಟ್ ನಿಲುವನ್ನು ಹೊಂದಿಬಿಟ್ಟು, ಇಷ್ಟು ಶಕ್ತಿಶಾಲಿಯಾದ ಪದ-ಉದ್ಯೋಗಕ್ಕೆ ಸಮಾನಾಂತರವಾದುದು, ಇನ್ನೊಂದಿಲ್ಲ ಎಂಬ ಭಾವ ಬೆಳೆಸಿದೆ.

ಮೊದಲು ಕೇವಲ ವಿದ್ಯೆ, ಪೂಜೆ, ತಪಸ್ಸುಗಳೇ ದೇವರನ್ನೊಲಿಸುವ ಸಾಧನವೆಂದು ಧರ್ಮಪೀಠವನ್ನೇರಿದರೆ, ಗುರು ಬಸವಣ್ಣನವರ ಚಿಂತನೆಯಿಂದಾಗಿ ಕಾಯಕವೂ ದೇವರನ್ನೊಲಿಸುವ ಸಾಧನವಾಗಿ ಧರ್ಮ ಪೀಠದ ಪವಿತ್ರ ಸ್ಥಾನಕ್ಕೆ ಏರಿಬಿಟ್ಟಿತು. ಹೀಗಾಗಿ, ಪೂಜೆ (ವಿದ್ಯೆ-ತಪಸ್ಸು) ಯಷ್ಟೇ ದೇವರನ್ನೊಲಿಸುವ ಸಾಧನವಲ್ಲ, ಉದ್ಯೋಗವೂ ದೇವರನ್ನೊಲಿಸುವ ಸಾಧನ ಎಂದು ಕಾಯಕಕ್ಕೆ ಪಟ್ಟಗಟ್ಟಿದ ಮಹಾಪುರುಷ ಬಸವಣ್ಣನವರು. ಇದರಿಂದಾಗಿ ವೃತ್ತಿಗೆ ಗೌರವವು ಮಾತ್ರವೇ ಅಲ್ಲದೆ ದಿವ್ಯತ್ವವೂ ಕೂಡ ದೊರೆಯಿತು. ಜನಜೀವನಕ್ಕೆ ಮಾತ್ರವಲ್ಲ ಉದ್ಯೋಗಕ್ಕೂ ಕೂಡ ಕಾಯಕವು ಕಾಯಕಲ್ಪ (*rejuvenation*) ಚಿಕಿತ್ಸೆಯನ್ನು ನೀಡಿತು.

## ಕಾಯಕ ಏಕಾಗ್ರತೆ ಮತ್ತು ನಿಷ್ಠೆ

ಕಾಯಕದಲ್ಲಿ ಮುಖ್ಯವಾಗಿ ಇರಬೇಕಾದುದು ಏಕಾಗ್ರತೆ ಮತ್ತು ನಿಷ್ಠೆ: ಎರಡು ಮನಸ್ಸಿನಿಂದ ಕಾಯಕ ಮಾಡಬಾರದು. ಆಯ್ದಕ್ಕಿ ಲಕ್ಕಮ್ಮ ಹೇಳುತ್ತಾಳೆ, "ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ" ಎಂದು. ಒಂದು ಅಳತೆ (ಮಾನ)ಯಲ್ಲಿ ತರಬೇಕಾದವರು ಎರಡು ಅಳತೆಯಲ್ಲಿ ತಂದಿರಿ ಎಂದು ಒಂದು ಅರ್ಥವನ್ನು ಮಾಡಬಹುದಾದರೂ, ಒಂದು ಮನಸ್ಸಿನಿಂದ ಕಾಯಕ ಮಾಡುವುದು ಬಿಟ್ಟು ಎರಡು ಮನಸ್ಸಿನಿಂದ ಮಾಡಿದಿರಿ. ಒಂದು ಮನಸ್ಸು ಕಾಯಕ ಮಾಡುವುದರಲ್ಲಿದ್ದರೆ, ಇನ್ನೊಂದು ಅನುಭವ ಮಂಟಪದ ಚರ್ಚಾಗೋಷ್ಠಿಯಲ್ಲಿತ್ತು. ಈ ರೀತಿ ಎರಡು ಮನಸ್ಸಿನಿಂದ ಮಾಡಬಾರದು. ಯಾವುದನ್ನು ಮಾಡುತ್ತಿರುತ್ತೇವೋ ಅದರಲ್ಲಿ ತಲ್ಲೀನರಾಗಬೇಕು" ಎಂದು ಲಕ್ಕಮ್ಮ ಹೇಳುವ ಮಾತು ಒಮ್ಮನದ ನಿಷ್ಠೆ, ಏಕಾಗ್ರತೆ, ಮಾಡುವ ಕೆಲಸದಲ್ಲಿ ಪೂರ್ಣ ಶ್ರದ್ಧೆ ಇದ್ದಾಗ ಮಾತ್ರ ಅದು ಕಾಯಕ ಎಂಬುದನ್ನು ಪ್ರತಿಪಾದಿಸುತ್ತದೆ.

> ಕಾಯಕದಲ್ಲಿ ನಿರತನಾದಡೆ ಗುರುಪೂಜೆಯನ್ನಾದರೂ ಮರೆಯಬೇಕು
> ಕಾಯಕದಲ್ಲಿ ನಿರತನಾದಡೆ ಲಿಂಗಪೂಜೆಯನ್ನಾದರೂ ಮರೆಯಬೇಕು
> ಕಾಯಕದಲ್ಲಿ ನಿರತನಾದಡೆ ಜಂಗಮ ಮುಂದಿದ್ದರೂ ಹಂಗುಹರಿಯಬೇಕು
> ಕಾಯಕವೇ ಕೈಲಾಸವಾದ ಕಾರಣ ಮಾರಯ್ಯ ಪ್ರಿಯ ಅಮರೇಶ್ವರ
> ಲಿಂಗವಾದರೂ ಕಾಯಕದ ಒಳಗು.

ಈ ಮಾತಂತೂ ವ್ಯಕ್ತಿ ಜೀವನಕ್ಕೆ ಒಂದು ಅಮೂಲ್ಯ ಸೂತ್ರ ಮಾತ್ರವಲ್ಲ ರಾಷ್ಟ್ರ ಜೀವನಕ್ಕೂ ಅಹುದು. ಒಬ್ಬ ಧಾರ್ಮಿಕ ಸ್ವಭಾವದ ವೈದ್ಯನಿರುತ್ತಾನೆ ಎಂದುಕೊಳ್ಳಿ. ಆತನು ದೀಕ್ಷಾವಂತನಾಗಿ ಪೂಜೆಯಲ್ಲಿ, ಗುರುಭಕ್ತಿಯಲ್ಲಿ ಆಸಕ್ತನು. ಒಂದು ದಿನ ಆತನು ಶಸ್ತ್ರಚಿಕಿತ್ಸೆ ಮಾಡುತ್ತ ಇರುತ್ತಾನೆ, ಮೇಜಿನ ಮೇಲೆ ರೋಗಿ ಇದ್ದಾನೆ, ಅರ್ಧ ಕೆಲಸವಾಗಿದೆ, ಆಗ ಯಾರೋ ಬಂದು "ನಿಮಗೆ ದೀಕ್ಷೆಕೊಟ್ಟ ಗುರುಗಳು ಬಂದಿದ್ದಾರೆ, ದರ್ಶನಕ್ಕೆ ಬನ್ನಿ" ಎಂದರೆ, ಆಗ ಶಸ್ತ್ರಚಿಕಿತ್ಸಕ ವೈದ್ಯ ಕರ್ತವ್ಯ ಬಿಟ್ಟು ಹೋಗಬೇಕೆ? ಶರಣರ ಕಾಯಕ ತತ್ತ್ವದ ಪ್ರಕಾರ ಹೋಗಬೇಕಾಗಿಲ್ಲ.

ಆದರೆ ಇಲ್ಲೊಂದು ಎಚ್ಚರಿಕೆ ನೀಡಬೇಕು. ಈ ಮಾತನ್ನು ಬಳಸಿಕೊಂಡು ಹಗಲು ರಾತ್ರಿ ದುಡಿಯುವ, ಒಟ್ಟು ಧರ್ಮಸಂಸ್ಕಾರ ಪಡೆಯದ ಜನರು ಬಹಳ ತಯಾರಾಗುತ್ತಾರೆ. ಆದರ್ಶದ ಮಾತುಗಳನ್ನಾಡಿ ತಮ್ಮ ಹಣದ ದಾಹ, ಸ್ವಾರ್ಥವನ್ನು ಮುಚ್ಚಿಕೊಳ್ಳುವವರಿವರು. ಹೇಗೆಂದರೆ, ಅತ್ಯಮೂಲ್ಯವಾದ ಜ್ಞಾನದಾಸೋಹ, ಪೂಜ್ಯ ಅಪ್ಪಾಜಿಯವರಂಥವರ ಪ್ರವಚನ ನಡೆಯುತ್ತಿರುತ್ತದೆ ಎಂದುಕೊಳ್ಳಿರಿ. ಎಷ್ಟು ಪುಸ್ತಕ ಓದಿದರೂ ಸಿಗಲಾರದಷ್ಟು ಛಟ್ಟಿ ಇಳಿಸಿದ ಜ್ಞಾನ ಲಭ್ಯವಾಗುತ್ತದೆ. ಅದೂ ಹತ್ತಾರು ವರ್ಷಗಳಿಗೊಮ್ಮೆ ಆ ಊರಿಗೆ ಹೋದರೆ ಹೆಚ್ಚು. ಆಗಲೂ ವೈದ್ಯರು, ವ್ಯಾಪಾರಸ್ಥರು ಬಂದು ಪ್ರವಚನ ಕೇಳರು. ಏಕೆ ಎಂದು ಆಸಕ್ತರಾದ ಸಹೋದ್ಯೋಗಿ



ಗಳು ಕೇಳಿದರೆ, "ಬಸವಣ್ಣನವರು ಹೇಳಿಲ್ಲವೆ, ಕಾಯಕವೇ ಕೈಲಾಸ, ರೋಗಿಗಳೇ ದೇವರು ಎಂದು. ನಾವು ಇಲ್ಲಿಯೇ (ಹಣದಲ್ಲೇ ! ?) ಕೈಲಾಸ ಕಾಣುತ್ತೇವೆ" ಎಂದು ಉತ್ತರಿಸುತ್ತಾರೆ. ಇಂಥ ಪರಿಶ್ರಮ ಕೈಲಾಸವಲ್ಲ, ದುಡಿತ ಮಾತ್ರ. ಏಕೆಂದರೆ ಅರ್ಚನೆ(ಪೂಜೆ) ಮತ್ತು ಅನುಭಾವ (ಶರಣರ ಸಂಗ) ಗಳನ್ನು ಇರಿಸಿಕೊಂಡು ಮಾಡಿದ ದುಡಿತವು ಕಾಯಕವಾಗುವುದೇ ವಿನಾ ಅವನ್ನು ಬಿಟ್ಟು ಬರೀ ಹಣದ ಸಂಪಾದನೆಗಾಗಿ ಮಾಡಿದ್ದಲ್ಲ. ಕೆಲವರು ಸತ್ಯವೇ ದೇವರು, ಸೌಂದರ್ಯವೇ ದೇವರು ಎಂದಂತೆ ರೋಗಿಯೇ ದೇವರು ಎಂದು ಬಿಡುತ್ತಾರೆ. ಇದು ಅತಾತ್ತ್ವಿಕ ಪದ. ರೋಗಿಯ ಸೇವೆಯನ್ನು ದೇವರ ಸೇವೆ ಎಂದು ಮಾಡಬೇಕೇ ವಿನಾ ರೋಗಿಯೇ ದೇವರು, ಅಂದರೆ ಕರ್ತ ಎಂದು ತಿಳಿಯಬಾರದು. ಎಂಜಿನಿಯರನಿಗೆ ತಾನು ಮಾಡುವ ಕಾಯಕ ದೇವರ ಸೇವೆಯಾದರೆ, ಶಿಕ್ಷಕನಿಗೆ ಪ್ರಾಮಾಣಿಕವಾಗಿ ತನ್ನ ವೃತ್ತಿ ಮಾಡುವುದು ದೇವರ ಸೇವೆ. ವೈದ್ಯನಿಗೆ ರೋಗಿಗೆ ನಿಷ್ಠೆಯಿಂದ ಚಿಕಿತ್ಸೆ ಮಾಡುವುದೇ ದೇವರ ಸೇವೆ. ಕ್ರೈಸ್ತರು, ಮುಸ್ಲೀಮರು, ಪಾರ್ಸಿಗಳಲ್ಲಿ ಆತ ಎಷ್ಟೇ ದೊಡ್ಡ ವ್ಯಾಪಾರಿಯಿರಲಿ, ವೈದ್ಯನಿರಲಿ ಸಮಾಜ, ಧರ್ಮಸಂಸ್ಥೆ, ವಾರದ ಪ್ರಾರ್ಥನೆ ಬಿಟ್ಟು ಇರುವುದಿಲ್ಲ. ಹಿಂದುಗಳಲ್ಲಿ ಹಾಗಲ್ಲ, ಅವರಿಗೆ ಪೂಜೆ, ಪ್ರಾರ್ಥನೆ, ಪ್ರವಚನ ಮುಂತಾದುವುಗಳಿಗೆ ಬರಲು ಸಂಕೋಚ ಸಮಾಜದಲ್ಲಿ ಬೆರೆಯುವುದು ಆತ್ಮಗೌರವಕ್ಕೆ ಧಕ್ಕೆ ಎಂದೇ ತಿಳಿಯುತ್ತಾರೆ. ಇವರುಗಳು ದುಡಿದುದೆಲ್ಲ ಮಡದಿ ಮಕ್ಕಳ ಸುಖಕ್ಕೇ ವಿನಾ ಸಮಾಜಕ್ಕೆ ಎಳ್ಳಷ್ಟೂ ವಿನಿಯೋಗವಾಗದು.

ಕ್ರೈಸ್ತ, ಮುಸ್ಲೀಮ್, ಪಾರ್ಸಿಗಳಲ್ಲಿ ಒಬ್ಬ ಮಗುವಿರುವಾಗಲೇ ತನ್ನ ಧರ್ಮ ಮಂದಿರಕ್ಕೆ ಹೋಗುವ ಪರಿಪಾಠ ಬೀಳುತ್ತದೆ, ಆ ಧರ್ಮಮಂದಿರಗಳೂ ತಮ್ಮ ಅನುಯಾಯಿಗಳಿಗೆ ಸಂಸ್ಕಾರ ನೀಡಲು ಸದಾ ಸಿದ್ಧವಿರುತ್ತವೆ. ಅದಕ್ಕಾಗಿ ಪಾದ್ರಿ, ಮೌಲಿಗಳು ಸಿದ್ಧರಿರುತ್ತಾರೆ. ಅದೇ ಹಿಂದುಗಳಲ್ಲಿ ( ಲಿಂಗವಂತರನ್ನೂ ಹಿಂದೂ ಜನಾಂಗದಲ್ಲೇ ಸೇರಿಸುವುದರಿಂದ ಇವರನ್ನೂ ಹಿಡಿದು) ಯಾವ ಸಾಂಘಿಕ ಸಂಸ್ಕಾರವೂ ಸಿಗದು. ಈಗೀಗ ಬೆಳೆಯುವ ಮಕ್ಕಳಂತೂ ತಮ್ಮ ಧರ್ಮದ ಗುರುಗಳು ಹೇಗಿರುತ್ತಾರೆ ಎಂಬುದನ್ನೂ ಅರಿಯದವರಾಗಿದ್ದಾರೆ. ಐ.ಎ.ಎಸ್. ಐ.ಪಿ.ಎಸ್, ಪಾಸಾಗುವುದು, ಒಟ್ಟು ಮೆಡಿಕಲ್- ಇಂಜಿನಿಯರಿಂಗ್ ಸೀಟು ಪಡೆಯುವುದೇ ಜೀವನದ ಗುರಿಯಾದಕಾರಣ, ಐದನೇ ತರಗತಿಯಿಂದಲೇ ಹಗಲುರಾತ್ರಿ ಓದತೊಡಗುತ್ತಾರೆ. ಸೀಟು ಸಿಕ್ಕ ಮೇಲೆ ಅದನ್ನು ಓದುತ್ತಾರೆ. ಸಿಕ್ಕಾಪಟ್ಟೆ ಹಣ ಖರ್ಚು ಮಾಡಿ ಓದಿದ ಮೇಲೆ ಕೆಲಸಕ್ಕೆ ಸೇರುತ್ತಲೇ ಹಣದ ದಾಹ ಶುರುವಾಗುತ್ತದೆ. ಹೀಗೆ ಕೆಲವರಿಗೆ ಜೀವನ ಪರ್ಯಂತರ ಧರ್ಮದ ಗಾಳಿ ಸಹ ಅವರ ಮೇಲೆ ಹಾಯ್ದಿರದು. ಹಿಂದೂ ಏತರರು ತಮ್ಮ ಧರ್ಮಪಾಲನೆಯನ್ನು ತಮ್ಮ ಜೀವನದ ಸಹಜ ಕರ್ತವ್ಯ ಎಂದು ಆಚರಿಸಿದರೆ, ಹಿಂದೂಗಳು ಅದನ್ನು ಮತಾಂಧತೆ, ಜಾತೀಯತೆ ಎಂದು ತಿಳಿಯುತ್ತಾರೆ. ಈ ಅನುಯಾಯಿಗಳಿಗೆ ತಕ್ಕಂತೆ ಇವರ ಗುರುಗಳೂ ಅಷ್ಟೇ ಮತಿವಂತರು. ಅವರು ಹಗಲು-

ರಾತ್ರಿ ಇಂಜಿನಿಯರಿಂಗ್ ಕಾಲೇಜ್, ಮೆಡಿಕಲ್ ಕಾಲೇಜ್ ಎನ್ನುವ ಕಾಮಧೇನು. ಕಲ್ಪವೃಕ್ಷಗಳನ್ನು ಪಡೆಯಲು, ದೇವರ ಚಿಂತೆಯನ್ನೂ ಮಾಡದೆ, ಇದೇ ಚಿಂತೆ ಮಾಡುತ್ತಾರೆ. ದೇವರನ್ನೂ ನೆನೆಯದೆ ರಾಜಕಾರಣಿಗಳನ್ನು ಓಲೈಸುತ್ತಾರೆ. ಅಂತೂ ಗುರುವಿಗೆ ತಕ್ಕ ಶಿಷ್ಯರು, ಶಿಷ್ಯರಿಗೆ ತಕ್ಕ ಗುರುಗಳು. ಇದೆಲ್ಲವನ್ನೂ ಅವರುಗಳು ಕಾಯಕ ಎಂದೇ ಸಮರ್ಥಿಸಿಕೊಂಡು ಕೈಲಾಸ ಕಾಣುತ್ತಾರೆ. ಆದ್ದರಿಂದ ಕೇವಲ ಉಪ-ಜೀವನ(ಹೊಟ್ಟೆಪಾಡು) ಕ್ಕಾಗಿ ದುಡಿಯದೆ, ಪ್ರೌಢವಾದ ಆಧ್ಯಾತ್ಮಿಕ ಚಿಂತನೆಯ ಪ್ರವಚನ ಸಿಕ್ಕಾಗ ಅದನ್ನು ಕೇಳಬೇಕು ; ಅವಿಲ್ಲದಾಗ ಉತ್ತಮ ಸಾಹಿತ್ಯ ಓದಿ, ಧಾರ್ಮಿಕ ಜ್ಞಾನ ಬೆಳೆಸಿಕೊಳ್ಳಬೇಕು. ಇದೇನೂ ಇಲ್ಲದೆ ಬರೀ ದುಡಿಯುವ ಯಂತ್ರವಾಗಿ ಬಾಳಿದರೆ, ಅವನು ಮಾಡುವುದು ಕಾಯಕವಲ್ಲ, ಅರ್ಥಹೀನ ದುಡಿತಮಾತ್ರ.

ಕಾಯಕದಲ್ಲಿ ನಿರತನಾದರೆ ಲಿಂಗಪೂಜೆಯಾದರೂ ಮರೆಯಬೇಕು. ಒಬ್ಬ ವ್ಯಕ್ತಿ ವೈದ್ಯನಿರಬಹುದು, ಸೈನಿಕನಿರಬಹುದು, ಪೋಲಿಸು ಅಧಿಕಾರಿ ಇರಬಹುದು. ದೀಕ್ಷೆಯನ್ನು ಪಡೆಯಬೇಕು, ಪೂಜೆಯನ್ನು ಮಾಡಬೇಕು, " ನಮ್ಮ ವೃತ್ತಿ ಬಹಳ ವಿಲಕ್ಷಣವಿರುತ್ತವೆ. ನಮಗೆ ನೇಮದಿಂದ ಪೂಜೆಯನ್ನು ಮಾಡಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ನಮಗೆ ಇದೆಲ್ಲ ಏನೂ ಬೇಡ." ಎನ್ನುವರು. ಧರ್ಮದಲ್ಲಿ ಸಹಜಧರ್ಮ-ಆಪದ್ಧರ್ಮ ಎಂದು ಎರಡು ಬಗೆ. ಸಮಯ ಸಾಕಷ್ಟಿದ್ದಾಗ ನಿಯಮಿತವಾಗಿ ಪೂಜೆಯನ್ನು ಮಾಡುವುದು. ಹಾಗಿಲ್ಲದೆ ಇದ್ದಾಗ, ಏನಾದರೂ ಕಾಯಕದ ಒತ್ತಡ ಬಂದಾಗ ಪೂಜೆಯನ್ನೂ ಮರೆತರೂ ದೇವರು ಕೋಪಗೊಳ್ಳುವುದಿಲ್ಲ. ಈ ನಿಷ್ಠೆಯನ್ನು ಮುಸ್ಲೀಮರಲ್ಲಿ ಕಾಣುತ್ತೇವೆ. ಅವರು ಸಮಯಕ್ಕೆ ಸರಿಯಾಗಿ, ಎಲ್ಲೇ ಇದ್ದರೂ ನಮಾಜು ಮಾಡುತ್ತಾರೆ. ಅದು ಮೆಚ್ಚುವಂತಹ ಸಂಗತಿ.

"ಕಾಯಕದಲ್ಲಿ ನಿರತನಾದರೆ ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು" ಎಂಬ ಆಯ್ದಕ್ಕಿ ಮಾರಯ್ಯನ ವಾಣಿ ಬಹಳ ಅರ್ಥ ಗರ್ಭಿತವಾಗಿದೆ. ಬಸವಣ್ಣನವರು ಒಮ್ಮೆ ಕಾಯಕದಲ್ಲಿ ತಲ್ಲೀನವಾದಾಗ ವೃದ್ಧ ಜಂಗಮನು ಬರುತ್ತಾನೆ. ಬಸವಣ್ಣನವರು ಸ್ವಾಗತಿಸಿ, ಮಗುಳ್ನಕ್ಕು, ಕುಳ್ಳಿರಲು ಸೂಚಿಸಿ, ತಮ್ಮ ಪಾಡಿಗೆ ತಾವು ಕೆಲಸದಲ್ಲಿ ನಿರತರಾಗುತ್ತಾರೆ. ತಮ್ಮ ಕೆಲಸ ಪೂರೈಸುತ್ತಲೇ ಜಂಗಮನನ್ನು ಮಾತನಾಡಿಸುತ್ತಾರೆ. ಆಗ ಬಸವಣ್ಣನವರು ಮಾಡುತ್ತಿದ್ದುದು ಬೊಕ್ಕಸದ ಲೆಕ್ಕ ಪರಿಶೀಲನೆ. ಹೀಗಾಗಿ ಜಂಗಮನು, ತನ್ನ ಅತ್ಯಂತ ಪ್ರೀತಿಪಾತ್ರ ಚೇತನ, ಬಂದಾಗಲೂ ಕಾಯಕ ಮುಂದು ವರಿಸಿದರು. ವೈದ್ಯನು ವಿಶೇಷವಾಗಿ ಚಿಕಿತ್ಸೆಯಲ್ಲಿ ನಿರತನಾಗಿರುತ್ತಾನೆ; ಆಗ ಜಂಗಮನು ಬರುತ್ತಾನೆ. ಗೌರವಿಸಬೇಕಾದ್ದು ಧರ್ಮವಾದರೂ ಪ್ರಾಣಕ್ಕೆ ಎರವಾಗುವಂತೆ ಚಿಕಿತ್ಸೆ ಬಿಟ್ಟು ಬಂದು ಜಂಗಮನ ದರ್ಶನ ಪಡೆಯಬೇಕಿಲ್ಲ.

ಇನ್ನೂ ಒಂದು ದೃಷ್ಟಿಯಲ್ಲಿ ನೋಡೋಣ. ಒಬ್ಬ ವ್ಯಕ್ತಿ ನೌಕರಿಗಳನ್ನು ಅಥವಾ ಕೆಲವು ಕಡೆ ಪ್ರತಿಭೆಯ ಆಧಾರದ ಮೇಲೆ ಪ್ರವೇಶಗಳನ್ನು ಕೊಡುವ ಮಹತ್ವದ ಸ್ಥಾನದಲ್ಲಿರುತ್ತಾನೆ. ತನ್ನ ಕಣ್ಣೆದುರಿಗೆ ಅನೇಕ ಅರ್ಜಿಗಳಿರುತ್ತವೆ.



ಆಗ ಪ್ರತಿಭಾವಂತನಲ್ಲದ, ಸಾಮಾನ್ಯ ಅಂಕಗಳನ್ನು ಗಳಿಸಿದ ಒಬ್ಬ ಅಭ್ಯರ್ಥಿಯ ಬಗ್ಗೆ ಶಿಫಾರಸು ಮಾಡಲು ತನ್ನ ಗುರುವಾಗಲೀ, ಜಂಗಮನಾಗಲೀ ಬಂದಿರುತ್ತಾರೆ. ಮಹತ್ವದ ಸ್ಥಾನದಲ್ಲಿ ಇರುವ ವ್ಯಕ್ತಿ, ಅಲ್ಲಿ ಗುರು-ಜಂಗಮರ ಮತ್ತು ತನ್ನ ವೈಯಕ್ತಿಕ ಸಂಬಂಧವನ್ನು ಗಮನದಲ್ಲಿ ಇರಿಸಿಕೊಳ್ಳದೆ ಆ ಸ್ಥಾನಕ್ಕೆ ಅರ್ಹನಾದವನನ್ನು ರಾಜ್ಯ, ರಾಷ್ಟ್ರ, ಸಮಾಜಗಳ ಹಿತದೃಷ್ಟಿಯಿಂದ ಆರಿಸಬೇಕು.

ಜಂಗಮ ಎಂದರೆ ಸಮಾಜ ಎಂಬರ್ಥದಲ್ಲಿ ನೋಡುವಾ. ಜಂಗಮ ಎಂದರೆ ಇಷ್ಟಲಿಂಗಧಾರಿಯಾದ ತನ್ನ ಸಮಾಜದ ಒಬ್ಬ ಅನುಯಾಯಿ ಎಂದುಕೊಳ್ಳುವಾ. ಅನೇಕ ಅಭ್ಯರ್ಥಿಗಳು ತನ್ನ ಕಣ್ಣಮುಂದೆ ಇದ್ದಾಗ, ಮಹತ್ವದ ಸ್ಥಾನಕ್ಕೆ ಆಯ್ಕೆ ಮಾಡುವಾಗ, ತನ್ನ ಸಮಾಜದವನು ಆ ಸ್ಥಾನಕ್ಕೆ ಅರ್ಹನಲ್ಲದಿದ್ದರೂ ಅವನನ್ನು ಜಾತಿ ಅಭಿಮಾನದಿಂದ ಆಯ್ಕೆಮಾಡಬಾರದು; ಪ್ರತಿಭೆಯ ಆಧಾರದ ಮೇಲೇ ಆಯ್ಕೆ ಮಾಡಬೇಕು.

ಈ ಆದರ್ಶವನ್ನು ಎಲ್ಲರೂ ಅನುಸರಿಸಿದರೆ ಸ್ವಜನ ಪಕ್ಷಪಾತವಾಗಲೀ, ಭ್ರಷ್ಟಾಚಾರವಾಗಲೀ ನುಸುಳಲು ಸಾಧ್ಯವಿಲ್ಲ, ಈ ಮಾತುಗಳನ್ನು ನಮ್ಮ ದೇಶದ ಎಲ್ಲ ಜಾತಿಮತಪಂಥಗಳವರೂ ಅರಿತುಕೊಂಡರೆ ಬಹಳ ಒಳ್ಳೆಯದು.

**ಅವರವರ ಕಾಯಕ ಅವರು ಮಾಡಲೇಬೇಕು.**

* ಗುರುವಾದರೂ ಕಾಯಕದಿಂದ ಮುಕ್ತಿ
ಲಿಂಗವಾದರೂ ಕಾಯಕದಿಂದ ಮುಕ್ತಿ
ಜಂಗಮವಾದರೂ ಕಾಯಕದಿಂದ ಮುಕ್ತಿ

ಗುರು-ಲಿಂಗ-ಜಂಗಮ ಯಾವುವಾದರೇನು ಕಾಯಕದಿಂದಲೇ ಮುಕ್ತಿ ಎಂದು ಆಯ್ದಕ್ಕಿ ಮಾರಯ್ಯನವರ ಹೇಳಿಕೆ. ನುಲಿಯ ಚಂದಯ್ಯನವರ ಮಾತು ಇದನ್ನು ಪುಷ್ಟೀಕರಿಸುತ್ತದೆ.

ಗುರುವಾದಡೂ ಕಾಯಕದಿಂದಲೆ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೆ
ಲಿಂಗದ ಶಿಲೆಯ ಕುರುಹ ಹರಿವುದು
ಜಂಗಮವಾದಡೂ ಕಾಯಕದಿಂದಲೆ
ತನ್ನ ವೇಷದ ಪಾಶವ ಹರಿವುದು
ಗುರುವಾದಡೂ ಚರಸೇವೆಯ ಮಾಡಬೇಕು
ಲಿಂಗವಾದಡೂ ಚರಸೇವೆಯ ಮಾಡಬೇಕು
ಜಂಗಮವಾದಡೂ ಚರಸೇವೆಯ ಮಾಡಬೇಕು
ಇದು ಚಂದೇಶ್ವರಲಿಂಗದ ಅರಿವು ಕೇಳಾ ಪ್ರಭುವೆ!

ಗುರು-ಜಂಗಮ ಇವು ಜಾತಿವಾಚಕ ಪದಗಳಲ್ಲ; ತತ್ತ್ವ ವಾಚಕ ಮತ್ತು ವೃತ್ತಿವಾಚಕ ಪದಗಳು. ಇವರು ತಂತಮ್ಮ ಕಾಯಕಗಳನ್ನು ಮಾಡಿದಾಗಲೇ ಅವರಿಗೆ ಮುಕ್ತಿ ಸಾಧ್ಯ.

## ಗುರುವಿನ ಕಾಯಕ ಏನು ?

ಸುಡುವ ಗುಣದಿಂದ ಒಂದು ವಸ್ತುವು ಬೆಂಕಿ ಅನ್ನಿಸಿಕೊಳ್ಳುವುದೆಂತೋ,
ಬೀಸುವ ಗುಣದಿಂದ ಒಂದು ವಸ್ತುವು ಗಾಳಿ ಎಂದು ಹೇಗೆ ಅನ್ನಿಸಿಕೊಳ್ಳುವುದೋ,
ಬಾಯಾರಿಕೆಯನ್ನು ತಣಿಸುವ ಗುಣದಿಂದ ಒಂದು ವಸ್ತು ನೀರು ಎಂದು ಹೇಗೆ ಅನ್ನಿಸಿ
ಕೊಳ್ಳುವುದೋ, ಹಸಿವೆಯನ್ನು ಹಿಂಗಿಸುವ ಗುಣದಿಂದ ಒಂದು ವಸ್ತುವು ಆಹಾರ
ಎಂಬ ಬಿರುದಿಗೆ ಹೇಗೆ ಪಾತ್ರವಾಗುವುದೋ ಹಾಗೆ ಜ್ಞಾನವನ್ನು ನೀಡುವ ಗುಣ
ದಿಂದ, ಜನರಿಗೆ ಉತ್ತಮ ನೈತಿಕ-ಧಾರ್ಮಿಕ ಸಂಸ್ಕಾರವನ್ನು ನೀಡುವ ಕರ್ತವ್ಯದಿಂದ
ಒಬ್ಬ ವ್ಯಕ್ತಿ ಗುರುವು ಎನ್ನಿಸಿಕೊಳ್ಳುವನು. ಗುರುವಿನ ವೇಷ ಹಾಕಿದ ಮಾತ್ರಕ್ಕೆ
ಗುರುತ್ವ ಬರದು, ಗುರುವಿನ ಕಾಯಕ ಮಾಡಿದಾಗ ಗುರುತ್ವ ಬರುವುದು.

ಅದೇ ರೀತಿ ಜಂಗಮನ ಕಾಯಕವು. ಗುರುವು ಸೀಮಿತವಾದ ಒಂದು ಕ್ಷೇತ್ರ
ವನ್ನು ಆರಿಸಿಕೊಂಡು, ತನ್ನ ಸುತ್ತಲಿನ ಜನರಿಗೆ ಜ್ಞಾನ, ಸಂಸ್ಕಾರ ನೀಡುತ್ತ ಅವರನ್ನು
ಒಂದು ವ್ಯವಸ್ಥಿತ ರೀತಿಯಲ್ಲಿ ಮುನ್ನಡೆಸಿದರೆ, ಜಂಗಮನದು ವ್ಯಾಪಕ ಕ್ಷೇತ್ರ. ಅವನ
ವ್ಯಕ್ತಿತ್ವವೂ ಹಿರಿದು, ಪ್ರತಿಭಾತ್ಮಕವಾದುದು. ತನ್ನ ಅಪೂರ್ವ ವಿದ್ವತ್ತು, ಅನುಭಾ
ವಗಳಿಂದ ಸದಾ ಸಂಚರಿಸಿ ಜ್ಞಾನಬೋಧೆ ಮಾಡುವನು.

" ಜಂಗಮವಾಗಿ ಬಂದು, ಜರಿದು ಶೂಲವನಿಳುಹಿ
ಪ್ರಸಾದದ ಮದ್ದನ್ನಿಕ್ಕಿ ಸಲಹು ಕೂಡಲಸಂಗಮದೇವ."

ಜಂಗಮ ಒಬ್ಬ ನ್ಯಾಯಾಧೀಶನಂತೆ ; ನಿಸ್ವಾರ್ಥಿಯೂ ಸಮಷ್ಟಿಯ ಲೇಸು ಬಯ
ಸುವವನೂ ಆಗಿ ಸಂಚರಿಸುವ ನಡೆಲಿಂಗ, ಜ್ಞಾನ ದೇಗುಲ. ಈ ಉಭಯತರೂ
ತಮ್ಮ ತಮ್ಮ ಕಾಯಕ ನಿರ್ವಹಿಸಬೇಕು. ಆಗ ಮಾತ್ರವೇ ಅವರ ವೇಷದ ಪಾಶ ಹರಿ
ಯುವುದು; ಹೊಟ್ಟೆಪಾಡಿನ ವೇಷಧಾರಿ ಎಂಬ ಅಪವಾದ ತೊಲಗುವುದು.

["ಲಿಂಗವಾದರೂ ಕಾಯಕದಿಂದ ಮುಕ್ತಿ" ಎಂಬ ವಚನದ ಸಾಲು ಸದ್ಯ ನಾನು
ಪ್ರಸ್ತಾಪಿಸುವ ವಿಷಯಕ್ಕೆ ಹೊರತಾಗಿ ಇದೆಯಾದರೂ, ಇದು ಅರ್ಥಮಾಡಿಕೊಳ್ಳಲು
ಸುಲಭವಲ್ಲದ್ದರಿಂದ ಪ್ರಸ್ತಾಪಿಸುವೆ. ಲಿಂಗಕ್ಕೆ ಅಂದರೆ ದೇವರಿಗೆ ಏನು ಮುಕ್ತಿ
ಬೇಕಾಗಿದೆ? ಲಿಂಗವೇ ತಾನೇ ಸಕಲ ಜಗತ್ತಿಗೆ ಮುಕ್ತಿಯನ್ನು ದಯಪಾಲಿಸುವುದು?
ಎಂಬ ಸಂದೇಹವು ಉಂಟಾಗದೆ ಇರದು.

ಪರಮಾತ್ಮನೂ ಕಾಯಕ ಮಾಡಲೇ ಬೇಕು, ಮಾಡುತ್ತಲೇ ಇದ್ದಾನೆ. ಜಗತ್ತನ್ನು
ನಡೆಸುವುದು, ಭಕ್ತರನ್ನು ಅನುಗ್ರಹಿಸುವುದು ಅವನ ಕಾಯಕ. ಇಷ್ಟಲಿಂಗವನ್ನು
ಕುರಿತೂ ಹೇಳಿದ್ದಾರೆ ಇಲ್ಲಿ. ಇಷ್ಟಲಿಂಗವು ಹೊಳಪಿನ ಆವರಣ ಹೊಂದಿ, ತ್ರಾಟಕ
ಯೋಗಕ್ಕೆ ಏಕಾಗ್ರತೆಗೆ ಸಹಾಯಕವಾಗದಿದ್ದರೆ ಅದು ಕೇವಲ ಶಿಲೆ ಅನ್ನಿಸಿಕೊಳ್ಳುವುದೇ
ಹೊರತು ಲಿಂಗವೆನ್ನಿಸಿಕೊಳ್ಳದು.]

ನುಲಿಯ ಚಂದ್ರಯ್ಯನವರ ಮೇಲಿನ ವಚನದ ಮುಂದಿನ ಭಾಗ ಇನ್ನೂ
ಸ್ವಾರಸ್ಯಕರವಾಗಿದೆ. ಗುರು–ಲಿಂಗ–ಜಂಗಮಗಳೂ ಚರಸೇವೆಯನ್ನು ಮಾಡಲೇ



ಬೇಕಂತೆ! ಕಾಯಕ ಬೇರೆ-ಸೇವೆ ಬೇರೆ. ಗುರು-ಜಂಗಮರು ಬೋಧೆ ಮಾಡುವುದು,
ಜನ ಜಾಗೃತಿ ಮಾಡುವುದು ಅವರ ಕಾಯಕ. ಅವರು ಸೇವೆಯನ್ನು ಮಾಡಬೇಕು.
ಯಾವ ಸೇವೆ ಚರಸೇವೆ ? ! ಅಂದರೆ ಚೈತನ್ಯ ಸ್ವರೂಪಿಗಳಾದ ಮಾನವರ ಸೇವೆ !!
ದೀನರ ರಕ್ಷಣೆ, ದುರ್ಬಲರಿಗೆ-ಅನಾಥರಿಗೆ ಆಶ್ರಯ, ಕ್ರೈಸ್ತ ಧರ್ಮದಲ್ಲಿ ಹೇಗೆ
ಸನ್ಯಾಸಿ-ಸನ್ಯಾಸಿನಿಯರು(ಮಾಂಕ್ಸ್ ಮತ್ತು ನನ್‌ಗಳು) ಒಂದು ಕಡೆ ಚರ್ಚ್ ಮೂಲಕ
ಧರ್ಮಬೋಧೆ ಮಾಡುತ್ತ, ಇನ್ನೊಂದು ಕಡೆ ಶಿಕ್ಷಣ ಸಂಸ್ಥೆ, ಆಸ್ಪತ್ರೆ, ವೃದ್ಧಾ
ಶ್ರಮ, ಅನಾಥಶ್ರಮ, ಅಂಗವಿಕಲರ ಸೇವೆ ಇತ್ಯಾದಿ (ಚರಸೇವೆ) ಮಾಡುವರೋ
ಹಾಗೆ ನಮ್ಮ ಗುರು ಜಂಗಮರೂ ಚರಸೇವೆ ಮಾಡಬೇಕೆನ್ನುತ್ತಾರೆ, ವಚನ ಸಾಹಿತ್ಯ
ಸಂವಿಧಾನ ಕರ್ತೃಗಳಲ್ಲಿ ಒಬ್ಬರಾದ ನುಲಿಯ ಚಂದಯ್ಯ. ಕ್ರೈಸ್ತ ಧರ್ಮದ ಪ್ರಭಾವ
ಶರಣರ ಮೇಲೇನೂ ಬಿದ್ದಿರಲಿಲ್ಲ, ಅದರಿಂದ ಪ್ರಭಾವಿತರಾಗಿ ಹೇಳಿದರು ಎನ್ನಲಿಕ್ಕೆ.
ಎಂತಹ ಮಾನವೀಯ ಹೃದಯಿಗಳು ಮತ್ತು ಸ್ವತಂತ್ರ ವಿಚಾರಶೀಲರು ನಮ್ಮ
ಶರಣರು ಎಂದು ವಿಸ್ಮಯವಾಗುತ್ತದೆ.

ನಾವು ಇದನ್ನು ತಪ್ಪದೆ ಪಾಲಿಸುತ್ತೇವೆ ಎಂದು ಶಿಕ್ಷಣ ಸಂಸ್ಥೆಗಳನ್ನು ನಡೆಸುವ
ನಮ್ಮ ಅನೇಕ ಜಂಗಮರು(ಮಠಪೀಠಾಧೀಶರು)ಸಂಭ್ರಮದಿಂದ ಹೇಳಬಹುದು. ಅದ
ಕ್ಕಾಗಿ ಅಭಿನಂದಿಸಬಹುದಾದರೂ ಆ ಶಿಕ್ಷಣ ಸಂಸ್ಥೆಗಳಲ್ಲಿ ಎಷ್ಟರ ಮಟ್ಟಿಗೆ ಧಾರ್ಮಿಕ ತರ
ಬೇತಿ ನೀಡಲಾಗುವುದು, ಅಲ್ಲಿ ತಯಾರಾಗಿ ಬಂದವನು ಎಷ್ಟು ಧರ್ಮಾಭಿಮಾನಿಯಾಗಿ
ರುವನು ಎಂಬುದು ಚಿಂತನಾರ್ಹ ಮತ್ತು ಅಂಥವರು ನಡೆಸುವ ಆಸ್ಪತ್ರೆಗಳಲ್ಲಿ ಮಾನ
ವೀಯತೆ ಎಷ್ಟಿರುವುದು ? ಉಳಿದ ಆಸ್ಪತ್ರೆಗಳಿಗಿಂತ ಮಠಾಧಿಕಾರಿಗಳು ನಡೆಸುವ
ಆಸ್ಪತ್ರೆಗಳಲ್ಲಿ ವೈದ್ಯರು ಮಾನವೀಯತೆಯಿಂದ ವರ್ತಿಸುವರೆ ? ಮಠಾಧಿಕಾರಿಗಳು
ನಡೆಸುವುದರಿಂದ ಈ ಸಂಸ್ಥೆಗಳು ಧರ್ಮದ ಜಾಗೃತಿಗೆ, ಮಾನವೀಯ ಮೌಲ್ಯಗಳ
ಪ್ರೇರಣೆಗೆ ಎಷ್ಟು ಸಹಕಾರಿ ? ಎಂಬುದು ಚಿಂತನಾರ್ಹ.

ಕಳೆದ ತಿಂಗಳು ಒಬ್ಬರು ವೈದ್ಯರು ಭೇಟಿಯಾದರು. ಹೆಸರು ಬಸವರಾಜ,
ಮೆರಿಟ್‌ದಲ್ಲಿ ಮೆಡಿಕಲ್ ಸೀಟು ತಗೊಂಡವರು. ತುಂಬಾ ಸರಳ ವ್ಯಕ್ತಿ. ಜನರು
ಅವರ ಸುತ್ತ ಯಾವಾಗಲೂ ತುಂಬಿರುವುದಲ್ಲದೇ, ಎಷ್ಟೋ ದೂರದಿಂದ ಶಸ್ತ್ರಚಿಕಿತ್ಸೆಗೆ
ಅವರಲ್ಲೇ ಬರುವುದು. ಫೀಸಿನ ಬಗ್ಗೆ ತಕರಾರೇ ಇಲ್ಲ. ಅವರು ಹೇಳಿದರು,
"ನಮಗೆ ಕಲಿಸುವ ಒಬ್ಬ ಅಧ್ಯಾಪಕರು ಹೇಳುತ್ತಿದ್ದರು, 'ಇದು ಪವಿತ್ರ ಕಾಯಕ,
ವೈದ್ಯನೆಂದರೆ ಎರಡನೇ ಮೃತ್ಯುಂಜಯ, ಯಾರಿಗೂ ಹಣಕ್ಕಾಗಿ ಹಿಂಸಿಸಬೇಡಿರಿ.'
ಎಂದು. ಅದರಂತೆ ನಾನು ವರ್ತಿಸುತ್ತೇನೆ." ಕೇಳಿ ತುಂಬಾ ಸಂತೋಷವೆನಿಸಿತು.
ಮೂರು–ನಾಲ್ಕು ಲಕ್ಷಕೊಟ್ಟು ಸೀಟು ಪಡೆದವರು ಸದಾ ಸಂಪಾದನೆಯ ಬಗ್ಗೆ ಚಿಂತಿಸಿ,
ಕ್ರೂರವಾಗಿ ಹಣವನ್ನು ವಸೂಲು ಮಾಡುವುದಾದರೆ ಅಲ್ಲಿ ಮಾನವೀಯತೆ ಎಲ್ಲಿ ?

ಕಾವಿಯ ಬಟ್ಟೆ ಮಾಡಬೇಕಾದ ಕರ್ತವ್ಯವೇನು ? ಒಬ್ಬ ತಾಯಿ ಬಹಳ
ಚೆನ್ನಾಗಿ ಟೆನ್ನಿಸ್ ಆಡುವಳು. ಮೊದಲು ಆಕೆ ತನ್ನ ಮಕ್ಕಳ ಯೋಗಕ್ಷೇಮ ನೋಡಿ

ಕೊಂಡು ತಾನೇ ಟೆನ್ನಿಸ್ ಆಡಬೇಕು. "ನಿಜ, ಅವಳ ಪ್ರತಿಭೆ ಗೃಹಿಣಿಯಾಗಿ ಹಾಳಾಗ
ಬೇಕೆ?" ಎಂದು ಆಕೆ ಕೇಳಬಹುದು. "ಹಾಗಿದ್ದರೆ ನೀನು ಗೃಹಣಿಯ ಕರ್ತವ್ಯ
ಸ್ವೀಕರಿಸಬಾರದಿತ್ತು" ಎಂದು, ಅವಳಿಗೆ ಉತ್ತರಿಸಬೇಕಾಗುತ್ತದೆ. ಯಾವುದೇ ವೇಷ
ಹಾಕಿದ ಮೇಲೆ ವೇಷಕ್ಕೆ ತಕ್ಕ ಕರ್ತವ್ಯ ಮಾಡಬೇಕೇ ವಿನಾ, ವೇಷಕ್ಕೆ ಹೊರತಾದುದ
ನ್ನಲ್ಲ. ಹಾಗೆ ಗುರು-ಜಂಗಮರ ಕರ್ತವ್ಯ ಮುಖ್ಯವಾಗಿ ಜ್ಞಾನ ದಾಸೋಹ.

## ಧರ್ಮ ಪ್ರಚಾರವೂ ಕಾಯಕವೇ ?

"ಜ್ಞಾನದಾಸೋಹ, ಧರ್ಮಪ್ರಚಾರವೂ ಕಾಯಕವೇ?" ಎಂದು ವಿಡಂಬಿಸು-
ವವರುಂಟು. ಯಾರು ಬಹಳ ವ್ಯಾವಹಾರಿಕ ಬುದ್ಧಿಯವರೋ ಅವರು ಹೀಗೆ
ಕೇಳುವರು. ಧರ್ಮಪ್ರಚಾರವು ಕೇವಲ ಕಾಯಕವಷ್ಟೇ ಅಲ್ಲ, ಅದು ಪವಿತ್ರ ಕಾಯಕ ;
ಅಪಾರವಾದ ಆತ್ಮಬಲವಿದ್ದವರಷ್ಟೇ ಇದನ್ನು ಕೈಗೊಳ್ಳಬಲ್ಲರು. ಸಮಾಜಕ್ಕೆ ಜ್ಞಾನ-
ವನ್ನು ಸ್ವೀಕರಿಸುವ ಪ್ರವೃತ್ತಿ ಮತ್ತು ಜ್ಞಾನದ ರುಚಿ ಸವಿವ ಮನೋಭಾವವೇ ಇಲ್ಲ-
ದಿರುವುದರಿಂದ ಈ ಕಾಯಕದ ಮಹತ್ವವನ್ನು ಅನೇಕರು ಮನಗಂಡಿರುವುದಿಲ್ಲ.
ಧರ್ಮಪ್ರಚಾರಕನಲ್ಲಿ ಮನುಷ್ಯ ಸಮಾಜದ ಬಗ್ಗೆ ತೀವ್ರವಾದ ಪ್ರೇಮ, ಅನುಕಂಪ
ಇದ್ದು ಸ್ವಯಂ ಇಚ್ಛೆಯಿಂದ ಅವರ ಹಿತಕ್ಕಾಗಿ ತ್ಯಾಗಿಯಾಗಿ, ತಾನಾಗಿ ಪ್ರಚಾರಕ್ಕೆ
ಬರುವನು. ಆ ಕಳಕಳಿ, ಉದಾತ್ತತೆಯನ್ನು ಗುಣಗ್ರಾಹಿಗಳು ಅರಿಯುವರು. ಹಾಗ-
ಲ್ಲದೆ, ಕಿರೀಟ-ಪಲ್ಲಕ್ಕಿ-ಬೆಳ್ಳಿಯ ಛತ್ರಿಗಳ ಬಗ್ಗೆ ಮೋಹವಿರುವ ಭಕ್ತರಿಗೆ, ಧರ್ಮ-
ಪ್ರಚಾರಕರ ಕಳಕಳಿ--ಔನ್ನತ್ಯ ಅರ್ಥವೇ ಆಗದು. ಸ್ವಾಮಿಗಳಿಗೂ ಅಷ್ಟೇ, ಕಿರೀಟ–
ಪಲ್ಲಕ್ಕಿಯ ಭಕ್ತರು ತಮಗೆ ಕೊಡುವ ಗೌರವ ಅಪಾರವಿದ್ದಾಗ, ಜುಜುಬಿ ಧರ್ಮ–
ಪ್ರಚಾರವೇಕೆ ಎಂದು ಅವರ ಮನೋಭಾವ. ಇನ್ನೊಂದು ಕಡೆಯಲ್ಲಿ, ವಿದ್ಯಾಸಂಸ್ಥೆ-
ಗಳ ಸೀಟಿಗಾಗಿ ಲಕ್ಷಾಂತರ ರೂಪಾಯಿಗಳನ್ನು ತಂದು ಕಾಲಬುಡದಲ್ಲಿ ಸುರಿದು, ನಮ-
ಸ್ಕರಿಸುವ ಜನರಿರುವಾಗ, ಇನ್ನು ಜನಸಾಮಾನ್ಯರು, ಅವರ ಧಾರ್ಮಿಕ ಪರಿವರ್ತನೆ,
ಅವರು ಮಾತೃಧರ್ಮದಿಂದ ಸಾಗಿ ಅತ್ತಿತ್ತ ಅಲೆದಾಡುವಿಕೆ ತಪ್ಪಿಸುವ ಬಗ್ಗೆ ಮಠಾಧಿ
ಪತಿಗಳು ತಲೆಕೆಡಿಸಿಕೊಳ್ಳುವ ಅಗತ್ಯವೇನಿದೆ ? ಎಂದು ಕೆಲವರ ಮನೋಭಾವ. ಯಾರ
ತಿಳುವಳಿಕೆ, ನಂಬಿಕೆ ಏನೇ ಇರಲಿ ಧರ್ಮಪ್ರಚಾರ ಒಂದು ಅತ್ಯುನ್ನತ ಕಾಯಕ. ಬೌದ್ಧ
ಧರ್ಮ-ಕ್ರೈಸ್ತ ಧರ್ಮ-ಬಸವ ಧರ್ಮಗಳು ಇದಕ್ಕೆ ಬಹುದೊಡ್ಡ ಸ್ಥಾನ ಕೊಟ್ಟಿವೆ.
ಈ ಮೂವರು ಪ್ರವಾದಿಗಳು ತಾವಾಗಿ ಸಂಚರಿಸಿ ಜನಸಾಮಾನ್ಯರನ್ನು ಉದ್ಧರಿಸುವು-
ದನ್ನು ಕಾಣುತ್ತೇವೆ.

ಇಲ್ಲಿ ಕೆಲವರಿಗೆ ಬಹಳ ಆಶ್ಚರ್ಯವೆನಿಸುತ್ತದೆ, ಏಸುಕ್ರಿಸ್ತ, ಬುದ್ಧ ಸಂಚರಿಸಿದ
ಬಗ್ಗೆ ಉಲ್ಲೇಖಗಳಿವೆ. ಬಸವಣ್ಣನವರು ಸಂಚರಿಸಿದ ಬಗ್ಗೆ ಎಲ್ಲಿದೆ ? ಕಾಶ್ಮೀರದ
ಸಪಾದ ಲಕ್ಷದ ಮಹಾದೇವ ಭೂಪಾಲನ ಆಸ್ಥಾನದಲ್ಲಿದ್ದ ಸಾವಿರಾರು ಜಂಗಮರನ್ನು
ಬಸವಣ್ಣನವರು ಆಕರ್ಷಿಸಿ ಕರೆದುಕೊಂಡು ಬರಬೇಕಾದರೆ, ಅವರು ಅಲ್ಲಿಗೆ ಹೋಗಿರಲೇ



ಬೇಕು ತಾನೆ ? ಬನವಾಸಿ ಪ್ರಾಂತ್ಯದಲ್ಲಿ ಸಂಚರಿಸಲು ಬಂದ ಪಟ್ಟದಕಲ್ಲಿನ ವಸುಧೀಶ
ಭೂಪಾಲನಿಗೆ, ಬಸವಣ್ಣನವರು ದೀಕ್ಷೆ ಕೊಡುವರು. ಆತ ಅಲ್ಲಿಯೇ ತಪಸ್ಸಿಗೆ ಕುಳಿತು
ಅನಿಮಿಷಯೋಗಿ ಎನ್ನಿಸಿಕೊಳ್ಳುವನು. ಬಸವಣ್ಣನವರು ಚೋಳಮಂಡಲದ ಕಾಂಚೀ-
ಪುರಕ್ಕೆ ಒಮ್ಮೆ ಹೋದಾಗ, ಸಮೀಪದಲ್ಲೇ ಇದ್ದ ಯೋಗಿಯೊಬ್ಬರನ್ನು ಸಂದರ್ಶಿ–
ಸುವರು, ಮುಂದೆ ಆತ ಕಲ್ಯಾಣಕ್ಕೆ ಬಂದು ನೆಲೆಸಿ ಕರಸ್ಥಲದ ನಾಗಿದೇವ ಎನ್ನಿಸಿಕೊ-
ಳ್ಳುವನು. ಹೀಗೆ ಅನೇಕ ಉಲ್ಲೇಖಗಳು ದೊರೆಯುತ್ತವೆ.

ಚನ್ನಬಸವಣ್ಣ–ಅಕ್ಕನಾಗಲಾಂಬಿಕಾ ತಾಯಿ ಮುಂತಾದವರು ಮಹಾರಾಷ್ಟ್ರ-
ಶ್ರೀಶೈಲ ಪ್ರಾಂತ್ಯಗಳಲ್ಲಿ ಸಂಚರಿಸಿ ಧರ್ಮಪ್ರಚಾರ ಮಾಡಿದ, ಶ್ರೀಶೈಲದಲ್ಲಿ ಪಾತಾಳ-
ಗಂಗೆ ನದಿಯ ದಂಡೆ ಮೇಲೆ ಅನೇಕರಿಗೆ ದೀಕ್ಷೆ ನೀಡಿದ, ಕಟ್ಟಾ ವೈಷ್ಣವನಾದ ವೀರ
ವಸಂತರಾಯನನ್ನು ಪರಿವರ್ತಿಸಿದ, ಈ ರೀತಿಯ ಧಾರ್ಮಿಕ ದಿಗ್ವಿಜಯ ಪೂರೈಸಿ–
ಕೊಂಡು ಬಂದಾಗ ಇವರೆಲ್ಲರನ್ನು ಬಿಜ್ಜಳನ ಅರಮನೆಗೆ ಸ್ವಾಗತಿಸಿದ ವಿವರಗಳು,
ಕಾಲಜ್ಞಾನದಲ್ಲಿ ಲಭ್ಯವಿರುತ್ತದೆ. "ಜಂಗಮ" ತತ್ತ್ವವು ಈ ಧರ್ಮಪ್ರಚಾರಕ
ವ್ಯವಸ್ಥೆಯನ್ನೇ ಪ್ರತಿಪಾದಿಸುತ್ತದೆ.

## ಕಾಯಕ ಮತ್ತು ಹವ್ಯಾಸ

ಧರ್ಮಪ್ರಚಾರವನ್ನು ಒಂದು ಪವಿತ್ರ ಕಾಯಕ ಎಂದು ಭಾವಿಸಿ ಅದಕ್ಕಾಗಿ
ಪೂರ್ಣಾವಧಿ ಕಾರ್ಯಕರ್ತನಾಗಿ ವ್ಯಕ್ತಿಯು ತ್ಯಾಗ ಜೀವನವನ್ನು ಸ್ವೀಕರಿಸಬಹುದು.
ಅಥವಾ ಬೇರೊಂದು ಉದ್ಯೋಗವನ್ನು ಅವಲಂಬಿಸಿದರೂ ಸಂಜೆಯ ಸಮಯವನ್ನು,
ರಜಾದಿನಗಳನ್ನು ಇದಕ್ಕಾಗಿ ಮೀಸಲಿಡಬಹುದು. ಆಗ ಅರ್ಧಾವಧಿ ಅಥವಾ ಅಲ್ಪಾ-
ವಧಿ ಕಾರ್ಯಕರ್ತನಾಗಿ, ಧರ್ಮಪ್ರಚಾರವನ್ನು ಒಂದು ಹವ್ಯಾಸವನ್ನಾಗಿ ರೂಢಿಸಿ–
ಕೊಳ್ಳಬಹುದು.

ಪ್ರವಚನವು ಒಂದು ಬೌದ್ಧಿಕವಾದ, ಪವಿತ್ರ ಕಾಯಕ. ತಿಳಿದು ಮಾಡುವ ವ್ಯಕ್ತಿಗೆ
ಇದು ವಾಙ್ಮಯ ತಪಸ್ಸು. ಇಂದು ಹತಾಶರ, ಮನೋರೋಗಿಗಳ ಸಂಖ್ಯೆ ಜಾಸ್ತಿ–
ಯಾಗುತ್ತಿದೆ. ಬೌದ್ಧಿಕ ಪಟುತ್ವ, ಚಿಂತನ ಶೀಲತೆ ಹೊಂದಿದ ಪ್ರವಚನಕಾರ ಅತ್ಯು–
ತ್ತಮ ಮನೋರೋಗ ವೈದ್ಯನಾಗಬಲ್ಲ. ದೀನದಲಿತರ ಬಂಧುವಾಗಿ ಅವರ ನೋವು-
ದುಃಖಗಳಿಗೆ ಸಾಂತ್ವನ ನೀಡಬಲ್ಲ. ಅರಿತೋ ಅರಿಯದೆಯೋ ಎಸಗಿದ ತಪ್ಪುಗಳನ್ನು,
ಗುರುವಿನ ಮುಂದಿಟ್ಟು, ಭಕ್ತರು ಮನಸ್ಸನ್ನು ಹಗುರಗೊಳಿಸಿಕೊಳ್ಳಬಲ್ಲರು. ಬೋಧೆ-
ಯಿಂದ, ಆತ್ಮವಿಶ್ವಾಸ ಕುಂದಿದವರು ಆತ್ಮವಿಶ್ವಾಸ ಬೆಳೆಸಿಕೊಳ್ಳಬಲ್ಲರು ; ಯಾರ
ಆಡಂಬರವನ್ನೋ ಅನುಕರಿಸಹೋಗಿ ಅಸಂತೃಪ್ತಿಯಿಂದ ಬಳಲುವವರು, ಕೆಲವು
ಆದರ್ಶಗಳನ್ನು ರೂಢಿಸಿಕೊಳ್ಳುವರು, ಒಳ್ಳೆಯ ಮೌಲ್ಯಗಳನ್ನು ಬೆಳೆಸಿಕೊಳ್ಳುವರು.
ಹೀಗೆ ಉತ್ತಮ ಬೋಧೆ ಒಳ್ಳೆ ರೀತಿಯಲ್ಲಿ ದಿಗ್ದರ್ಶನ ಮಾಡುತ್ತದೆ. ಆಧ್ಯಾತ್ಮಿಕ
ವಾಗಿ, ವೈಚಾರಿಕವಾಗಿ, ನೈತಿಕವಾಗಿ ಮಾರ್ಗದರ್ಶನ ಮಾಡುವ ಪ್ರವಚನವು ಒಂದು
ಉತ್ಕೃಷ್ಟ ಬ್ರೇನ್ ಟಾನಿಕ್ ಎಂದರೆ ಉತ್ಪ್ರೇಕ್ಷೆಯಲ್ಲ.

ಗುರೂಪದೇಶ ಮಂತ್ರವೈದ್ಯ, ಜಂಗಮೋಪದೇಶ ಶಸ್ತ್ರವೈದ್ಯ
ಭವರೋಗವ ಗೆಲುವ ಪರಿಯನೋಡಾ
ಕೂಡಲ ಸಂಗನ ಶರಣರ ಕಾಯಕ
ಮಡಿವಾಳನ ಕಾಯಕದಂತೆ !

ಶರಣನ, ಜಂಗಮನ ಕಾಯಕ ಮಡಿವಾಳನ ಕಾಯಕದಂತೆ. ಹೇಗೆ ಮಡಿವಾಳನು ಮಲಿನವಾದ ಬಟ್ಟೆಗಳನ್ನು ನೀರಿನಲ್ಲಿ ಅದ್ದಿ, ಸೋಪನ್ನು ಹಾಕಿ ತಿಕ್ಕಿ, ಎತ್ತಿ ಎತ್ತಿ ಒಗೆದು, ಒಣಗಿಸಿ, ಇಸ್ತ್ರಿ ಮಾಡಿ ಕೊಡುವನೋ ಹಾಗೆ ಗುರು–ಜಂಗಮರು ಮಲಿನ-ವಾದ ಹೃನ್ಮನ ಬುದ್ಧಿಗಳೆಂಬ ಬಟ್ಟೆಗಳನ್ನು ಭಕ್ತಿ ಎಂಬ ನೀರಿನಲ್ಲಿ ಎದ್ದಿ, ಜ್ಞಾನದ ಸೋಪು ಹಚ್ಚಿ, ಆಚಾರದ ಮೂಲಕ ಒಗೆದು, ಬೋಧೆಯ ಮೂಲಕ ಒಣಗಿಸಿ ದೀಕ್ಷೆ ಎಂಬ ಇಸ್ತ್ರಿ ಮಾಡಿ ಜಳಜಳ ಮಾಡಿಕೊಡುವರು.

ಅಜ್ಞಾನ, ದೌರ್ಬಲ್ಯ ಮುಂತಾದ ಮಾಲೀನ್ಯವನ್ನು ತೆಗೆದು, ವ್ಯಕ್ತಿಯನ್ನು ಆದರ್ಶವಂತನನ್ನಾಗಿ ಮಾಡುವ ಬೋಧೆ ಅತ್ಯಂತ ಉತ್ಕೃಷ್ಟವಾದ ಕಾಯಕ.

2. ಉಪಜೀವನದ ವಿದ್ಯೆಯನ್ನು ಕಲಿಸುವ ಶಾಲಾಶಿಕ್ಷಕನದು ಒಂದು ಕಾಯಕವಾದರೆ ಜೀವನದ ವಿದ್ಯೆಯನ್ನು ಅಂದರೆ ಆತ್ಮವಿದ್ಯೆಯನ್ನು ಕಲಿಸುವ ಬೋಧಕನದು ಇನ್ನೂ ಶ್ರೇಷ್ಟಕಾಯಕ. ಏಕೆಂದರೆ ಉಪಜೀವನದ ವಿದ್ಯೆ ಜೀವನ ಮಟ್ಟ (*Standard of living*) ವನ್ನು ಏರಿಸಿದರೆ, ಜೀವನದ ವಿದ್ಯೆ ಜೀವನದ ಮಟ್ಟ (*Standard of life*) ವನ್ನು ಏರಿಸುತ್ತದೆ. ಉಪಜೀವನದ ವಿದ್ಯೆ ಕಾಯಕದ ತೃಪ್ತಿಯನ್ನು ಮಾಡಿದರೆ ಜೀವನದ ವಿದ್ಯೆ ಆತ್ಮದ ತೃಪ್ತಿ-ಯನ್ನು ನೀಡುತ್ತದೆ.

3. ಒಬ್ಬ ಗೌಂಡಿ ಇಟ್ಟಿಗೆ, ಸಿಮೆಂಟು, ನೀರು, ಕಬ್ಬಿಣ ಬಳಸಿ ಒಂದು ಅಂದವಾದ ಮನೆ, ಕಟ್ಟಡ, ಭಾವಿ, ಕೆರೆ ಕಟ್ಟುವನು. ಇವನದು ಲೌಕಿಕ ಕಾಯಕವಾದರೆ ಬೋಧಕನದು ಪಾರಮಾರ್ಥಿಕ ಗೌಂಡಿಯಾಗುವ ಉತ್ಕೃಷ್ಟ ಕಾಯಕ. ಆತ ಜಡ-ವಾದ ಮನೆಯನ್ನು ಭೂಮಿಯ ಮೇಲೆ, ಕಟ್ಟಿದರೆ ಈತ ಜ್ಞಾನ–ಭಕ್ತಿ–ಸದ್ಗು-ಣಗಳಿಂದ ಕೂಡಿದ ಮನೆಯನ್ನು ಅನುಯಾಯಿಯ ಅಂಗದಲ್ಲಿ ಕಟ್ಟುವನು.

ತನುವೆಂಬ ಏರಿಗೆ ಮನವೆಂಬ ಕಟ್ಟೆ
ಆಚಾರವೆಂಬ ಸೋಪಾನ, ಪರಮಾನಂದವೆಂಬುವ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ,
ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು, ಗುಹೇಶ್ವರಾ ನಿಮ್ಮಾಣೆ !

4. ಗುರು–ಜಂಗಮರು ಕೃಷಿಕರು. ಭೌತಿಕ ನೆಲದಲ್ಲಿ ಬೀಜವನ್ನು ಬಿತ್ತಿ ಕೃಷಿ ಮಾಡಿ ಬೆಳೆಯನ್ನು ತೆಗೆದುಕೊಂಡುವ ಒಕ್ಕಲಿಗನದೊಂದು ಉತ್ತಮ ಕಾಯಕವಾದರೆ, ಮಾನವ ದೇಹವೆಂಬ ಕ್ಷೇತ್ರದಲ್ಲಿ ಭಕ್ತಿಯ ಬೀಜ ಬಿತ್ತಿ, ಅರಿಷಡ್ವರ್ಗಗಳ ಕಳೆ



ತೆಗೆದು, ಉದಾತ್ತ ಚಿಂತನೆಯ ಗೊಬ್ಬರ ಚೆಲ್ಲಿ, ಪಾರಮಾರ್ಥಿಕ ಸಿದ್ಧಿಯ ಬೆಳೆ ತೆಗೆಯುವ ಗುರುವಿನದು ಆಧ್ಯಾತ್ಮಿಕ ಕೃಷಿಕನ ಕಾಯಕ. ಅದನ್ನು ಪ್ರಭು-ದೇವರ ವಚನದಲ್ಲಿ ನೋಡೋಣ.

ತನುವ ತೋಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ
ಒಡೆದು ಸಂಸಾರದ ಹೆಂಟೆಯ ಬಗೆದು ಬಿತ್ತಿದೆನಯ್ಯ ಬ್ರಹ್ಮಬೀಜವ
ಅಖಂಡ ಮಂಡಲವೆಂಬ ಭಾವಿ, ಪವನವೇ ರಾಟಾಳ
ಸುಷಮ್ನೆಯಿಂದ ಉದಕವ ತಿದ್ದಿ, ಬಸವಗಳೈವರು ಹಸನಗೆಡಿಸಿಹರೆಂದು
ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ
ಆವಾಗಳೂ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ !

5. ವೈದ್ಯನು ದೈಹಿಕ ರೋಗ ವೈದ್ಯ, ಗುರು–ಜಂಗಮರು ಭವರೋಗ ವೈದ್ಯರು. ವೈದ್ಯನು ಔಷಧಿ, ಚುಚ್ಚುಮದ್ದು ಕೊಟ್ಟು, ಶರೀರಕ್ಕೆ ಬಂದ ರೋಗವನ್ನು ವಾಸಿ ಮಾಡುವನು, ಉತ್ತಮ ಪೋಷಕಾಂಶಗಳನ್ನು ಕೊಡುವನು, ಟಾನಿಕ್ ಮುಂತಾಗಿ ಕೊಟ್ಟು ಶರೀರವನ್ನು ಪುಷ್ಟಿಗೊಳಿಸುವನು. ಗುರುವು ಭವರೋಗ ವೈದ್ಯನಾಗಿ, ದೀಕ್ಷೆ ಎಂಬ ಗುಳಿಗೆ, ಬೋಧೆ ಎಂಬ ಚುಚ್ಚು ಮದ್ದಿನ ಮೂಲಕ ಧರ್ಮಜ್ಞಾನ ಎಂಬ ಔಷಧಿಯನ್ನು ಬುದ್ಧಿ–ಮನಗಳಿಗೆ ನೀಡಿ, ಭಕ್ತಿ–ಜ್ಞಾನ ಎಂಬ ವೈಟಮಿನ್‌ಗಳನ್ನು ಕೊಟ್ಟು, ಪೂಜೆ–ಧ್ಯಾನ ಎಂಬ ಟಾನಿಕ್ ನೀಡಿ, ವ್ಯಕ್ತಿಯನ್ನು ಆತ್ಮವಿಶ್ವಾಸದಿಂದ ಜೀವನವನ್ನು ಎದುರಿಸುವಂತೆ ಮಾಡುವನು.

6 ನಾಡಿನ ಗಡಿಯನ್ನು ಬಹಿರಂಗದ ಶತ್ರುಗಳಿಂದ ರಕ್ಷಿಸುವ ಸೈನಿಕ, ಸಮಾಜದಲ್ಲಿ ಹಿಂಸೆ, ಅನ್ಯಾಯ ತಾಂಡವವಾಡದಂತೆ ದುರ್ಬಲರಿಗೆ ರಕ್ಷಣೆನೀಡಿ, ದುಷ್ಟರನ್ನು ಶಿಕ್ಷಿಸುವ ಆರಕ್ಷಕ (ಪೋಲೀಸ್) ಇವರದು ಹೇಗೆ ಕಾಯಕವೋ ಹಾಗೆ ಗುರು–ಜಂಗಮರದು ರಕ್ಷಣೆಯ ಕಾಯಕ. ಮಾನವನ ಅಂತರಂಗ ಶತ್ರುಗಳು ಅರಿಷಡ್ವ-ರ್ಗಗಳು, ಅಷ್ಟಮದಗಳು ಇತ್ಯಾದಿ ಇವು ಅಂತರಂಗದಲ್ಲಿ ಗಲಭೆ ಎಬ್ಬಿಸುವ ತಂಟೆಕೋರರು. ಜಾತೀಯತೆ–ಭ್ರಷ್ಟಾಚಾರ–ಮೂಢನಂಬಿಕೆ ಇವು ಬಹಿರಂಗದ ಶತ್ರುಗಳು. ಇವನ್ನು ಪ್ರವಚನ ಎಂಬ ಬಂದೂಕು ಹಿಡಿದು, ಅದರಲ್ಲಿ ನಿಜ–ಜ್ಞಾನದ ಗುಂಡು ತುಂಬಿ ವ್ಯಕ್ತಿ–ಸಮಾಜಗಳನ್ನು ನಾಸ್ತಿಕತೆ-ಮೂಡನಂಬಿಕೆ, ಜಾತೀಯತೆ ಮುಂತಾದುವುಗಳಿಂದ ರಕ್ಷಿಸುವ ಗುರು–ಜಂಗವರು ಆಧ್ಯಾತ್ಮಿಕ ಸೈನಿಕರು–ಆರಕ್ಷಕರು.

ಹೀಗೆ ಪ್ರವಚನ–ಬೋಧೆಯ ಕಾಯಕ ಅತ್ಯಂತ ಉದಾತ್ತವೂ, ಶ್ರೇಷ್ಟವೂ ಆದ ಕಾಯಕ.

(ಮುಂದುವರಿಯುವುದು)

16 ನೇ ಪುಟದಿಂದ ಮುಂದುವರಿದುದು

ಭೂಸುರ, ನೀವು ಕುಲಹೀನರನ್ನೆಲ್ಲ ಸಮಾನವಾಗಿ ಕಂಡು, ಶರಣರು ಎಂದು ಒಡ
ನಾಡುವುದೆ? ಮಡಿವಾಳಮಾಚಯ್ಯ, ಡೋಹರ ಕಕ್ಕಯ್ಯ, ಚೆನ್ನಯ್ಯ ಮುಂತಾದವ
ರೊಡನೆ ಕುಲೋತ್ತಮರಾದ ನೀವು ಒಡನಾಡುವುದು ಯೋಗ್ಯವಲ್ಲ." ಎಂದಾಗ
ಉತ್ತರ ಕೊಟ್ಟ ವಚನವಿದು.

ಇಂತಹ ಶರಣರನ್ನು ಕುಲಹೀನರೆಂದು, ಅವರ ಜಾತಿ ಹಿಡಿದು ಮಾತನಾಡಿದಾಗ
ಬಸವಣ್ಣನವರು ವಿಷಾದದಿಂದ ನುಡಿದಿದ್ದಾರೆ, "ಅಂಥ ಮಹಿಮರನ್ನು ವೃತ್ತಿ, ಜಾತಿ
ಹಿಡಿದು ಕೀಳೆಂದು, ನಾನು ಕುಲಶ್ರೇಷ್ಠ ಹಾರುವನೆಂದರೆ ದೇವರು ನಗದಿರು
ವನೆ ? " ಈ ವಚನವು ಬಸವಣ್ಣನವರಲ್ಲಿ ಹುಟ್ಟಿದ ಮೇಲರಿಮೆ ತುಳಿಯುವ, ನಿವಾ
ರಿಸುವ ಪ್ರಯತ್ನವಾಗದೆ, ಜಾತಿಯ ಅಭಿಮಾನ ಉಳ್ಳವರಿಗೆ ಉತ್ತರಿಸುವ ವಚನ
ವಾಗಿದೆ. " ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸ
ದಿರಯ್ಯ." ಎಂಬ ವಚನ ( 343 ) ದಲ್ಲಿ " ನಾನು ಶೋಷಕ ಜಾತಿಯಲ್ಲಿ ಹುಟ್ಟಿ
ದವನಾದ್ದರಿಂದ ಅದರಿಂದ ನೊಂದವರು ನನ್ನನ್ನು ನಂಬುವುದೇ ಕಷ್ಟ ; ಪ್ರೀತಿ–
ವಿಶ್ವಾಸದಿಂದ ಕಾಣದೆ ಸಂಶಯ ದೃಷ್ಟಿಯಿಂದ ಕಾಣುವರು." ಎಂಬ ಅಳಲು ಇದೆ.

2. "ಆದರೆ ಬಸವಣ್ಣ ತಾನೇ ಇಬ್ಬರು ಹೆಂಡಿರನ್ನು ಪಡೆದಿದ್ದೂ, ಪರಮ
ಪತಿವ್ರತೆಗೆ ಗಂಡನೊಬ್ಬ." ಇತ್ಯಾದಿ ಹೇಳಿಕೆಗಳನ್ನು ನೀಡುವುದರ ಮೂಲಕ ಒಂದು
ಬಗೆಯಲ್ಲಿ ಸಾಂಪ್ರದಾಯಿಕ ಮನೋಭಾವವನ್ನೇ ತೋರಿದ ಎನ್ನಿಸುತ್ತದೆ." ಪುಟ 98.

ಗುರು ಬಸವಣ್ಣನವರನ್ನು ಕುರಿತು ಮಾಡಿದ ಈ ಆಕ್ಷೇಪ, ಆರೋಪ ಸಾಮಾನ್ಯ
ವಾದುದಲ್ಲ. ತೋರಿಕೆಗೆ ಅಷ್ಟು ತೀವ್ರವಾಗಿಲ್ಲದಿದ್ದರೂ, ನಿರೂಪಣೆ ಬಹಳ ವ್ಯಂಗ್ಯ
ವಾಗಿ ಮೊನಚಾಗಿ ಇದೆ. ಒಬ್ಬ ವ್ಯಕ್ತಿಯ ಜೀವನವನ್ನು ನಡೆ-ನುಡಿಗಳ ಮಧ್ಯದ
ಒಮ್ಮತವನ್ನು ನೋಡಿ ಆತನನ್ನು ಅಳೆಯಬೇಕು. ಗುರು ಬಸವಣ್ಣನವರನ್ನು ಕುರಿತು
ಸಮಕಾಲೀನರಿಟ್ಟ ಭಕ್ತಿ-ಶ್ರದ್ಧೆ ನೋಡಿದರೆ ಅವರು ಅತ್ಯಂತ ನಿಷ್ಕಲಂಕ ವ್ಯಕ್ತಿ
ಎನ್ನಿಸದಿರದು. ಮಡಿವಾಳ ಮಾಚಿದೇವ ತೀರಾ ನಿಷ್ಠುರದ ಮಾತಿನ ಶರಣ. ಎಲ್ಲರಿ
ಗಿಂತಲೂ ಮಿತಿ ಮೀರಿದ "ಬಸವ ಪ್ರೇಮ" ಆತನಿಗಿದ್ದಿತು. ಒಂದು ವೇಳೆ ಬಸವಣ್ಣ
ನವರಲ್ಲಿ, ಅವರ ನಡೆ-ನುಡಿಗಳಲ್ಲಿ ಕಂದರವಿದ್ದರೆ ಈ ರೀತಿ ಗೌರವಿಸಲು ಸಾಧ್ಯವೆ? ಆ
ಶರಣರು ಕರುಳಿಲ್ಲದ ಕಲಿಗಳು, ನಿಷ್ಠುರವಾಗಿ, ನಿರ್ಭೀತರಾಗಿ ಮಾತನ್ನಾಡುವವರು,
ಹಣ-ಅನುಕೂಲತೆ ಕಲ್ಪಿಸಿ ಕೊಟ್ಟರೆ ಮತಿಗೆಟ್ಟು ಹೊಗಳುವವರೂ ಅಲ್ಲ.

ಬಸವಣ್ಣನವರು ಇಬ್ಬರು ಪತ್ನಿಯರನ್ನು ಹೊಂದಿದ್ದರು ಎಂದು ವಾದಕ್ಕಾಗಿ
ನಂಬೋಣ. ಒಂದು ವೇಳೆ ಆಗಿನ ಕಾಲದಲ್ಲಿ ಪ್ರಚಲಿತವಿದ್ದ ಬಾಲ್ಯ ವಿವಾಹದ
ಬಂಧನಕ್ಕೆ ಒಳಗಾಗಿ, ಚಿಕ್ಕ ಹಸುಗೂಸುಗಳಿಗೇ ವಿವಾಹ ನಡೆದಿದ್ದರೆ ? ದೊಡ್ಡವನಾದ
ಬಳಿಕ ವಿಷಯ ತಿಳಿದು, ನಿರಾಕರಿಸಿದಾಗ ಹಿರಿಯರು ಸೇರಿ ಆ ಹೆಣ್ಣು ಮಕ್ಕಳ ಜೀವನವು



(ಬಾಲ್ಯದಲ್ಲೇ ವಿವಾಹ ಜರುಗಿ, ಬ್ರಾಹ್ಮಣರಲ್ಲಿ ಪುನರ್ ವಿವಾಹಕ್ಕೂ ಅವಕಾಶವಿಲ್ಲದಿ
ರುವುದರಿಂದ, ಅವರ ಜೀವನವು) ಹಾಳಾಗಬಾರದೆಂದು ಒತ್ತಾಯಿಸಿದ್ದರೆ ? ಯಾವ
ಅನಿವಾರ್ಯತೆ, ಧರ್ಮ ಸಂಕಟ ಈ ಪರಿಸ್ಥಿತಿ ತಂದೊಡ್ಡಿರಬಹುದು ಎಂಬುದು
ಚಿಂತನಾರ್ಹ.

ದೊಡ್ಡವರ ಬದುಕು ಕುರಿತು ಬರೆಯುವಾಗ ಏನೇನೋ ಆಕ್ಷೇಪ ಮಾಡಬಾರದು,
ತಿಳಿದು ಮಾಡಬೇಕು.; ಆ ಕಾಲದಲ್ಲಿ ಪುಟ್ಟ ಮಕ್ಕಳಿಗೇ ಮದುವೆ ಮಾಡಿಬಿಡುತ್ತಿದ್ದರು.
20ನೇ ಶತಮಾನದ ಪರಿಸರ, ತಿಳುವಳಿಕೆ ದೃಷ್ಟಿಯಿಂದ 12 ಶತಮಾನದ ಪರಿಸರ
ವನ್ನು ಅಳೆಯಬಾರದು. ಸಂಶೋಧಕ ಲಿಂ. ಡಾ॥ ದೇವೀರಪ್ಪನವರು, "ಬಸವಣ್ಣನ
ವರಿಗೆ ಇಬ್ಬರು ಹೆಂಡತಿಯರು ಎಂಬ ಕಲ್ಪನೆ ಪುರಾಣಕಾರರಿಂದ ಬಂದಿದೆ. ಅವರಿಗೆ
ಇದ್ದವಳು ಒಬ್ಬಳೇ, 'ನೀಲಗಂಗಾ' ಎಂಬ ಪತ್ನಿ". ಎಂಬುದನ್ನು ಸಾಧಾರಪೂರ್ವಕ
ವಾಗಿ ಬರೆದಿದ್ದಾರೆ. ಆ ಲೇಖನ ಬಸವ ಸಮಿತಿಯ ಪ್ರಕಟಣೆಯಾದ "ಬಸವ ಪಥ"
ದಲ್ಲಿ ಮೊದಲು ಪ್ರಕಟವಾಯಿತು; ನಾವೂ ಕಲ್ಯಾಣ ಕಿರಣದಲ್ಲಿ ಪುನಃ ಪ್ರಕಟಿಸಿದೆವು.
ದೇವೀರಪ್ಪನವರು ಈ ಮಹತ್ತರವಾದ ವಿಚಾರ ಧಾರೆಯಿಂದ ಮಾಡಿರುವ ಉಪಕಾರ
ಹೇಳಲಸಾಧ್ಯ. ಅವರ ಜೀವನವು ಇದೊಂದು ಸಂಶೋಧನೆಯಿಂದಲೇ ಅಮರ
ವಾಯಿತು ಎನ್ನಬಹುದು. ಇಬ್ಬರು ಹೆಂಡಿರನ್ನು ಸೃಷ್ಟಿಮಾಡಿ ಬಸವಣ್ಣನವರ ಜೀವ
ನದಲ್ಲಿ ಕಗ್ಗಂಟು ಹಾಕಿದ ಕವಿಗಳು ಹುಟ್ಟುಹಾಕಿದ್ದ ಸಮಸ್ಯೆಯನ್ನು ಡಾ॥ ದೇವೀರಪ್ಪ
ನವರು ಬಿಡಿಸಿದ್ದಾರೆ.

3. "ಬಿಜ್ಜಳನು ಇತರರ ಚಾಡಿಯಿಂದ ಪ್ರೇರಿತನಾಗಿ ಕೋಪಾಂಧತೆಯಿಂದ
ಹರಳಯ್ಯ-ಮಧುವಯ್ಯರ ಕಣ್ಣುಗಳನ್ನು ಕೀಳಿಸಿದ. ಇದು ವೀರಶೈವರಲ್ಲಿ ಸೇಡಿನ ಕಿಡಿ
ಯನ್ನು ಹೊತ್ತಿಸಿತು. ಜಗದೇವನು ಈ ಸನ್ನಿವೇಶದಲ್ಲಿ ತನ್ನ ಗೆಳೆಯರೊಂದಿಗೆ
ಹೋಗಿ ಶಿವದ್ರೋಹಿಯಾದ ಬಿಜ್ಜಳನ ಕೊಲೆ ಮಾಡಿ, ತನ್ನ ತಲೆಯನ್ನೂ ತರಿದು
ಕೊಂಡ, ಇದಕ್ಕೆ ಬಸವಣ್ಣನ ಮೌನ ಸಮ್ಮತಿಯಿತ್ತು. ಆದರೆ ಆತ ಈ ಎಲ್ಲ ರಕ್ತಪಾತ
ನಡೆಯುವ ಮುಂಚೆಯೇ ಕೂಡಲ ಸಂಗಮಕ್ಕೆ ವಾಪಸಾದ. ಹರಿಹರನು ಸಹ "ಶಿವ
ದ್ರೋಹಂಗೈದ ಬಿಜ್ಜಳನ ಕೊಲಿಸುತಂ" ಬಸವಣ್ಣನು ಕಪ್ಪಡಿ ಸಂಗಮಕ್ಕೆ ಮರಳಿದ
ನೆಂದು ಹೇಳುತ್ತಾನೆ." (ಪುಟ.72)

ಬಸವ ಪುರಾಣ, ಹರಿಹರನ ರಗಳೆಗಳನ್ನು ಉಲ್ಲೇಖಿಸಿ, ಪಾರಾಗಲಿಕ್ಕೆ ಅವ
ಕಾಶವನ್ನು ಇಟ್ಟುಕೊಂಡೇ ಡಾ ॥ ನಾರಾಯಣರು **ಬಿಜ್ಜಳನ ಕೊಲೆಗೆ ಬಸವಣ್ಣನ
ಮೌನಸಮ್ಮತಿ ಇತ್ತು ಎಂಬ ಮಾತಿನ ಹಾವನ್ನು ಜನರಿರುವ ಮನೆಯೊಳಗೆ
ತೂರಿಸಿದಂತೆ ಮಾಡಿದ್ದಾರೆ:** ಕನ್ನಡ ಸಾಹಿತ್ಯ ಬಲ್ಲವರಿಗೆಲ್ಲ ಹರಿಹರನ ಬಸವ
ರಾಜ ದೇವರ ರಗಳೆ ಲಭ್ಯವಿರುವುದು ಕೇವಲ 13 ನೆಯ ಸ್ಥಲದವರೆಗೆ ಮಾತ್ರ.
ಅಲ್ಲಿಯವರೆಗಿನ ನಿರೂಪಣೆಯಲ್ಲಿ ಇನ್ನೂ ಯಾವ ವಿರಸದ ಘಟನೆಯೂ ನಡೆದಿಲ್ಲ

ಎಂಬುದು ತಿಳಿದ ಸಂಗತಿ. ಕಾವ್ಯವು ಅಪೂರ್ಣವಾಗಿ ಇರುವುದರಿಂದ ಅದಕ್ಕೊಂದು ಕೊನೆ ಕಾಣಿಸಬೇಕೆಂದು ಯಾರೋ ಒಬ್ಬ ಅನಾಮಿಕ ಕವಿಯೋ ಅಥವಾ ಪುರಾಣ-ಕೀರ್ತನಕಾರರೋ ಅವಸರ ಅವಸರವಾಗಿ ಬರೆದು ಕೃತಿಯನ್ನು ಪೂರೈಸಿದ್ದಾರೆ. ಎಂದು ಬಹಳ ಜನ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶರಣರನ್ನು ನೋಯಿಸಿದ್ದರಿಂದ ವಿರೋಧಿಯಾದ ಬಿಜ್ಜಳನನ್ನು ಕೊಲ್ಲಲು ಬಸವಣ್ಣನವರು ಒಪ್ಪಿಗೆ ಕೊಟ್ಟಿದ್ದರೂ ಕೊಟ್ಟಿರಬಹುದೆಂಬುವ ಬಸವ ಪುರಾಣ ಕರ್ತೃ ಮತ್ತು ಡಾ॥ ಪಿ. ವಿ. ನಾರಾಯಣ ಅವರದು ತಪ್ಪು ಊಹೆ. ಏಕೆಂದರೆ ದೂರಾಲೋಚನೆಯ ಮುತ್ಸದ್ದಿ ಬಸವಣ್ಣನವರಿಗೆ ಬಿಜ್ಜಳನು ಜೀವಂತವಾಗಿದ್ದರೇ ಶರಣರಿಗೆ ರಕ್ಷಣೆ ಎಂದು ತಿಳಿದಿದ್ದಿತು. ಬಿಜ್ಜಳನು ತಾನು ಸ್ವಭಾವತಃ ಅಧ್ಯಾತ್ಮಿಕ ಪ್ರವೃತ್ತಿಯುಳ್ಳವನಲ್ಲ; ರಾಜ್ಯವನ್ನಾಳಬೇಕೆಂಬ ಮಹತ್ವಾಕಾಂಕ್ಷೆಯ ವ್ಯಕ್ತಿ. ಆದರೆ ಮತಾಂಧನಂತೂ ಅಲ್ಲವೇ ಅಲ್ಲ. ಎಷ್ಟೋ ಬಾರಿ ಅವರಿವರು ಚಾಡಿ ಹೇಳುತ್ತಲೇ ವಿಹ್ವಲಗೊಂಡು ಸಂಶಯ ಪಟ್ಟರೂ, ಬಸವಣ್ಣನವರು ಪ್ರಸಂಗವನ್ನು ವಿವರಿಸುತ್ತಲೇ ಒಡಂಬಡುವ ಸ್ವಭಾವದವನು. ಹೀಗಾಗಿ ಬಸವಣ್ಣನವರು ಬಿಜ್ಜಳನ ಬಗ್ಗೆ ಬಹಳ ವಿಶ್ವಾಸವನ್ನೂ, ಅವನ ಹೊಯ್ದಾಡುವ ಸ್ವಭಾವಕ್ಕಾಗಿ ಸಹಾನುಭೂತಿಯನ್ನೂ ಹೊಂದಿದ್ದರು. ಕೆಲವರು ತೀವ್ರವಾದಿ ಶರಣರು ಹೋರಾಟಕ್ಕಿಳಿಯಲು ತವಕಿಸುತ್ತಿದ್ದರೂ, ಅವರನ್ನೆಲ್ಲ ನೀತಿ – ಅಹಿಂಸೆಯ ಬೋಧನೆ ನೀಡಿ ತಡೆಹಿಡಿಯುತ್ತಿದ್ದರು. ಬಸವಣ್ಣನವರ ದೈವಿಕ ಮತ್ತು ನೈತಿಕ ಪ್ರಭಾವಳಿ ಬಿಜ್ಜಳನಿಗೆ ರಕ್ಷೆಯಾಗಿದ್ದರೆ, ಬಿಜ್ಜಳನ ಉದಾರವಾದ, ಶರಣರ ವಿಚಾರಧಾರೆ ಬಗ್ಗೆ ಮೆಚ್ಚುಗೆ ಬಸವ ಧರ್ಮವು ಪ್ರಸಾರವಾಗಲೂ ಅನುಕೂಲವಾಗಿದ್ದವು. ತಾನು ಲಿಂಗವಂತ ಧರ್ಮದೀಕ್ಷೆಯನ್ನು, ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದಂತೆ, ಸ್ವೀಕರಿಸದಿದ್ದರೂ ಅಪ್ರತ್ಯಕ್ಷ ಪೋಷಕನಾಗಿ ಬಿಜ್ಜಳನಿದ್ದ. ಡಾ॥ ಪಿ. ವಿ. ನಾರಾಯಣರು ಭಾವಿಸಿದಂತೆ ಆತ ವಿರೋಧಿಯಾಗಿದ್ದರೆ, ಪ್ರಾರಂಭದಲ್ಲೇ ಈ ಚಳುವಳಿಯನ್ನು ಹತ್ತಿಕ್ಕಬಹುದಿತ್ತು. ದಿಙ್ಮೂಢನಾದ ಬಿಜ್ಜಳನು ಮತಾಂಧರ ಕೈಲಿ ತೀರ್ಪುನೀಡುವ ಸ್ವಾತಂತ್ರ್ಯ ಕೊಟ್ಟುದೇ ಎಲ್ಲಾ ಅನಾಹುತಗಳಿಗೆ ಕಾರಣವಾಯಿತು. ಜಗದೇವ-ಮಲ್ಲಿಬೊಮ್ಮರು ಶರಣರ ವಧೆಯ ನೆಪಮಾಡಿಕೊಂಡು, ತಮ್ಮ ರಾಜಕೀಯ ದ್ವೇಷವನ್ನು ಪೂರೈಸಿಕೊಂಡರು. ಅಲ್ಲಿಗಾಗಲೇ ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದ್ದರು ಎಂದಾಗ ಕೊಲೆಯಲ್ಲಿ ಅವರ ಪಾಲನ್ನು ಯಾವುದೇ ರೀತಿ ಆರೋಪಿಸಲು ಸಾಧ್ಯವಿಲ್ಲ. ಬಸವಣ್ಣನವರ ಅಂತಃಕರುಣೆ, ಮಾರ್ದವತೆ ಗಮನಿಸಿದರೆ ಎಂಥಾ ವಿರೋಧಿಯನ್ನೂ ಅವರು ದ್ವೇಷಿಸದವರು. ಚನ್ನಬಸವಣ್ಣನವರ ವಚನದಲ್ಲಿ ವ್ಯಕ್ತವಾಗುವ ಒಂದು ಅಂಶ, ಬಸವಣ್ಣ – ಬಿಜ್ಜಳರಲ್ಲಿ ರಾಜಕೀಯ ಸಂಬಂಧವೊಂದೇ ಅಲ್ಲದೆ ಸ್ನೇಹ-ಆತ್ಮೀಯತೆ ಸಹ ಇದ್ದವು ಎಂಬುದು. ಬಿಜ್ಜಳನು ತನ್ನ ಪ್ರಧಾನಿ ಎಂದಷ್ಟೇ ಬಸವಣ್ಣನವರನ್ನು ಕಾಣದೆ, ಗೌರವ ಭಾವ ಸಹ ಇಟ್ಟುಕೊಂಡಿದ್ದ.





ತಾಯಿ ನೀಲಾಂಬಿಕೆಯ ಲಭ್ಯವಿರುವ ವಚನಗಳು 125 ರಲ್ಲಿ, ಎಲ್ಲವೂ ಹೆಚ್ಚು ಕಮ್ಮಿ ಬಸವಣ್ಣನವರನ್ನು ಹೊಗಳಿದವೇ ಇರುವವು. ಆಕೆಗೆ ಬಸವಣ್ಣನವರೇ ಆದರ್ಶ, ಆರಾಧ್ಯ ಮತ್ತು ಸರ್ವಸ್ವ. "ಬಸವಣ್ಣನವರ ಬಗ್ಗೆ ಈ ಪರಿಯ ಹಂಬಲವನ್ನಿರಿಸಿಕೊಳ್ಳಲು ಕಾರಣವೇನಿರಬಹುದು ?" (ಪುಟ 163) ಎಂದು ನಾರಾಯಣರು ಪ್ರಶ್ನೆ ಹಾಕಿದ್ದಾರೆ. "ಸುಲಭವಾಗಿ ಸಿಕ್ಕುವ ವಸ್ತುವಿನ ಬಗ್ಗೆ ಈ ಹಂಬಲ ಇರದು. ಕನಿಷ್ಠ ಪಕ್ಷ, ಆಕೆ ಬಸವಣ್ಣನವರಿಂದ **ಮಾನಸಿಕ ದೂರ**ವನ್ನಾದರೂ ಅನುಭವಿಸಿರಬಹುದು." ಎಂದು ತರ್ಕಿಸಿದ್ದಾರೆ. "ಅಂತಹ **ದೂರದ** ಸ್ವರೂಪವಾವುದೋ ನಮಗೆ ಖಚಿತವಾಗಿ ತಿಳಿಯದು." ಎಂದು ಮುಗಿಸಿದ್ದಾರೆ. (ಸದ್ಯ ಡಾ॥ ಕಲಬುರ್ಗಿಯವರಷ್ಟು ಧಾರ್ಷ್ಟ್ಯ ತೋರಿಸಿಲ್ಲ ಎಂಬುದು ಸಮಾಧಾನಕರ ಸಂಗತಿ.)

ನಿಜ, ಅಂಥವೆಲ್ಲ ಇವರಿಗೆ ತಿಳಿಯವು. ಯಾಕೆಂದರೆ ತೀವ್ರ ಅಧ್ಯಾತ್ಮ ಜೀವಿಗಳ ಒಲವು-ನಿಲುವು ಎಲ್ಲರಿಗೂ ತಿಳಿಯವು. ಇಷ್ಟೇ ಅಲ್ಲ, ಸೂಕ್ತ ಪದಗಳನ್ನು ಆಯಾ ಸ್ಥಿತಿಗೆ ಬಳಸುವುದು ಮೊದಲೇ ತಿಳಿಯದು; ಬಸವಣ್ಣನವರನ್ನು ಕುರಿತು ನೀಲಮ್ಮನ ವಚನಗಳಲ್ಲಿ ಬರುವುದು **'ಹಂಬಲ'**ವಲ್ಲ, **'ಬೆರಗು'**, **'ವಿರಹ'**ವಲ್ಲ **'ಮೆಚ್ಚುಗೆ'**. ಒಂದು ಮಗು ಸಹಜವಾಗಿ ಆಟದ ಗೊಂಬೆಯೊಂದರೊಡನೆ ಆಡುತ್ತಲಿರುವಾಗ ಅದು ಬೆಳೆದು, ಬೆಳೆದು ಕಣ್ ದೃಷ್ಟಿಗೆ ನಿಲುಕದಂತೆ ನಿಂತರೆ, ಆ ಮಗು ಏನು ಮಾಡೀತು? ಬೆಪ್ಪಾಗಿ, ಬೆರಗಾಗಿ ನೋಡುತ್ತದೆ. ತೊದಲ್ನುಡಿಯಲ್ಲಿ ಏನನ್ನೋ ಉಲಿಯುತ್ತದೆ ಅಷ್ಟೇ.

ಹಾಗೆ ನೀಲಾಂಬಿಕೆ ಕೈ ಹಿಡಿದುದು ಒಬ್ಬ ಪುರುಷನೆಂದು, ಬಸವಣ್ಣನವರನ್ನು ಆದರೆ ಬರುಬರುತ್ತ ಅವರು ಬೆಳೆದರು, ಬೆಳೆದರು. ಆಕೆ ಅರ್ಥಮಾಡಿಕೊಳ್ಳಲಾರದಷ್ಟು ಬೆಳೆದರು. ಅಷ್ಟೇ ತೀವ್ರಗತಿಯಲ್ಲಿ ಆಕೆ ಬೆಳೆಯಲಾರದಾದಾಗ ಕೊಂಚ ನಿರಾಶೆಗೊಂಡಳು, ದುಃಖ ಪಟ್ಟಳು. ದಾಂಪತ್ಯ ಜೀವನ ವಿಧಾನವನ್ನು ಬಸವಣ್ಣನವರು ಅರಿಸಿಕೊಂಡರೂ ಕೆಲವೇ ದಿನಗಳಲ್ಲಿ ಅವರು ಸ್ವಯಂಪ್ರೇರಣೆಯ ಸಂಯಮ ಸ್ವೀಕರಿಸಿದರು. ಮನಸ್ಸು ಶರಣ ಸ್ಥಲಕ್ಕೆ ಏರುತ್ತಲೇ ಅವರಿಗೆ ಕಾಮಸಂಬಂಧಿಯಾದ ಸುಖ ಬೇಡವಾಯಿತು. "ಶರಣಸತಿ–ಲಿಂಗಪತಿಯಾದ ಬಳಿಕ ಶರಣಂಗೆ ಸತಿ ಸಂಗ ಅತಿ ಘೋರ ನರಕ." ಎಂಬಂತೆ ಮನಸ್ಸು ಕಾಯಸುಖವನ್ನು ಹೊಂದಬಯಸಲಿಲ್ಲ. ಆಗ, ನೀಲಾಂಬಿಕೆಯ ಮನಸ್ಸು ಇನ್ನೂ ಈ ತ್ಯಾಗಕ್ಕೆ ಅಣಿಗೊಂಡಿರಲಿಲ್ಲ.

ಆದ್ದರಿಂದ, ನಾರಾಯಣರು ಬಳಸಿದ ಪದ **'ಮಾನಸಿಕ ದೂರ'** ಎಂಬುದು ಸರಿಯಲ್ಲ. ಪ್ರೇಮ ಮಾನಸಿಕ, ಕಾಮ ಶಾರೀರಿಕ. ಆದ್ದರಿಂದ ಶಾರೀರಿಕ, ಅರ್ಥಾತ್ ಕಾಮಸಂಬಂಧಿ ಸುಖವನ್ನು ಅವರು ತೊರೆದರೇ ವಿನಾ, ನಿಷ್ಕಲಂಕ ಪ್ರೇಮಕ್ಕೆ ಕೊರತೆ ಇರಲಿಲ್ಲ. ಹಂತಹಂತವಾಗಿ ಪತ್ನಿಯನ್ನು ಮೇಲಕ್ಕೇರಿಸಲು

ಅವರು ಪ್ರಯತ್ನಿಸಿದರು. ತಾಯಿ ನೀಲಾಂಬಿಕೆ ಪ್ರಾರಂಭದಲ್ಲಿ ತನ್ನಿಂದ ಆಗದೇನೋ ಎಂದು ಹತಚೇತನಳಾದರೂ, ಅಂತೂ ಗೆದ್ದಳು. ದೊಡ್ಡ ಬೆಟ್ಟವೊಂದನ್ನು ಹತ್ತುವಾಗ ಅಶಕ್ತರು ಸೋತು ಉಸಿರ್ಗರೆಯುವುದನ್ನು, ಸರಾಗವಾಗಿ ಹತ್ತುವವರನ್ನು ಕಂಡಾಗ ಆಶ್ಚರ್ಯಪಟ್ಟು ಮೆಚ್ಚುಗೆ ಸೂಸವುದನ್ನು ನಾವು ಕಾಣುವಂತೆ, ನೀಲಾಂಬಿಕೆಯ ವಚನಗಳಲ್ಲಿ ಭಾವನೆಗಳ ತಾಕಲಾಟ ಕಾಣುತ್ತೇವೆ. ಆದರೆ ತಾನೂ ಅಂತಿಮವಾಗಿ ಜಯಶಾಲಿಯಾದಾಗ ಅತೀವ ಸಂತೋಷ ಉಂಟಾಯಿತಲ್ಲದೆ, ಬಸವಣ್ಣನವರ ಬಗ್ಗೆ ಇದ್ದ ಪ್ರೇಮ, ಗೌರವದಲ್ಲಿ ಪರ್ಯವಸಾನ ಹೊಂದಿತು. ಗುರು ಬಸವಣ್ಣನವರಿಗೂ ಅಷ್ಟೇ ಸಂತೋಷವಾಯಿತು. ಪತ್ನಿಯ ಸಹಕಾರದಿಂದ ಸಾಧನೆ–ಸಂಕಲ್ಪ ಪೂರ್ಣಗೊಂಡವು. ಪತ್ನಿಯನ್ನು ಅವರು ಬೌದ್ಧಿಕ ಸಂಗಾತಿ, 'ವಿಚಾರ ಪತ್ನಿ' (intellectual companion) ಎಂದು ತಿಳಿದರಲ್ಲದೆ, ಅಂತಿಮ ದಿನಗಳಲ್ಲಿ ಆಕೆಗೆ ಕೂಡಲಸಂಗಮಕ್ಕೆ ಬರಹೇಳಿದರು. ಹೀಗೆ ದಾಂಪತ್ಯ ಸುಖವನ್ನು ಉಭಯತರೂ ಪರಸ್ಪರ ಸಹಕಾರದಿಂದ ತೊರೆದರೂ, ಮಾನಸಿಕ ಸಂಬಂಧ ಇನ್ನೂ ಗಾಢವಾಯಿತು. ಈ ಸ್ಥಿತಿ ಸಹಜವಾಗಿ ಅಳವಟ್ಟಾಗ ನುಡಿದ ವಚನಗಳನ್ನು ನೋಡಿರಿ.

೧. ಅತೀತವಡಗಿ, ನಿರಾಲಂಬದ ಮನದ ಮೂರ್ತಿಯಂ ತಿಳಿದು
**ಮನೋವ್ಯಾಧಿಯ** ಪರಿಹರಿಸಿಕೊಂಡು.
ಭಾವದ ಸೂತಕವಳಿದು, ಬ್ರಹ್ಮದ ನೆಮ್ಮುಗೆಯಂ ತಿಳಿದು,
ಮನ ವಿಶ್ರಾಂತಿಯ ನೆಯ್ದಿ, ವಿಚಾರದನುಭವವನರಿದು
**ವಿವೇಕದಿಂದಾನು ವಿಶೇಷ ಸುಖವ ಕಂಡೆನಯ್ಯಾ**
ಸಂಗಯ್ಯಾ, **ಬಸವನಿಂದಲಿ !** [ನೀ.ವ. 79]

೨. ಮಡದಿ ಎನಲಾಗದು ಬಸವಂಗೆ ಎನ್ನನು.
ಪುರುಷನೆನಲಾಗದು ಬಸವನ ಎನಗೆ,
ಉಭಯ ಕುಳವಹರಿದು ಬಸವಂಗೆ ಶಿಶುವಾನಾದೆನು ;
ಬಸವನೆನ್ನ ಶಿಶುವಾದನು
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿವ್ಯವ ಮೀರಿದೆ, ಬಸವನೊಳಗಾನಡಗಿದೆ. [ನೀ.ವ.107]

ನೀಲಮ್ಮ ತಾಯಿ ಕಡೆಗೆ ಬಸವಣ್ಣನವರನ್ನು ಪತಿ ಎಂದು ತಿಳಿಯುವುದನ್ನು ಬಿಟ್ಟಳು.

ಬಸವಣ್ಣನೆ ಗುರುವೆಂದು ಭಾವಿಸಲಾಗಿ
ಎನಗೆ **ಬಸವಣ್ಣನೆ** ಗುರುವಾದೆನಯ್ಯಾ,
............ಇಂತೀ ಐವರ ಕಾರುಣ್ಯ ಪ್ರಸಾದವನುಂಡು
ಮಹಾಮನೆಯಲ್ಲಿ ಸುಖಿಯಾದೆ, ಸಂಗಯ್ಯ [ನೀ.ವ. 124]

ಹೀಗೆ ಬಸವಣ್ಣ-ನೀಲಮ್ಮರ ದಾಂಪತ್ಯ ನಡೆದಾಗ, ಬಸವಣ್ಣನವರ ವ್ಯಕ್ತಿತ್ವ, ಸಾಧನೆ, ಸಂದೇಶ, ಅವಳನ್ನು ಬೆರಗುಗೊಳಿಸಿದವು.



ಬಸವಣ್ಣನವರ ವ್ಯಕ್ತಿತ್ವ ಎಂಥವರನ್ನೂ ಮರುಳುಮಾಡುತ್ತದೆ. ಬರೀ ವೈಯಕ್ತಿಕ ಸಾಧನೆ, ಆತ್ಮೋದ್ಧಾರದಲ್ಲಿ ಸೀಮಿತರಾಗಬೇಕೆಂದು ಪಾರಮಾರ್ಥ ಪಥಕ್ಕೆ ಬಂದ ನಮ್ಮಂತಹವರನ್ನೇ ಬೆಪ್ಪು ಹಿಡಿಸಿ, ಜೀವನ ಪರ್ಯಂತರ ಆ ಮಹಾಗುರುವಿನ ವ್ಯಕ್ತಿತ್ವ-ತತ್ತ್ವದ ಪ್ರಚಾರ ಮಾಡಬೇಕು ಎಂಬ ಭಾವ ಬೆಳೆಸಿರುವಾಗ ಇನ್ನು ಪ್ರತ್ಯಕ್ಷವಾಗಿ ಆ ಮಹಾಪುರುಷನ ಜೊತೆಗೆ ಒಡನಾಡಿದ, ಕಂಡ ಚನ್ನಬಸವಣ್ಣ. ಮಾಚಿದೇವ, ಅಪ್ಪಣ್ಣ, ನೀಲಾಂಬಿಕೆ ಮುಂತಾದವರು 'ಬೆರಗುಗೊಂಡು' ಏಕೆ ಹೊಗಳಿರಬಾರದು? ಕರ್ತನೆಂಬ ಭಿತ್ತಿ [ಕ್ಯಾನ್‌ವಾಸ್] ಯ ಮೇಲೆ ಮೂಡಿರುವ ಬಸವಣ್ಣನೆಂಬ ವರ್ಣ ತೈಲ ಚಿತ್ರ, ತನ್ನಲ್ಲಿ ನೋಡುಗನ ದೃಷ್ಟಿಯನ್ನು ಹೇಗೆ ಸೆರೆ ಹಿಡಿಯುತ್ತದೆ ಎಂದರೆ ನೋಡುವವನು ಆ ಭಿತ್ತಿಯನ್ನು ಮರೆತೇ ಬಿಡುವಂತೆಯೂ ಆಗಿಬಿಟ್ಟಿರುತ್ತದೆ. ಇದನ್ನು ಮಡಿವಾಳ ಮಾಚೀದೇವರ ವಚನದಲ್ಲಿ ಕಾಣುತ್ತೇವೆ.

## ಜಂಗಮ ಮಹತಿ

"ವಚನಕಾರರು ಅವರಿಬ್ಬರನ್ನೂ (ಗುರು-ಜಂಗಮರನ್ನು) ಲಿಂಗದ ಸರಿಸಮರಾಗಿ ಪರಿಗಣಿಸಿ ಅಟ್ಟಕ್ಕೇರಿಸಿದ್ದರಿಂದ ಒಂದೆಡೆ ಪುರೋಹಿತಶಾಹಿಯ ಪುನರ್ನಿರ್ಮಾಣವಾಯಿತು; ಮತ್ತೊಂದೆಡೆ ಮನುಷ್ಯರು ಮನುಷ್ಯರನ್ನೇ ದೇವರೆಂದು ಕರೆದು ಸಮಾನತೆಯ ಭಾವನೆ ಧೂಳೀಪಟವಾಯಿತು."

"ಸಾಮಾನ್ಯರನ್ನು ಗುರು-ಜಂಗಮರು ಶೋಷಿಸಲು ಕಾರಣವಾಯಿತು."

ಪುಟ 96-97

"ಬಸವಣ್ಣ ವೈದಿಕ ಮತವನ್ನು ಧಿಕ್ಕರಿಸಿದ. ಅಲ್ಲಿನ ಯಜ್ಞ-ಯಾಗಾದಿಗಳನ್ನು ಅಲ್ಲಗಳೆದ, ವೀರಶೈವರೆಲ್ಲರ ಸಮಾನತೆಯನ್ನು ಬೋಧಿಸಿದ. ಆದರೆ ಅವನೇ ಒಂದು ತಪ್ಪುಮಾಡಿದನೇನೋ ಎನ್ನಿಸುತ್ತದೆ. ಆ ತಪ್ಪು ಎಂದರೆ ಜಂಗಮರಿಗೆ ಕೊಟ್ಟ ಅತಿ ಪ್ರಾಶಸ್ತ್ಯ." ಜಂಗಮವೆ ಲಿಂಗವೆನಗೆ, ಜಂಗಮವೆ ಪ್ರಾಣವೆನಗೆ" ಎಂದು ಹೇಳಿಕೊಂಡ. ಭಕ್ತನ ಕ್ರಮವೆಂತೆಂದೊಡೆ, ತಾನು ಭೋಗಿಸುವಂತಹ ಸಕಲ ದ್ರವ್ಯಂಗಳೆಲ್ಲವನು ಜಂಗಮಕ್ಕೆ ಕೊಟ್ಟು ತಾನು ಕೊಳ್ಳಬೇಕು." (ಪುಟ 95)

[ದಯವಿಟ್ಟು ಬಸವ ಸಮಿತಿಯವರು ಈ ಪ್ಯಾರಾಗ್ರಾಫ್ ಪೂರ್ತಿ ಓದಲಿ. ವಿಸ್ತರಿಸಿ ಬರೆಯುತ್ತ, ನನ್ನ ಸಮಯ ಹಾಳಾಗುವುದಲ್ಲ ಎಂಬ ವ್ಯಥೆಯನ್ನು ತಡೆದುಕೊಳ್ಳುತ್ತ ಈ ವಿಮರ್ಶೆ ಬರೆಯುತ್ತಿದ್ದೇನೆ. ಒಂದೊಂದು ವಿಷದ ಗುಳಿಗೆಯನ್ನು ನಾರಾಯಣರು ತೂರಿಸುತ್ತಲೇ ಹೋಗಿದ್ದಾರೆ. ಇವಕ್ಕೆಲ್ಲ ಉತ್ತರ ಕೊಟ್ಟರೆ ಎಷ್ಟು ಸಮಯ ಹೋದೀತು? ನಾರಾಯಣರ ಉದ್ದೇಶ ವಿಡಂಬನೆಯೇ ವಿನಾ ಪ್ರತಿಪಾದನೆಯಲ್ಲ ಎಂಬುದು ಬಹಳ ಕಡೆ ಸ್ಪಷ್ಟವಾಗಿ ಗೋಚರವಾಗುತ್ತದೆ.]

ಸುಖೀ "ಜಂಗಮನ" ಪ್ರಸಂಗ ಹರಿಹರನ ಕಟ್ಟುಕಥೆ. ಸಿಂಧುಬಲ್ಲಾಳನ ಪತ್ನಿಯನ್ನು ಆತ ಕೊಟ್ಟುದನ್ನು ಒಂದು ದೊಡ್ಡ ಆದರ್ಶವನ್ನಾಗಿ ಭಾವಿಸಿಕೊಂಡ ಹರಿಹರನು, ಬಸವಣ್ಣನವರ ಜೀವನದಲ್ಲಿ ತೂರಿಸಲು ಹೋಗಿದ್ದಾನೆ. ಬಸವಣ್ಣನವರ

ನಂಬಿಕೆ–ಬೋಧನೆಗಳಲ್ಲಿ ನೀತಿ, ಪರಧನ–ಪರಸತಿಯರ ಒಲ್ಲದ ಪರಿಶುದ್ಧತೆಯೇ ಪ್ರಮುಖವಾಗಿದೆ. ಮತ್ತು ಅನೀತಿವಂತನನ್ನು, ನಿಷ್ಠುರವಾಗಿ ಖಂಡಿಸಿ, ಮಾತನಾಡುವ ಅವರು, ಜಂಗಮನೆಂದು ಗೌರವಿಸುವುದುಂಟೆ? ವಚನ 1034 ನೋಡಿರಿ.

ಆಚಾರವಿಡಿದು ಗುರು, ಆಚಾರವಿಡಿದು ಲಿಂಗ,
ಆಚಾರವಿಡಿದು ಜಂಗಮ, ಆಚಾರವಿಡಿದು ಪ್ರಸಾದ
ಆಚಾರವಿಡಿದು ಭಕ್ತ, ಆಚಾರವಿಡಿದು ಶರಣ
ಆಚಾರವಿಲ್ಲದಿರ್ದಡೆ ಗುರುವಲ್ಲ, ನರನು
ಆಚಾರವಿಲ್ಲದಿರ್ದಡೆ ಲಿಂಗವಲ್ಲ, ಪಾಷಾಣ
ಆಚಾರವಿಲ್ಲದಿರ್ದಡೆ ಜಂಗಮವಲ್ಲ, ಅಶನಧಾರಿ
ಆಚಾರವಿಲ್ಲದಿರ್ದಡೆ ಪ್ರಸಾದವಲ್ಲ, ಎಂಜಲು
ಆಚಾರವಿಲ್ಲದಿರ್ದಡೆ ಶರಣನಲ್ಲ, ಮರುಳು
ಇಂತಿವೆಲ್ಲಕ್ಕೆಯೂ ಸದಾಚಾರವೇ ಕಾರಣ,
ಕೂಡಲ ಸಂಗಮದೇವಾ.

ಪರಸ್ತ್ರೀಯನ್ನು ಬಯಸುವವನು, ಹೆಂಗೂಸಿಲ್ಲದೆ ಇರ್ದುದಿಲ್ಲ ಎಂದು ಕೇಳುವ ಅನಾಚಾರಿಯನ್ನು ಜಂಗಮ ಎಂದು ಬಸವಣ್ಣನವರು ಗೌರವಿಸುವುದುಂಟೆ ? ಅವನ ತುಚ್ಛ ಬೇಡಿಕೆ ಈಡೇರಿಸುವುದುಂಟೆ ? ಆ ರೀತಿಯಾಗಿ ಆಲೋಚಿಸುವ ಮೂಢ ಭಕ್ತನನ್ನು ಎಷ್ಟು ಕಠಿಣವಾದ ಭಾಷೆಯಲ್ಲಿ ಖಂಡಿಸಿದ್ದಾರೆ ನೋಡಿ :

ಸದ್ಗುರು ಮಾರ್ಗಾಚಾರದ ನೆಲೆ ಕಲೆಯನರಿಯದೆ
ಸದಾಚಾರ ಸದ್ಭಕ್ತನಲ್ಲಿ ಆಡಂಬರ, ಲಾಂಛನದ ವೇಷವ ಧರಿಸಿ,
ಗ್ರಾಸವ ಹೊರೆದು ಗುಹ್ಯಲಂಪಟ ಹೆಚ್ಚಿ
ಆ ಭಕ್ತನ ಕ್ರಿಯಾಶಕ್ತಿಗೆ ಭ್ರಮಿಸುವನೊಬ್ಬ ಚರಪ್ರಾಣಿಯು
ಜಡಜಂತುವೆಂಬೆನಯ್ಯಾ,
ಅಂತಾ ಕಾಮವಿಕಾರ, ಭ್ರಾಂತನ ಕಾಮನ ಪರಿಹರಿಸಿ,
ಲಿಂಗಾಂಗ ನಿಷ್ಕಾಮಪರತ್ವವ ಹೇಳದೆ,
ತಾ ಭೋಗಿಸುವ ಸ್ತ್ರೀಯಳ ಕೊಡುವನೊಬ್ಬ
ಸ್ಥಾವರ ಪ್ರಾಣಿಯ ಕ್ರಿಮಿಕೀಟಕ ಪ್ರಾಣಿಯೆಂಬೆನಯ್ಯಾ
ಇಂತು ತನುಮನ ಧನಂಗಳ ಕೊಟ್ಟುಕೊಂಬ ವಿಚಾರವನರಿಯದೆ
ಬಿಂದುವೇ ನಿಜಶೇಷವೆಂದು ತಿಳಿಯುವ
ಮೂಳನಿಗೆಲ್ಲಿಯದೋ ತ್ರಿವಿಧ ಪ್ರಸಾದ ?
ಸ್ಥಲದಿಂದ ಸ್ಥಲವನರ್ಪಿಸುವುದು ಒಡಲ ಗುಣ
ನಿಃ ಸ್ಥಲದಿಂದ ನಿಃಸ್ಥಲವನರ್ಪಿಸುವುದು ಪ್ರಾಣನ ಗುಣ
ನೋಡಿ ಅರ್ಪಿವುದೇ ಅರ್ಪಿತಗುಣ



ಇಂತಾ ಮಹಾಂತರ ತೋರಿ ಬದುಕಿಸಯ್ಯಾ
ಕೂಡಲ ಸಂಗಮದೇವಾ. [ಬ.ಷ.ಹೆ.ವ 1125]

ಕಪಟಿಯಾದ, ವಿಷಯಾಸಕ್ತನಾದ ಜಂಗಮನನ್ನು ಜಡಜಂತುವೆಂದು, ಅವನಿಗೆ ತನ್ನ ಪತ್ನಿಯನ್ನು ಮೂಢಭಕ್ತಿಯಿಂದ ಒಪ್ಪಿಸುವವನನ್ನು ಕ್ರಿಮಿಕೀಟಕವೆಂದು, ಮೂಳನೆಂದು ಕೋಪದಿಂದ ಬೈಯುವ ಬಸವಣ್ಣನವರು ತಾವು ಆ ತಪ್ಪು ಮಾಡುವರೇ ? ಪಿ.ವಿ. ನಾರಾಯಣರಂತಹ ಸಾಹಿತಿಗಳು ವ್ಯಂಗ್ಯದ ಮಾತುಗಳಿಂದ ಚುಚ್ಚಿ ಆರೋಪ ಕೊಡುವುದು ಒಳ್ಳೆಯದಲ್ಲ. ಪುರಾಣಗಳ ಕಾವ್ಯಗಳ, ಆಧಾರ ಹಿಡಿದು ಬಸವಣ್ಣನವರ ನಂಬಿಕೆ, ವ್ಯಕ್ತಿತ್ವ, ತತ್ತ್ವಗಳನ್ನು ತಿಳಿಯುವುದಕ್ಕಿಂತಲೂ ವಿಪುಲವಾಗಿ ಸಿಗುವ, ಅವರ ಆತ್ಮಕಥನವಾಗಿರುವ ವಚನಗಳ ಆಧಾರದ ಮೇಲೆ ಅಳೆಯಬೇಕು.

ಗುರು-ಜಂಗಮತ್ವಗಳನ್ನು ಅರಿವು-ಆಚಾರ-ಅನುಭಾವಗಳ ಗಳಿಕೆಯ ಮೇಲೆ ನಿರ್ಧರಿಸಿ, ಅಂಥ ಗುರು-ಜಂಗಮರನ್ನು ಗೌರವಿಸಲು ಹೇಳಿದ್ದಾರೆ.

ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ
ದೀಕ್ಷೆ, ಉಪದೇಶವ ಕೊಳ್ಳಲಾಗದು...........
ಕ್ರಿಯಾಚಾರವಿಲ್ಲದ ಭೂತಪ್ರಾಣಿಗಳಲ್ಲಿ
ಜಂಗಮವೆಂದು ಪಾದೋದಕ-ಪ್ರಸಾದವ ಕೊಳಲಾಗದು
ಇಂತಪ್ಪ ಆಚಾರವಿಲ್ಲದ, ಅನಾಚಾರವ ಬಳಸುವ ದುರಾಚಾರಿಗಳಲ್ಲಿ
ಉಪದೇಶವ ಹಡೆದು, ಪಾದೋದಕ ಪ್ರಸಾದವ ಕೊಂಡವಂಗೆ
ಅಘ ನಾಸ್ತಿಯಾಗದು, ಮುಂದೆ ಅಘೋರ ನರಕ ತಪ್ಪದು
ಕಾಣಾ, ಕೂಡಲ ಸಂಗಮದೇವಾ. [ಬ.ಷ.ಹೆ.ವ 1123]

ಆಚಾರ-ವಿಚಾರ ಸಂಪನ್ನರಾದ ಗುರು-ಜಂಗಮರನ್ನು ಗೌರವಿಸಿ, ಅವರಿಂದ ಜ್ಞಾನ-ಅನುಗ್ರಹ ಪಡೆದುಕೊಳ್ಳುವುದು ಭಕ್ತನ ಕರ್ತವ್ಯ. ದುರಾಚಾರಿಯನ್ನು ದೂರವಿಡುವುದೂ ಅಷ್ಟೇ ಮುಖ್ಯ ಎಂದ ಮೇಲೆ ಪಿ. ವಿ. ನಾರಾಯಣರು ಹೇಳಿದಂತೆ ಎಲ್ಲಿ ಅವರನ್ನು ಅಟ್ಟಕ್ಕೇರಿಸಿದ್ದಾರೆ, ಆಲೋಚಿಸಿರಿ.

ಶರಣರು ಹುಟ್ಟಿನಿಂದಲೇ ಗುರು-ಜಂಗಮ ಎಂದು ಯಾರನ್ನೂ ತಿಳಿಯುವುದಿಲ್ಲ. ಆ ಬಗೆಯ ವಚನವು, ಚನ್ನಬಸವಣ್ಣನವರ ಹೆಸರಿನಲ್ಲಿ [ಚ.ಬ.ವ. 418] ಮುದ್ರಣಗೊಂಡಿದ್ದೇ ಆದರೆ ಅದು ಸೇರಿಸಲ್ಪಟ್ಟುದು. ಮಹಾಜಂಗಮರಾದ ಅಲ್ಲಮ ಪ್ರಭು, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ ಮುಂತಾದವರ ನಟುವರಜಾತಿ, ಕುಡು ಒಕ್ಕಲಿಗ, ಮಾಡಿವಾಳ ಜಾತಿಯವರು. 'ವ್ಯಾಸಬೋಯಿತಿಯ ಮಗ ಮಾರ್ಕಂಡೇಯ ಮಾತಂಗಿಯ ಮಗ' ಎಂದು ದಿಟ್ಟತನದಿಂದ ನುಡಿದವರು ಸದ್ವಂಶದಲ್ಲಿ ಹುಟ್ಟುವಿಕೆಯನ್ನು ಗಣನೆಗೆ ತರುವುದುಂಟೆ? ಪುಣ್ಯತೀರ್ಥಕ್ಷೇತ್ರದ ಕಲ್ಲನ್ನೂ ಅವರು ಲಿಂಗವೆನ್ನರು, ಇದೇ ವಚನದ ಮೊದಲೆರಡು ಸಾಲು ಹೇಳುವಂತೆ, ಮೂಲ ಸಿದ್ಧಾಂತ, ದೃಷ್ಟಿ

ಕೋನಕ್ಕೆ ಪೂರ್ತಿ ಭಿನ್ನವಾದ ವಿಚಾರಧಾರೆಯ ವಚನಗಳನ್ನು ಪರೀಕ್ಷೆಗೆ ಒಳಪಡಿಸದೆ ನಾವು ತಗೆದುಕೊಳ್ಳಲು ಆಗುವುದಿಲ್ಲ.

ಗುರು-ಜಂಗಮ ಪೂಜೆ ಅಸಮಾನತೆಯ ಪ್ರತೀಕವಲ್ಲ. ಇದರಿಂದ ಸಮಾನತೆಯ ಭಾವ ಧೂಳೀಪಟವಾಗಲಿಲ್ಲ. ಆದರ ಮೂಲ ಉದ್ದೇಶ ಬಹುಘನವಾದುದು. ಸಿದ್ಧ ರಾಮೇಶ್ವರರಿಗೆ ಲಿಂಗಧಾರಣೆ ಆದಮೇಲೆ ಗದ್ದುಗೆ ಮೇಲೆ ಕೂರಿಸಿ ಜಂಗಮ ಪೂಜೆ ಮಾಡುವ ಪ್ರಸಂಗ ಬರುತ್ತದೆ. ಆವರು ಸಂಕೋಚ ಪಡುತ್ತಾರೆ. "ನನ್ನ ಗುರು ಚನ್ನಬಸವಣ್ಣ, ಗುರುವಿನ ಗುರು ಪರಮಗುರು ಬಸವಣ್ಣ ಇವರ ಎದುರಿಗೆ ನಾನು ಗದ್ದುಗೆ ಏರಬೇಕೆ?" ಎನ್ನುವರು. ಉಳಿದ ಶರಣರು ಬಿಡದೆ ಅವರ ಪೂಜೆ ಮಾಡುತ್ತಾರೆ. ಪ್ರಭುದೇವರ ಪಾದಪೂಜಾ ಸನ್ನಿವೇಶವು ಅಷ್ಟೇ ಅರ್ಥಗರ್ಭಿತವಿದೆ.

ಹರಳಯ್ಯ ಶರಣರು ಚಮ್ಮಾವುಗೆ ಹೊತ್ತು ತಂದಾಗ ತಲೆ ಬಾಗಿಲಲ್ಲಿ ಪಾದಪೂಜೆ ನಡೆಯುತ್ತದೆ, ಏಕೆ? ಅನೇಕ ನಿಮ್ನವರ್ಗದವರು ಸಂಸ್ಕಾರ ಸಹಿತರಾದರೂ ಇನ್ನೂ ಕೀಳರಿಮೆಯ ಮುಜುಗರ ಅವರನ್ನು ಕಾಡುತ್ತಿರುತ್ತದೆ. ಅದೇ ರೀತಿ, ಮೇಲ್ವರ್ಣ ದಿಂದ ಬಂದವರು ಆವರನ್ನು ಕಡೆಗಣ್ಣಿನಿಂದ ನೋಡುವ ಸಾಧ್ಯತೆ ಇರುತ್ತದೆ, ಈ ಭೇದ ತೊಲಗಬೇಕಾದರೆ ಆತನನ್ನು ಜಂಗಮ ಮೂರ್ತಿ ಎಂದು ಭಾವಿಸಿ ಪೂಜಿಸಿ ಬಿಡಬೇಕು. ಎಂಬುದೇ ಬಸವಣ್ಣನವರ ಉದಾತ್ತ ಉದ್ದೇಶ. [ಏಸೂ ಕ್ರಿಸ್ತನು ಕಡೆಯ ರಾತ್ರಿಯ ಊಟದ ಸನ್ನಿವೇಶದಲ್ಲಿ ಶಿಷ್ಯರ ಪಾದಪೂಜೆ ಮಾಡುವುದನ್ನು ಇಲ್ಲಿ ನೆನಪಿಸಿಕೊಳ್ಳ ಬಹುದು. John : 13: 1-20 Good News Bible. ಆ ಪಾದಪೂಜೆ ಮಾಡುವಾಗ ಪ್ರವಾದಿ ಏಸುವು ಹೇಳುವ ಒಂದೊಂದು ಮಾತೂ ಅಮೋಘವಾಗಿವೆ.] ಆದಕ್ಕೆ ಬಸವಣ್ಣನವರು ಹೇಳುವರು :

ದಾಸೀಪುತ್ರನಾಗಲೀ ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ,
ಪಾದೋದಕ-ಪ್ರಸಾದವ ಕೊಂಬುದೇ ಯೋಗ್ಯ
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ, ನರಕ ಕಾಣಾ, ಕೂಡಲಸಂಗಮದೇವ

[-ಬ. ಷ. ವ 1210]

ಎಂಥವನೇ ಇರಲಿ, ಅವನ ಪಾದಗಳನ್ನು, ಅಂದರೆ ಸಾಂಪ್ರದಾಯಿಕವಾಗಿ ಕೀಳು ಅಂಗ ಗಳು ಎಂದು ಮಡಿವಂತರು ನಂಬಿರುವವನ್ನು ತೊಳೆಯುವುದರ ಮೂಲಕ ಒಬ್ಬ ಮೇಲರಿಮೆಯನ್ನು, ತನ್ನ ಅಹಂ ಅನ್ನು ತೊಳೆದುಕೊಳ್ಳುತ್ತಾನೆ, ಕೀಳರಿಮೆಯವನು ಆತ್ಮವಿಶ್ವಾಸವನ್ನು ಮೈಗೂಡಿಸಿಕೊಳ್ಳುತ್ತಾನೆ. ಏಸು–ಬಸವಣ್ಣ ಈ ವಿಚಾರದಲ್ಲಿ ಒಂದೇ ರೀತಿ ವರ್ತಿಸಿದ್ದಾರೆ. ಇಂಥ ಸೂಕ್ಷ್ಮ ಸಂಗತಿಗಳ ಮಹತ್ವ ಡಾ॥ ಪಿ. ವಿ. ನಾರಾಯಣರಂಥವರಿಗೆ ತಿಳಿಯಲು ಸಾಧ್ಯವೆ? ಇಂಥವರ ಕಣ್ಣಿಗೆ ಎಲ್ಲರೂ ಮನುಷ್ಯರೇ. "ಹಾಳುಮೂಳು ದೈವಂಗಳನ್ನು ಮಾರಿಮಸಣಿಯಂತಹ ಕ್ರೂರದೈವಗಳನ್ನು, ಜಡ



ಶಿಲೆಗಳನ್ನು ಮೂರ್ತಿಗಳೆಂದು ಮಾಡಿ, ಹಸು-ಹಾವಿನಂತಹ ಪ್ರಾಣಿಗಳನ್ನು ಪೂಜಿಸು ವುದಕ್ಕಿಂತಲೂ ಗುರುಗಳನ್ನು, ಮಹಾತ್ಮರನ್ನು, ಶರಣರನ್ನು, ಅರಿವಿನ ಮಹಾಂತ ರನ್ನು ಪೂಜಿಸುವುದು ಹೀನವೇ?

"ಜಂಗಮ" ಒಂದು ಅದ್ಭುತ, ಕ್ರಾಂತಿಕಾರಿ ಕಲ್ಪನೆಯಾಗಿ, ಬಹುವಿಧಾರ್ಥ ಗಳೊಡನೆ ಬೋಧಿಸಲ್ಪಟ್ಟಿತು. ಕಾಲಾನಂತರದಲ್ಲಿ ಅತ್ಯಂತ ಶಿಥಿಲಗೊಂಡು, ವಿಕೃತ ಗೊಂಡು, ಜಾತಿವಾಚಕವಾಗಿ ಬಳಸಲ್ಪಟ್ಟು, ಪುರೋಹಿತಶಾಹಿಯನ್ನು ಬೆಳೆಸಿರುವುದು ನಿಜ ; ಶೋಷಣೆಗೂ ಕಾರಣವಾಗಿರುವುದು ಸತ್ಯ. ಆದರೆ ಈ ದೋಷವನ್ನು ಎತ್ತಿ ತೋರಿಸಿ, ಸುಧಾರಿಸಲು ಯತ್ನಿಸಬೇಕೇ ವಿನಾ, ಆದಿಪ್ರಮಥರ ಕಲ್ಪನೆಯನ್ನೇ ಅರಿ ಯದೆ ಟೀಕಿಸಬಾರದು. ಸಮಾನತೆಯ ಸಾಧನವಾಗಿ ಬಳಸಿದ ಅಸ್ತ್ರವನ್ನು, ಸಮಾನ ತೆಯ ಧೂಳೀಪಟ ಮಾಡಿತೆನ್ನುವುದು ಉಚಿತವಲ್ಲ.

RDX ಎನ್ನುವ ಶಕ್ತಿಶಾಲಿ ಸ್ಫೋಟಕವನ್ನು, ಭೂಮಿಯಲ್ಲಿ ಹುದುಗಿಸಿದ ಬಾಂಬ್, ಸ್ಫೋಟಕಗಳನ್ನು ಸಿಡಿಸಿ, ಸೈನಿಕರು ಮುಂದೆ ಸಾಗಲು ಅನುಕೂಲವಾಗು ವಂತೆ ದಾರಿ ನಿರ್ಮಾಣಮಾಡಲು ವಿಜ್ಞಾನಿಗಳು ಕಂಡು ಹಿಡಿದರು. ಅದನ್ನು ಬಳಸಿ ಥಾನು, ದಿವಂಗತ ಪ್ರಧಾನಿ ಶ್ರೀ ರಾಜೀವಗಾಂಧಿಯನ್ನು ಕೊಂದರೆ ತಪ್ಪು ಸ್ಫೋಟ ಕದ್ದೋ, ವಿಜ್ಞಾನಿಯದೋ? ಇಬ್ಬರದೂ ಅಲ್ಲ, ದುರುಪಯೋಗಪಡಿಸಿಕೊಂಡವರದು. ಧರ್ಮದ ಉಳಿವಿಗಾಗಿ ತಪ್ಪು ಕಲ್ಪನೆ, ಆಚರಣೆ ಬಿಡಲು ಹೇಳಬೇಕೇ ವಿನಾ ಮೂಲ ತತ್ತ್ವವನ್ನೇ ನಿಂದಿಸಬಾರದು.

## ಅದ್ಭುತ ಸಮಷ್ಟಿ ಪ್ರಜ್ಞೆ

ವ್ಯಂಗ್ಯ ಧ್ವನಿಯಲ್ಲಿ ನಾರಾಯಣರು ರೆಮ್ಮವ್ವೆಯ ವಚನ ವಾಕ್ಯ ಬಳಸಿದ್ದಾರೆ. "ಭಕ್ತನ ಕ್ರಮವೆಂತೆಂದೊಡೆ, ತಾನು ಭೋಗಿಸುವಂತಹ ಸಕಲ ದ್ರವ್ಯಂಗಳೆಲ್ಲವನು ಜಂಗಮಕ್ಕೆ ಕೊಟ್ಟು ತಾನು ಕೊಳ್ಳಬೇಕು." (ಪುಟ 95)

ರೆಮ್ಮವ್ವೆ, ಅಕ್ಕಮಹಾದೇವಿ, ಚನ್ನಬಸವಣ್ಣ ಎಲ್ಲರಲ್ಲಿಯೂ ಈ ಭಾವದ ವಚನಗಳು ಬಂದಿವೆ. ಉಡುವ ವಸ್ತ್ರ, ಉಣ್ಣುವ ಅನ್ನ, ಇರುವ ಮನೆ-ಹೀಗೆ ಎಲ್ಲವೂ ಪ್ರಸ್ತಾಪವಾಗಿವೆ. ಇದು ಸಮಷ್ಟಿ ಪ್ರಜ್ಞೆಯ ಅದ್ಭುತ ವಚನ ; ನಿಸ್ವಾರ್ಥದ ಗೌರಿ ಶಂಕರ ! ಹೇಗೆ ಗೊತ್ತೆ? ಭಕ್ತ=ವ್ಯಕ್ತಿ, ಜಂಗಮ=ಸಮುದಾಯ–ಸಮಷ್ಟಿ. ಭಕ್ತನು ಸುತ್ತಲಿನ ಜಂಗಮವನ್ನು ಕಡೆಗಣಿಸಿ, ತನಗೆ ಯಥೇಚ್ಛ ಬಟ್ಟೆ, ಒಡವೆ, ಹಣ ಕೂಡಿ ಹಾಕಿಕೊಂಡರೆ ಆದೀತೆ ? ತಾನು ಆವುಗಳನ್ನು ಹೊಂದುವ ಮುನ್ನ ಇನ್ನಿತರರಿಗೂ ಬಟ್ಟೆ ಇದೆಯೋ ? ಅವನಿಗೂ ಹೊಟ್ಟೆ ತುಂಬಾ ಅನ್ನವಿದೆಯೋ? ಇರಲು ಮನೆ ಇದೆಯೋ? ಹೀಗೆ 'ಜಂಗಮ' ವನ್ನು ಕುರಿತು ಚಿಂತಿಸಬೇಕು. ಯಾರು ಏನಾದರೇನು ಎಂದು ತಾನಷ್ಟೇ ಬೆಳೆದರೆ, ಸುಖಪಟ್ಟರೆ ಆಗದು, ಮನೆಗೆ ಯಾರಾದರೂ ಮಹಾತ್ಮರು ಅತಿಥಿಗಳು (ಜಂಗಮ) ಬಂದಾಗ ತಾನಷ್ಟೇ ಸ್ನಾನ ಮಾಡಿ, ಪೂಜೆ ಮಾಡಿ, ಉಂಡು

ಅವರನ್ನು ಮರುಗಿಸುತ್ತ ಕೂಡ್ರಿಸಬೇಕೋ? ಇಲ್ಲ, ಮನೆಯೊಡೆಯ ಭಕ್ತ, ಬಂದಿರುವ ವ್ಯಕ್ತಿ ಜಂಗಮ. ಮೊದಲು ಅವನ ಸ್ನಾನ-ಪೂಜೆ-ಪ್ರಸಾದ ಯೋಗಕ್ಷೇಮ ನೋಡಬೇಕು. ನೋಡಿ, ಎಷ್ಟು ಉದಾತ್ತವಾಗಿವೆ. ವಚನದಲ್ಲಿರುವ ಪರಹಿತ ಚಿಂತನೆ, ಶಿಷ್ಟಾಚಾರ, ಸಮಷ್ಟಿ ಪ್ರಜ್ಞೆ!! ಆದರೊಂದು ಎಚ್ಚರಿಕೆ, ಉತ್ತಮ ಅಕ್ಕಿಯಲ್ಲಿ ಕಲ್ಲು ತೂರಿಸುವ, ಗಟ್ಟಿ ಹಾಲಿಗೆ ನೀರು ಸೇರಿಸುವ, ಮೆಣಸಿನ ಕಾಳಿನಲ್ಲಿ ಪಪ್ಪಾಯಿ ಬೀಜ ಸೇರಿಸುವುದರಲ್ಲಿ ಗಟ್ಟಿಗರಾಗಿರುವ ಭಾರತೀಯರಾಗಿ ಕೆಲವರು ಇಂಥ ವಚನದಲ್ಲಿ ಮಧ್ಯೆ ಮಧ್ಯೆ ಅಶ್ಲೀಲಾರ್ಥ ಬರುವ ವಾಕ್ಯಗಳನ್ನು ಸೇರಿಸಿದ್ದಾರೆ. ಶರಣರ ಸಿದ್ಧಾಂತದ ಜರಡಿ ಹಿಡಿದು ಆಡಿಸಿ, ಒಳ್ಳೆಯದನ್ನು ಸ್ವೀಕರಿಸಬೇಕು ಅಷ್ಟೇ. ಕಲ್ಲಿನ ಹರಳು ಸಿಕ್ಕ ಮಾತ್ರಕ್ಕೆ ಎಲ್ಲವೂ ಕಲ್ಲೇ ಎಂದು ಭಾವಿಸಬಾರದು.

"ಗುರು ಜಂಗಮ ಇವರಿಗೆ ದಾನ ಮಾಡಿದರೆ ಮೋಕ್ಷವೆಂಬ ಕಲ್ಪನೆ (ಉಣ್ಣುವ ಜಂಗಮಕ್ಕೆ ಬೋನವಿಡುವುದು)ಸಾಮಾನ್ಯರನ್ನು ಗುರು-ಜಂಗಮರು ಶೋಷಿಸಲು ಕಾರಣವಾಯಿತು. ಎಂದರೆ ಹಿಂದೆ ನೋಡಿದಂತೆ ಪುರೋಹಿತಶಾಹಿಯು ದಾನದ ಸ್ವರೂಪದಲ್ಲಿ ಉತ್ಪನ್ನವನ್ನು ಅನುಭವಿಸುವ ಹಕ್ಕನ್ನೂ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು."

ಪುಟ. 97

ಬಸವಣ್ಣನವರ ತ್ರಿವಿಧ ದಾಸೋಹದ ಕಲ್ಪನೆಯ ಮರ್ಮವನ್ನು ಅರಿಯದ ಶ್ರೀ ಪಿ. ವಿ. ನಾರಾಯಣರು, ಕಡೆಯ ವಾಕ್ಯವನ್ನು ಯಾವುದೋ ಕಮ್ಯುನಿಸ್ಟ್ ವಿಚಾರಧಾರೆಯ ಪುಸ್ತಕದಿಂದ ಎರವಲು ಪಡೆದಂತೆ ತೋರುತ್ತದೆ. ಭಕ್ತ ಮತ್ತು ಗುರುಜಂಗಮರ ಮಧ್ಯದಲ್ಲಿರುವ ಸಂಬಂಧವು ವೈಯಕ್ತಿಕ ಮತ್ತು ಆತ್ಮೀಯ ಸಂಬಂಧ. ಹಾಗೆ ನೋಡಿದರೆ ಗುರು-ಜಂಗಮರು ಪಾಳೆಯಗಾರರೇನಲ್ಲ, ಒತ್ತಾಯದಿಂದ ಕಿತ್ತುಕೊಳ್ಳಲು. ಅವರ ಕೈಲಿ ಭಕ್ತರನ್ನು ಬೆದರಿಸುವ ಯಾವ ದಂಡವೂ ಇಲ್ಲ. ಬಹುಶಃ ಯಾರೋ ಕೆಲವರು ಗುರು–ಜಗದ್ಗುರುಗಳು ಒತ್ತಾಯ ಪೂರ್ವಕವಾಗಿ ಹಣವನ್ನು ಭಕ್ತರಿಂದ ಕೇಳುವುದನ್ನು, ಇಷ್ಟು ಚಂದಾವನ್ನು ಕೊಟ್ಟೇ ತೀರಬೇಕು ಎಂದು ಅಧಿಕಾರವಾಣಿಯಿಂದ ಪಡೆಯುವುದನ್ನು ಬಹುಶಃ ಶ್ರೀ ಪಿ.ವಿ. ನಾರಾಯಣರು ಕೇಳಿರಬಹುದು, ನೋಡಿರಬಹುದು. ಇದು ಒಬ್ಬಿಬ್ಬರ ವಿಷಯ, ಸಾರ್ವತ್ರಿಕವಲ್ಲ,

ದಾಸೋಹದಲ್ಲಿ ಮುಖ್ಯವಾಗಿ ವ್ಯಕ್ತಿಯು ಕರ್ತವ್ಯ ಪ್ರಜ್ಞೆಯಿಂದ, ಧರ್ಮ-ಸಾಹಿತ್ಯಗಳ ರಕ್ಷಣೆಗಾಗಿ ತ್ಯಾಗಿಗಳಾದ ಗುರು-ಜಂಗಮರಿಗೆ ತನ್ನ ಆದಾಯದ ಒಂದು ಪಾಲನ್ನು ಕೊಡುವನು. ಸ್ವೀಕರಿಸಿ, ಗುರು-ಜಂಗಮರು ಪುನಃ ಸಮಾಜಕ್ಕೆ ಇನ್ನೊಂದು ರೂಪದಲ್ಲಿ ವಿನಿಯೋಗಿಸುವರು. ಪೂರ್ವಾಗ್ರಹ ಪೀಡಿತ ದೃಷ್ಟಿಕೋನ ಬಿಟ್ಟು ಪ್ರಸ್ತುತ ಲೇಖಕರು ವಿಮರ್ಶಿಸಲಿ.

1. ಲಿಂಗಾಯತ ಮಠಗಳು ಮಾಡಿರುವ ದಾಸೋಹದ ಪ್ರಮಾಣ.
2. ಇವರು ಮಾಡುತ್ತಿರುವಷ್ಟು, ಉಚಿತ ವಿದ್ಯಾರ್ಥಿನಿಲಯಗಳ ಮೂಲಕ ಅನ್ನ ದಾನ-ವಿದ್ಯಾದಾನ.



3. ಸಾಹಿತ್ಯ ಪ್ರಕಟಣೆ, ಸಭೆ-ಸಮ್ಮೇಳನಗಳ ಮೂಲಕ ಸಾಹಿತಿಗಳಿಗೆ ಪ್ರೋತ್ಸಾಹ, ಅಂದರೆ ಜ್ಞಾನ ದಾಸೋಹ ; ಇವನ್ನು ಬೇರೆಯ ಜಾತಿ, ಮತ, ಧರ್ಮೀಯರ ಮಠಗಳು ಎಷ್ಟು ಮಾಡಿವೆ?
4. ವಚನ ಸಾಹಿತ್ಯ ಆಧಾರಿತ ಸಾಹಿತ್ಯ ವಿಪುಲವಾಗಿ ಹೊರಬರಲು ಮಠಮಾನ್ಯಗಳು ಸಂಘ-ಸಂಸ್ಥೆಗಳು ಪ್ರಮುಖ ಕಾರಣವಾಗಿಲ್ಲವೆ?
5. ಇವರುಗಳೆಲ್ಲ ಭಕ್ತರ ಉತ್ಪನ್ನವನ್ನು ಅನುಭವಿಸುವ ಹಕ್ಕನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲವಾದರೂ, ಭಕ್ತರು ಸ್ವಯಂಪ್ರೇರಣೆಯಿಂದ ಕೊಡುವ ಹಣದಿಂದ ಸಾಕಷ್ಟು ಸಮಾಜ ಸೇವೆ ಮಾಡುತ್ತಿದ್ದಾರೆ.
6. ಕಂತೆ ಭಿಕ್ಷೆ ಬೇಡುತ್ತ ಬರುವ ಜಂಗಮರುಗಳಿಗೆ ಕೊಡುವುದು ಧರ್ಮ ಎಂದು ಗ್ರಾಮಾಂತರ ಪ್ರದೇಶಗಳಲ್ಲಿ ಕೊಡುವ ಆಹಾರ ಪದಾರ್ಥಗಳಿಂದ, ದವಸ ಧಾನ್ಯಗಳಿಂದ ಎಷ್ಟೋ ಜನ ಬಡಮಕ್ಕಳ ವಿದ್ಯಾಭ್ಯಾಸ ಇಂದಿಗೂ ಸಾಗುತ್ತಿದೆ. ದಾಸೋಹ ಮಠಗಳು ಪ್ರವಾಸಿಕರಿಗೆ ತಂಗುದಾಣಗಳೂ ಆಗುತ್ತವೆ. ಗುರು ಬಸವಣ್ಣನವರು ಹಾಕಿಕೊಟ್ಟ ಜಂಗಮ ದಾಸೋಹ, ಜಂಗಮ ಪ್ರೇಮದ ಫಲವಾಗಿ, ರೈತರು ಕಡ್ಡಾಯವಾಗಿ ತಾವು ಬೆಳೆದ ಧಾನ್ಯಗಳನ್ನು ಬೆಳೆ ಬರುತ್ತಲೇ ತೆಗೆದಿಟ್ಟು ದಾನ ಮಾಡುತ್ತಾರೆ. ಅಂತಹ ದಾನದ ಫಲವಾಗಿ ಇಂದೂ ಎಷ್ಟೋ ಉಚಿತ ವಿದ್ಯಾರ್ಥಿನಿಲಯಗಳು ಹಳ್ಳಿಯ ಮಕ್ಕಳಿಗೆ ವಿದ್ಯಾರ್ಜನೆಗೆ ಅವಕಾಶ ಮಾಡಿವೆ. ಹೀಗೆ ಸಮಷ್ಟಿ ಪ್ರಜ್ಞೆ ಬೋಧಿಸುವ ಜಂಗಮ ಪ್ರೇಮ, ದಾಸೋಹ ತತ್ತ್ವಗಳು ಅಪರೂಪದ ಕಲ್ಪನೆಗಳು ಎಂಬುದನ್ನು ತಿಳಿಯಬೇಕು.

## ಅಕ್ಕನಾಗಲಾಂಬಿಕೆ ಕುರಿತು

"ಅಯ್ಯಾ ನಾನಧವೆ" (ಗಂಡನಿಲ್ಲದವಳು) ಎಂದು ಹೇಳಿಕೊಂಡಿರುವ ಈಕೆ ಪ್ರಾಯಶಃ ವೈವಾಹಿಕ ಜೀವನಕ್ಕೆ ಹೊರತಾಗಿ ಮಗನನ್ನು ಪಡೆದರೂ, ಜೀವನವನ್ನು ಆಸಕ್ತಿಯಿಂದ ಕಳೆದ ಧೀರೆ." (ಪುಟ 122) ಎಂಬ ಬಾಂಬ್ ಅನ್ನು ಸಹಜವಾಗಿ ಸ್ಫೋಟಿಸಿದ್ದಾರೆ ಡಾ॥ ನಾರಾಯಣರು. ಅಕ್ಕನಾಗಲಾಂಬಿಕೆಯ ವಚನದ ಪೂರ್ಣ ಪಾಠ ಹೀಗಿದೆ :

ಅಯ್ಯಾ, ನಾನಧವೆ, ಅಯ್ಯಯ್ಯಾ ಕೈಯ ಕೋಲ ಕೊಂಬರೆ ?
ಅಯ್ಯಾ ಎಳೆಗರುವಿನ ಎಳೆಗಂತಿಯನೆಳೆದೊಯ್ವರೇ ಭಕ್ತರು ?
ಅಯ್ಯೋ ಅಯ್ಯೋ ಎನಲೊಯ್ವರೆ, ಬಸವಣ್ಣಪ್ರಿಯ ಚನ್ನಸಂಗಯ್ಯಾ ?

ಶಿವಶರಣೆಯರ ವಚನ--171

ಇಲ್ಲಿ 'ಅಧವೆ' ಎಂಬ ಪದಬಳಕೆಯಾಗಿದೆ. ಕನ್ನಡ-ಕನ್ನಡ ನಿಘಂಟಿನಲ್ಲಿ ಅಧವೆಗೆ– ವಿಧವೆ ಎಂಬ ಒಂದು ಅರ್ಥ, ಅನಾಥೆ, ಯಾರೂ ಇಲ್ಲದವಳು (ಪುಟ 29) ಎಂಬ ಇನ್ನೊಂದು ಅರ್ಥವಿದೆ. ಈ ಎರಡು ಅರ್ಥಗಳಲ್ಲಿ ನಾವು ಸೂಕ್ತ ಎನಿಸಿದ್ದನ್ನು ಬಳಸಿ

ಕೊಳ್ಳಬೇಕು. ಗಂಡನಿಲ್ಲದವಳು ಎಂಬುದನ್ನು ವಿಶೇಷವಾಗಿ ಕಂಸಿನಲ್ಲಿ ಎತ್ತಿತೋರಿಸಿ ಬರೆಯುವುದರಲ್ಲಿ ನಾರಾಯಣರ ಲೇಖನಿಯ ಚೋದ್ಯವನ್ನು ಗುರುತಿಸಬಹುದು.

ಒಂದು ಪದಕ್ಕೆ ಹಲವಾರು ಅರ್ಥಗಳು ಇರುತ್ತವೆ. ಅರ್ಥವನ್ನು ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿ ಮಾಡಬೇಕು. ಒಬ್ಬ ವ್ಯಕ್ತಿಯು ಊಟಕ್ಕೆ ಕುಳಿತು, 'ಸೈಂಧವವನ್ನು ತಾ' ಎನ್ನುತ್ತಾನೆ. ಆಗ ಕುದುರೆಯನ್ನು ತರಬೇಕೋ, ಉಪ್ಪನ್ನೋ? ವೇಷಭೂಷಣಗಳೊಡನೆ ಸಿದ್ಧನಾಗಿ, ಚಾಟಿ ಹಿಡಿದು ಮೆಟ್ಟಿಲ ಮೇಲೆ ನಿಂತು "ಸೈಂಧವವನ್ನು ತಾ" ಎನ್ನುತ್ತಾನೆ. ಆಗ ಉಪ್ಪನ್ನು ತರಬೇಕೋ, ಕುದುರೆಯನ್ನೊ ? ಇಲ್ಲಿ ಯಾವ ಸನ್ನಿವೇಶವಿದೆ? ಆಕೆ ನಿಸ್ಸಹಾಯಕಳಾಗಿ ಕೋಲಿನ ಆಧಾರದ ಮೇಲೆ ನಡೆಯುತ್ತಿರುವಾಗ ಆ ಕೋಲನ್ನೇ ಕಿತ್ತುಕೊಂಡರೆ ಹೇಗೆ ? ಎಳೆಗರುವೊಂದು ಅತ್ಯಂತ ಆಸೆಯಿಂದ ಎಳೆಯ ಹುಲ್ಲಿನ ಕಂತೆಯನ್ನು ತಿನ್ನುತ್ತಿರುವಾಗ ಅದನ್ನು ಯಾರಾದರೂ ಕಿತ್ತುಕೊಂಡರೆ, ಆ ಕರು ಚಟಪಟಿಸದೆ ಇರುವುದೆ ? ಅಂಥ ದಯಾಹೀನ ಕೆಲಸವನ್ನು ಭಕ್ತರು ಮಾಡುವರೇ?

ಈ ವಚನವು ಚನ್ನಬಸವಣ್ಣನವರು ಲಿಂಗೈಕ್ಯರಾದಾಗ ಬರೆದುದು ಎಂದು ಖಚಿತವಾಗಿ ನಾವು ಊಹಿಸಬಹುದು. ಬಸವಣ್ಣನವರು ಅತ್ತಹೋಗಿ, ಲಿಂಗೈಕ್ಯರಾದರು. ಅಕ್ಕನಾಗಲಾಂಬಿಕೆ ಆ ಆಘಾತವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಚನ್ನಬಸವಣ್ಣನವರು ಅಗಲಿದರು. ಇಂಥ ಸನ್ನಿವೇಶದಲ್ಲಿ "ನಾನು ಅನಾಥೆ, ದಿಕ್ಕಿಲ್ಲದವಳಾದೆ." ಎಂದು ದುಃಖ ಪಡುವುದು ಸ್ವಾಭಾವಿಕ. ಪ್ರಾಮಾಣಿಕ ಮನಸ್ಸಿನಿಂದ ನೀವು ಯಾರು ಬೇಕಾದರೂ ಚಿಂತನೆ ಮಾಡಿರಿ ; ಇದಕ್ಕಾಗಿ ಕನ್ನಡ ಎಂ. ಎ ಏನೂ ಓದಬೇಕಾಗಿಲ್ಲ, ಡಾಕ್ಟರೇಟ್ ಪಡೆಯಬೇಕಿಲ್ಲ, ಈ ಜಾಗದಲ್ಲಿ ಆ ತಾಯಿ "ನಾನು ಅನಾಥೆಯಾದ" ಅಂದುಕೊಳ್ಳುವಳೋ, ನಾನು ಗಂಡನಿಲ್ಲದವಳು ಎಂದು ಹೇಳುವಳೋ? "ದೇವರೇ...ನಾನಿಷ್ಟು ಪ್ರಲಾಪಿಸುತ್ತಿರುವಾಗ ನೀನು ಶರಣ ಧರ್ಮದ ಆಶೋತ್ತರವಾದ ಚನ್ನಬಸವಣ್ಣನನ್ನೂ ಒಯ್ದೆಯಾ? " ಎಂದು ಈ ರೀತಿ ದುಃಖಿಸುವಾಗ, ಅದರಲ್ಲೂ ಕುಚೋದ್ಯದ ಪದ ಪ್ರಯೋಗಿಸುವ ಯತ್ನ ಡಾ|| ನಾರಾಯಣರದು.

ಇಷ್ಟೇ ಅಲ್ಲ, ಚನ್ನಬಸವಣ್ಣನು ತಾಯಿಯನ್ನು ಕಳೆದುಕೊಂಡ ಅನಾಥ ಶಿಶು. (ವೀರಮಾತೆ ಅಕ್ಕನಾಗಲಾಂಬಿಕೆ ಎಂಬ ನನ್ನ ಕೃತಿ ಓದಿರಿ) ಶಿವಸ್ವಾಮಿಯ ಎರಡನೆ ಹೆಂಡತಿಯ ಮಗ. ಹೀಗಾಗಿ ಆ ಅನಾಥ ಶಿಶುವಿಗೆ ಹಾಲುಣಿಸಿ, ಬೆಳೆಸಿದಾಕೆ ಗಂಗಾಂಬಿಕೆಯೆ! ಅದೇ ಆಗ ಅವಳ ಮಗುವು ಸತ್ತು ಹೋಗಿದೆ. ಆ ಕೊರತೆ ತುಂಬಲು ಈ ಮಗು ಬಂದಂತೆ ಆಗಿದೆ.

ಹೋದುದು ನಿಶ್ಚಯವಾದಡೆ ಕರುಳು ಕಳವಳಿಸುತ್ತಿದ್ದವು
ಇಂತಪ್ಪ ಕಂದ, ಪೋದಡೆಯೂ ಪೋಗಿಲ್ಲ
ಗಂಗಾಪ್ರಿಯ ಕೂಡಲ ಸಂಗನ ಶರಣಳ
ಮೊಲೆಯನುಂಬುದಕ್ಕೆ ಬಾರ, ಚನ್ನಬಸವಣ್ಣ (ಶಿ.ವ. 173)



[ ವಿ. ಸೂ : ಸದ್ಯ ಈ ಸಾಹಿತಿಗಳು ದೊಡ್ಡವನಾದ ಚನ್ನಬಸವಣ್ಣನೆಂಬ ವಿರಕ್ತಮೂರ್ತಿಗೂ ಕಡೆಯ ಸಾಲನ್ನು ಅನ್ವಯಿಸಿ ಕಳಂಕ ಹಚ್ಚುವ ಪ್ರಯತ್ನ ಮಾಡದಿದ್ದರೆ ಪುಣ್ಯ. ] ಚನ್ನಬಸವಣ್ಣ ಹುಟ್ಟಿದ್ದು ನಂದನನಾಮ ಸಂವತ್ಸರ 1144-ರಲ್ಲಿ, ಬಯಲಾದುದು 1168, ಬದುಕಿದ್ದು ಕೇವಲ 24 ವರ್ಷ. ಆದ್ದರಿಂದ ಮಹಾಮನೆ ಪ್ರವೇಶಿಸಿದ ಅನಾಥ ಕಂದನಿಗೆ ಗಂಗಾಂಬಿಕೆ ಹಾಲೂಡಿಸಿರುವ ಸಾಧ್ಯತೆ ಇದೆ.

ಇದೇ ವಿಷಯದಲ್ಲಿ ಡಾ|| ಕಲಬುರ್ಗಿಯವರಿಗೆ ಉತ್ತರ ಕೊಟ್ಟು ಆಗಿದೆ. ಅಂದಿನ ಕಾಲದಲ್ಲಿ ನಾರಾಯಣರು ಊಹಿಸುವಂತೆ ವಿವಾಹೇತರ ಸಂಬಂಧದಿಂದ ಮಗು ಹುಟ್ಟಿದ್ದರೆ; ತಾಯಿ-ಮಗನಿಗೆ ಸಾರ್ವಜನಿಕ ಮನ್ನಣೆ ಸಿಗುತ್ತಿತ್ತೇ ? ಹರಳಯ್ಯ ಮಧುವರಸರ ಮಧ್ಯೆ ಬೀಗತನವಾದುದು ವರ್ಣಾಂತರ ವಿವಾಹ; ಆದರೆ ಅಷ್ಟರಲ್ಲಿ ಶರಣ ಧರ್ಮ ಬಲಶಾಲಿಯಾಗಿ ಬೆಳೆದು, ಲಕ್ಷಾಂತರ ಸಂಖ್ಯೆಯಲ್ಲಿ ಅನುಯಾಯಿಗಳನ್ನು ಹೊಂದಿತ್ತು. ಬರೀ ಅನುಯಾಯಿಗಳನ್ನೆ ಅಲ್ಲ, ಚಿಂತನ ಶೀಲರ, ಸಮಾನ ವಿಚಾರಧಾರೆಯ ಜನರ ಸಮೂಹ ಹೊಂದಿತ್ತು. ಹೀಗಾಗಿ ಶರಣರ ಮಧ್ಯದಿಂದ ವಿವಾಹಕ್ಕೆ ಯಾವುದೂ ವಿರೋಧ ಬರಲಿಲ್ಲ. ಅದೇ ಚನ್ನಬಸವಣ್ಣ ಹುಟ್ಟಿದ್ದು ಅನುಭವ ಮಂಟಪ ಪ್ರಾರಂಭವಾಗಿ ಕೇವಲ 3 ವರ್ಷದಲ್ಲಿ, ಆಗ ಅನೈತಿಕವಾದುದು ಏನಾದರೂ ಸಂಭವಿಸಿದ್ದರೆ, ಸಂಪ್ರದಾಯ ಬದ್ಧ ಸಮಾಜ ಸುಮ್ಮನೇ ಬಿಡುತ್ತಿತ್ತೇ ? ಅವರಿಗೆ ಬಹಿಷ್ಕಾರ ಹಾಕುತ್ತಿತ್ತು.

ಹಾಗೇನೂ ಸಂಭವಿಸದೆ, ಅಕ್ಕನಾಗಲಾಂಬಿಕೆ, ಚನ್ನಬಸವಣ್ಣ ಅತ್ಯಂತ ಪೂಜನೀಯರಾಗಿ ಉದ್ದಕ್ಕೂ ಗೌರವಿಸಲ್ಪಟ್ಟಿದ್ದಾರೆ. ಅಕ್ಕನಾಗಮ್ಮನನ್ನು ನೀಲಾಂಬಿಕೆ ಹೊಗಳುವ ಈ ವಚನ ನೋಡಿರಿ.

ಎನಗೆ ಹಾಲೂಟವನಿಕ್ಕುವ ತಾಯೆ,
ಎನಗೆ ಪರಿಣಾಮವ ತೋರುವ ತಾಯೆ
**ಪರಮ ಸುಖದೊಳಗಿಪ್ಪ ತಾಯೆ**
ಪರವಸ್ತುವ ನಂಬಿದ ತಾಯೆ,
**ಬಸವನ ಗುರು ತಾಯೆ,**
ಸಂಗಯ್ಯನಲ್ಲಿ ಸ್ವಯಲಿಂಗಿಯಾದೆಯಾ ತಾಯೆ ! (ನೀ.ವ. 123)

ಪರಮ ಸುಖ ಹೊಂದಿದವಳು, ಶರೀರದ ಸುಖಕ್ಕೆ ಬಲಿಯಾದವಳಲ್ಲ ; ಬಸವಣ್ಣನವರಂಥ ಮಹಾತ್ಮರಿಗೆ ಗುರು ಮಾತೆಯಾದಳು, ಆತನ ವ್ಯಕ್ತಿತ್ವ ರೂಪಿಸುವ ರೂವಾರಿಯಾದಳು. ಒಂದು ವೇಳೆ ವಿವಾಹೇತರ ಸಂಬಂಧದಿಂದ, ಕಾಯ ದೌರ್ಬಲ್ಯಕ್ಕೆ ಈಡಾಗಿ ನಾಗಲಾಂಬಿಕೆ ಮಗುವನ್ನು ಹೆತ್ತಿದ್ದರೆ, ತಮ್ಮನ ಹೆಂಡತಿ ಹೀಗೆ ಗೌರವಿಸುತ್ತಿದ್ದಳೆ?

## ಅಕ್ಕಮಹಾದೇವಿಯನ್ನು ಕುರಿತು

ದಾರ್ಶನಿಕ ಸಾಹಿತ್ಯದಲ್ಲಿ ತನ್ನೊಡನೆ ಸ್ಪರ್ಧಿಸಬಲ್ಲ ಇನ್ನೊಬ್ಬ ಮಹಿಳಾ ಸಂತಳನ್ನು ಕಾಣದಷ್ಟು, ಎತ್ತರಕ್ಕೆ ಏರಿರುವ ವೀರ ವಿರಾಗಿಣಿ ಅಕ್ಕಮಹಾದೇವಿ ಅತ್ಯಂತ

ಸುಂದರ ದಂತದ ಗೊಂಬೆಯಂತೆ. ಒಂದು ಕಲಾತ್ಮಕದಂತ– ಶಿಲ್ಪದ ಕುಸುರಿ ಕೆಲಸ ಕಂಡಾಗ ವರ್ಣಿಸಲು ಎಷ್ಟು ಕಷ್ಟವೋ ಅಕ್ಕಮಹಾದೇವಿಯನ್ನು, ಆಕೆಯ ವಚನಗಳನ್ನು ಕುರಿತು ಮಾತನಾಡುವುದು ಅಷ್ಟು ಕಷ್ಟಸಾಧ್ಯ. ಆದರೆ ಡಾ॥ ಪಿ. ವಿ. ನಾರಾಯಣರು ಅಕ್ಕಮಹಾದೇವಿಯನ್ನು ಕುರಿತು ಆಡಿರುವ ಮಾತುಗಳಲ್ಲಿ, ನಿರೂಪಣೆ ಸೂಕ್ತವಾಗಿಲ್ಲ; ಮತ್ತು ಪ್ರಸ್ತುತ ಲೇಖಕರು ಮೆಚ್ಚಿರುವ ಅಂಶವೇನೂ ಅಕ್ಕಮಹಾದೇವಿಯ ಔನ್ನತ್ಯ ತೋರುವ ಅಂಶವಲ್ಲ.

1. ರಾಜಕೀಯ ಅಧಿಕಾರದ ಬಲಿಷ್ಠ ಗಂಡನನ್ನು ಧಿಕ್ಕರಿಸಿ ಬಂದ ಮಹಾದೇವಿಯಕ್ಕ (ಪುಟ 81)

2. ಮಹಾದೇವಿಯಕ್ಕನಂತಹವಳು, ಆಗಿನ ಪಾಳೆಯಗಾರನೊಬ್ಬನಿಗೆ ಹೆಂಡತಿಯಾಗಿದ್ದೂ, ತನಗೆ ಸರಿಬರದೆ ಇದ್ದಾಗ ಅವನನ್ನು ತೊರೆಯುವ ಧೈರ್ಯ ಮಾಡಿದ್ದು, ಒಂದು ರೀತಿಯಿಂದ, ಆ ಕಾಲದಲ್ಲಿ ಹೆಂಗಸರಲ್ಲಿ ಆತ್ಮ ಸ್ಥೈರ್ಯವು ದೃಢವಾದುದರ ಪ್ರತೀಕವೆನಿಸುತ್ತದೆ. (ಪುಟ 98)

3. ಗಂಡನ ದೈವವನ್ನೇ ತನ್ನದಾಗಿ ಮಾಡಿಕೊಳ್ಳದೆ ತನ್ನ ಕಲ್ಪನೆಯ ದೈವವನ್ನೇ ಬೇರೆಯಾಗಿ ಆರಾಧಿಸುವುದು ಆ ಕಾಲದ ಸೋಪಜ್ಞ ಸ್ತ್ರೀಯರಿಗೆ ಸಾಧ್ಯವಾಯಿತು. ಮಹಾದೇವಿಯಕ್ಕ......ಪಾಳೇಗಾರನೊಬ್ಬನ ಹೆಂಡತಿಯಾಗ ಬೇಕಾದ ಪರಿಸ್ಥಿತಿ ಬಂದರೂ ತನ್ನ ಸ್ವಂತಿಕೆಯನ್ನು ಕಾಪಾಡಿಕೊಳ್ಳುವುದಕ್ಕೆ ಹೆಣಗಿ, ಅವನನ್ನು ಧಿಕ್ಕರಿಸಿ ನಡೆದ ಅಕ್ಕನ ಸ್ಥೈರ್ಯ ಬೆಳಗುವಂತಹುದು.

ಅಕ್ಕಮಹಾದೇವಿಯ ಔನ್ನತ್ಯವಿರುವುದು ಪ್ರಸ್ತುತ ಲೇಖಕರು ತಿಳಿದಂತೆ ಗಂಡನನ್ನು ಧಿಕ್ಕರಿಸಿ ಬಂದುದರಲ್ಲಿ ಅಲ್ಲ. ಅವಳ ಹೋರಾಟ ತನ್ನ ಸ್ವಂತಿಕೆಯನ್ನು (?) ಕಾಪಾಡಿಕೊಳ್ಳುವುದಕ್ಕಾಗಿ ಅಲ್ಲ. ಕೆಲವು ಹೆಣ್ಣುಮಕ್ಕಳು ಗಂಡನ ನಿಯಂತ್ರಣದಲ್ಲಿ ರಲಾರದೆಯೂ, ಮನಸ್ಸಿಗೆ ಬಂದಂತೆ ಸ್ವೇಚ್ಛೆಯಿಂದ ವರ್ತಿಸುವುದರಲ್ಲೇ ಸ್ವಂತಿಕೆ ಇರುವುದೆಂದು ತಿಳಿದು ಮದುವೆ ಮಾಡಿಕೊಳ್ಳದೆ ಉಳಿಯುತ್ತಾರೆ. ಗಂಡನನ್ನು ಅದಕ್ಕಾಗಿ ತ್ಯಜಿಸುತ್ತಾರೆ. ಅಂಥವರ ಬಾಳಿನಲ್ಲಿ ಯಾವುದೇ ಘನತರ ಉದ್ದೇಶ ಇರದು. ಅಕ್ಕಮಹಾದೇವಿಯ ಮನಸ್ಸು ಪ್ರಪ್ರಥಮವಾಗಿ ದೇವನ ಕಡೆಗೆ ಒಲಿಯಿತು. ಉಳಿದೆಲ್ಲ ಸುಖವನ್ನು ಹೊಂದುವುದಕ್ಕಿಂತಲೂ ದೇವನ ಒಲುಮೆ, ದಿವ್ಯಾನುಭವಗಳನ್ನು ಪಡೆಯುವುದೇ ಆಕೆಗೆ ಪರಮಗುರಿಯಾಯಿತು. ಈ ಗುರಿಗೆ ಅಡ್ಡಿಯಾಗುವಂತೆ ಕೌಶಿಕನು ಇದಿರಾದ. ವೈಭವ ಸುಖ-ಸಂಪತ್ತಿನ ಆಮಿಷವನ್ನೊಡ್ಡಿದ. ಅಕ್ಕಮಹಾದೇವಿ ಮರುಳಾಗಲಿಲ್ಲ; ತನ್ನ ಗುರಿಯಿಂದ, ಅಭೀಪ್ಸೆಯಿಂದ ಅತ್ತಿತ್ತ ಸರಿಯಲೂ ಇಲ್ಲ. ಆಕೆಯ ಅಖಂಡವಿರಕ್ತಿಯ, ಆತ್ಮವಿಶ್ವಾಸದ ಬಿರುಗಾಳಿಯಲ್ಲಿ ಕೌಶಿಕ ತರಗೆಲೆಯಂತೆ ಹಾರಿಹೋದ. ಅಕ್ಕ ಜಯಶಾಲಿಯಾದಳು.

'ವಚನ-ನಿರ್ವಚನ'ದಲ್ಲಿ ಅಕ್ಕನನ್ನು ಕುರಿತು ಪ್ರಸ್ತಾಪಿಸುವ ಐದು ಕಡೆಗಳಲ್ಲೂ ಗಂಡನನ್ನು ಬಿಟ್ಟು ಬಂದವಳೆಂಬ ಪದಪುಂಜ ಪುನರಾವರ್ತನೆಯಾಗಿರುವುದನ್ನು ನೋಡಿ



ದರೆ, ಆಕೆಯ ಸಾಧನೆಯ ಸೂಕ್ಷ್ಮ ಮತ್ತು ಘನತರವಾದ ಯಾವುದೇ ಅಂಶವನ್ನೂ ನಾರಾಯಣರಿಗೆ ಅರಿಯಲು ಆಗಿಲ್ಲ ಎನ್ನಿಸುತ್ತದೆ.

ಬಂಧನದಲ್ಲಿಟ್ಟು ಬೆದರಿಸಿ, ಮದುವೆಗೆ ಒಪ್ಪಿಸಬಹುದು ಎಂಬ ದುರಾಲೋಚನೆಯೊಡನೆ ಕೌಶಿಕ ಗೃಹ ಬಂಧನದಲ್ಲಿ ಆಕೆಯನ್ನಿಟ್ಟರೂ ತನ್ನ ಆತ್ಮಬಲದಿಂದ ಆ ಬಂಧನ ಗೆದ್ದಳು. ಆಕೆಗೆ ಮದುವೆಯಾಗಿತ್ತೇ, ಅಥವಾ ಗೃಹಬಂಧನದಲ್ಲಿದ್ದಳೇ ಎಂಬುದೇ ಸಂದೇಹಾಸ್ಪದವಿರುವಾಗ, ಸುಲಭವಾಗಿ ಮತ್ತು ಹಗುರವಾಗಿ ಕೌಶಿಕನನ್ನು ಗಂಡನೆಂದು ಭಾವಿಸಿ ಸಾಹಿತಿಗಳು ಬಳಸುವುದು ಸಾಧುವಲ್ಲ. ಅದು ಬೌದ್ಧಿಕ ಅಪ್ರಮಾಣಿಕತೆಯೂ ಆಗುತ್ತದೆ. ತನಗೆ-ತನ್ನ ತಾಯಿತಂದೆಗಳಿಗೆ ಕೊಂಚವೂ ಇಷ್ಟವಿಲ್ಲದೆ ಗೃಹಬಂಧನಕ್ಕೆ ಒಳಗಾದುದು, ಅಕ್ಕನಿಗೆ ತುಂಬಾ ನೋವಿನ ಸಂಗತಿ. ಆ ನೆನಪೂ ತುಂಬಾ ಕ್ರೂರ. ಸ್ಪಷ್ಟವಾಗಿ ಕೇಳದೆ, 'ತಪ್ಪುಹೊರಿಸಿ ಹೊರಟೆನೆಂಬುದು ಸತ್ಯವೇ?' ಎಂದು ಪ್ರಭುದೇವರು ಕೇಳಿದಾಗ ಆಕೆ ಖಡಾಖಂಡಿತವಾಗಿ ಹೇಳುವಳು "ಚನ್ನಮಲ್ಲಿಕಾರ್ಜುನನೇ ಪತಿ, ಇನ್ನಾರೂ ತನಗೆ ಸಂಬಂಧವಿಲ್ಲ." ಎಂದು. ಮಹಾತ್ಮರ ಬಗ್ಗೆ ಬರೆಯುವಾಗ ಎಚ್ಚರಿಕೆಯಿಂದ ಪದಗಳನ್ನು ಬಳಸುವುದು ಒಳ್ಳೆಯದು.

## ಶರಣ ಸತಿಯ ಭಕ್ತಿಯನ್ನು ಕುರಿತು

ವಚನ-ನಿರ್ವಚನ ಕೃತಿಯಲ್ಲಿ (10ನೆಯ ವಿಷಯ) ಮಧುರಾಭಕ್ತಿ ಕುರಿತು ವಿಶ್ಲೇಷಣೆ ಇದ್ದು. ದರ್ಶನ ಶಾಸ್ತ್ರದ ಒಂದು ಮಹತ್ವಪೂರ್ಣ ವಿಷಯದ ಪ್ರಸ್ತಾಪ ಮಾಡಿದ್ದರೂ, ನಿರೂಪಣೆಯಲ್ಲಿ ಲೇಖಕರು ಯಶಸ್ವಿಯಾಗಿಲ್ಲ. ದೇವ-ಭಕ್ತರ ಸಂಬಂಧವನ್ನು ಒಡೆಯ-ದಾಸ, ತಾಯಿ-ಮಗ ಅಥವಾ ತಂದೆ-ಮಗ, ಮಗ-ತಾಯಿ, ಪತಿ-ಪತ್ನಿ, ಪತ್ನಿ-ಪತಿ ಈ ಸಂಬಂಧಗಳ ಮೂಲಕ ಅನೇಕ ಧರ್ಮಗಳು, ಪಂಥಗಳು ಕಲ್ಪಿಸುತ್ತವೆ. ವೈಷ್ಣವ ದಾಸರ ಭಕ್ತಿಯು ದ್ವೈತ ಸಿದ್ಧಾಂತದ ಮೇಲೆ ಆಧರಿಸಿರುವುದರಿಂದ ಅಲ್ಲಿ ಒಡೆಯ-ದಾಸನ ಸಂಬಂಧವಿದ್ದರೆ, ಶಾಕ್ತ ಪಂಥೀಯರು ತಾಯಿ-ಮಕ್ಕಳ ಸಂಬಂಧ ಇರಿಸಿಕೊಳ್ಳುತ್ತಾರೆ. ಶೈವರು ಶಿವನನ್ನು ತಂದೆಯಾಗಿ ಭಾವಿಸಿ, ತಾವು ಮಕ್ಕಳಾಗುತ್ತಾರೆ. ಉದಾಹರಣೆಗೆ ಸೌಂದರ ನಂಬಿ ; ಬಿಜ್ಜವ್ವೆ ತಾನು ತಾಯಿಯಾಗಿ ಶಿವನನ್ನು ಮಗನನ್ನಾಗಿ ಭಾವಿಸುತ್ತಾಳೆ. ಸೂಫೀ ಸಂತರು ತಾವೇ ಪತಿಯಾಗಿ, ದೇವರನ್ನೇ ಪತ್ನಿಯಾಗಿ ಭಾವಿಸುತ್ತಾರೆ.

ಲಿಂಗವಂತ ಧರ್ಮ, ಸೇಶ್ವರವಾದಿ ಧರ್ಮವಾಗಿ, ಸಂಪೂರ್ಣ ಸಮರಸವನ್ನು ಒಪ್ಪುವುದರಿಂದ ಸತಿ ಭಕ್ತಿಯನ್ನೇ ಅಳವಡಿಸಿಕೊಂಡಿದೆ. ಮಧುರಾ ಭಕ್ತಿ ಅದ್ಭುತವಾದ ರಮಣೀಯ ದಾರ್ಶನಿಕ ಅನುಭಾವ ಸಾಹಿತ್ಯಕ್ಕೆ ಜನ್ಮ ನೀಡುತ್ತದೆ. ಸಾಮಾನ್ಯವಾಗಿ ಸಾಮಾಜಿಕ, ಸಾಹಿತ್ಯಕ ವಿಷಯ ಕುರಿತು ಬರೆಯುವಲ್ಲಿ ಯಶಸ್ವಿಯಾದರೂ, ಈ ವಿಷಯಕ್ಕೆ ಬಂದಾಗ ಸಂಪೂರ್ಣವಾಗಿ ಯಶಸ್ವಿಯಾಗರು. ಡಿ॥ ಶ್ರೀ. ಸಂ.ಶಿ. ಭೂಸನೂರುಮಠರು ವಚನ ಸಾಹಿತ್ಯ ಸಂಗ್ರಹಕ್ಕೆ ಬರೆದ ಪೀಠಿಕೆ **'ಒಳಗೆ ಪ್ರವೇಶ'** ಓದಿದಾಗ ಲಿಂಗವಂತ ಧರ್ಮದ ಶರಣ ಸತಿ ಭಕ್ತಿಯನ್ನು ಅರಿಯಲು ಸಾಧ್ಯ.

ಇರಲಿ ಈಗ ಪಿ. ವಿ. ನಾರಾಯಣರ ನಿರೂಪಣೆ ನೋಡೋಣ. ಅವರಿಗೆ ಕೆಲವು ವಿಲಕ್ಷಣ ಮತ್ತು ಭಯಂಕರ ಸಂಶಯಗಳು ಎದುರಾಗಿವೆ. (ಪುಟ 162)

1. ಸತಿಪತಿ ಭಾವದ ತುಂಬ ಆರ್ದ್ರವಾದ ಅಭಿವ್ಯಕ್ತಿ ಇರುವುದು ಮಾತ್ರವಲ್ಲದೆ ಸಾಕಷ್ಟು ಸಂಖ್ಯೆಯಲ್ಲಿ ಇಂತಹ ವಚನಗಳನ್ನು ಬರೆದ ಏಕೈಕ ಮಹಿಳೆ ಎಂದರೆ ಮಹಾದೇವಿಯಕ್ಕ. ಇತರ ವಚನಕಾರ್ತಿಯರು ಇಂತಹ ವಚನಗಳನ್ನು ಬರೆಯದಿರಲು ಕಾರಣವೇನು ? (ಪುಟ 162)

2. ತನ್ನ ಗಂಡ ಇರುವಾಗಲೇ, ಅವನೊಡನೆ ದಾಂಪತ್ಯವು ಸಾಕಷ್ಟು ತೃಪ್ತಿಕರವಾಗಿ ಇರುವಾಗಲೇ, ಶಿವನೇ ಆಗಿರಬಹುದು, ಮತ್ತೊಬ್ಬ ಗಂಡನಿಗೆ ಒಲಿಯುವ ಭಾವನೆಯನ್ನು ವ್ಯಕ್ತಪಡಿಸುವುದು ಪಾತಿವ್ರತ್ಯಕ್ಕೆ ಬೆಲೆ ಕೊಡುವ ಸಂಪ್ರದಾಯದಲ್ಲಿನ ಸ್ತ್ರೀಯರಿಗೆ ಮುಜುಗರವನ್ನುಂಟು ಮಾಡುತ್ತಿದ್ದಿರಬಹುದೆ?

3. ಅಕ್ಕಮಹಾದೇವಿ ಕೌಶಿಕನನ್ನು ಒಲ್ಲದೆ ಶಿವನನ್ನು ಗಂಡನೆಂದು ಭಾವಿಸಿದ್ದರಿಂದ ಗಂಡನಿಲ್ಲದವಳು ಎಂಬ ಭಾವನೆಯನ್ನು ಜನ ತನ್ನ ಬಗ್ಗೆ ತಳೆಯಲು ಆಸ್ಪದವಿಲ್ಲದಂತಾಯಿತು. (ಪುಟ 163)

4. ಮಹಾದೇವಿಯಕ್ಕನು ಗಂಡನಾದ (?) ಕೌಶಿಕನನ್ನು ಧಿಕ್ಕರಿಸುವುದಕ್ಕೆ ಕಾರಣ ಅವನು ಭವಿಯಾಗಿದ್ದದ್ದು, ಭವಿಯನ್ನು ತೊರೆದ ಕಾರಣಕ್ಕಾಗಿ ಆಗಿನ ಭಕ್ತವೃಂದ ಅವಳ ನಿಲುವನ್ನು ಸಮರ್ಥಿಸಿದ್ದಲ್ಲದೆ, ಆಕೆಯ ಬಗ್ಗೆ ಹೆಚ್ಚಿನ ಗೌರವವಿರಿಸಿಕೊಳ್ಳಲೂ ಪ್ರಾಯಶಃ ಕಾರಣವಾಯಿತು. (ಪುಟ 163)

5. ಕೌಶಿಕನು ಭವಿಯಾಗದೇ ಭಕ್ತನೆ ಆಗಿದ್ದು ಕೇವಲ ವೈಯಕ್ತಿಕ ಭಿನ್ನಾಭಿಪ್ರಾಯದ ಕಾರಣಕ್ಕಾಗಿ ಮಹಾದೇವಿ ಅವನನ್ನು ಧಿಕ್ಕರಿಸಿದ್ದರೆ ಆಗಲೂ ಭಕ್ತರು ಅವಳನ್ನು ಅದೇ ಮುಕ್ತಭಾವದಿಂದ ಗೌರವಿಸುತ್ತಿದ್ದರೆ ?

6. ಕೌಶಿಕನ ಜತೆಗಿನ ತನ್ನೆಲ್ಲ ಸಂಬಂಧಗಳನ್ನೂ ಹರಿದುಕೊಂಡು ಶಿವನನ್ನೇ ತನ್ನ ಗಂಡನೆಂದು ಭಾವಿಸಿದ ಮಹಾದೇವಿಯಕ್ಕನು ತನ್ನ ಸತಿಪತಿ ಭಾವದ ವಚನಗಳಲ್ಲಿ ಬಳಸಿದ ರೀತಿಯ ಲೈಂಗಿಕ ಪ್ರತಿಮೆಗಳನ್ನು ಇತರ ವಚನಕಾರ್ತಿಯರು ಬಳಸಲು ಸಹಜ ಸಂಕೋಚವು ಅಡ್ಡ ಬಂದಿತೋ ಏನೋ. ಮಾನವ ಪ್ರವೃತ್ತಿಗೆ ಸಹಜವಾದ ಲೈಂಗಿಕತೆಯನ್ನು ಶಿವನ ಭಕ್ತಿಯಾಗಿ ಮಾರ್ಪಡಿಸಿಕೊಂಡು ಆಕೆಗೆ ತನ್ನ ಸಹಜ ವಿರಹಕ್ಕೆ ಅಭಿವ್ಯಕ್ತಿ ನೀಡುವುದು ಪ್ರಾಯಶಃ ಸುಲಭವಾಗಿತ್ತು, (ಪುಟ 163)

7. ಇತರ ವಚನಕಾರ್ತಿಯರು ಸತಿಪತಿ ಭಾವದ ವಚನಗಳನ್ನು ಬರೆಯದಿರಲು ಬೇರೊಂದು ಕಾರಣವಿರಬಹುದು. ಲೈಂಗಿಕ ಸುಖವನ್ನು ನಿಜಜೀವನದಲ್ಲಿ ತಕ್ಕಮಟ್ಟಿಗಾದರೂ ತೃಪ್ತಿಕರವಾಗಿ ಪಡೆದವರ ಭಾವನೆಯು ಹಾಗೆ ಪಡೆಯದವರಂತೆ ಆಳವಾಗಿ ವ್ಯಕ್ತವಾಗಲಾರದು, ಅಲ್ಲವೆ ? ಹಾಗಾಗಿ ಅಂತಹವರು ಶಿವನೊಡನೆ ಸೇರುವ ಸುಖಕ್ಕಾಗಿ ಹಾತೊರೆಯಲಾರರು. (ಪುಟ 163)



ಸಂಶಯಗಳ ಪ್ರಶ್ನೆಗಳ ಸರಮಾಲೆಯನ್ನು ಎತ್ತುತ್ತ ಸಾಗಿರುವ ಡಾ॥ ಪಿ. ವಿ. ನಾರಾಯಣರ ಪ್ರಸ್ತುತ ಲೇಖನ, ಈ ಬಗ್ಗೆ ಏನೇನೂ ತಿಳಿಯದೆ ಇವರು ಬರೆಯಲು ಹೊರಟಿದ್ದಾರೆ ಎಂಬ ಭಾವನೆ ನೀಡುತ್ತದೆ. ಒಬ್ಬ ವ್ಯಕ್ತಿಯನ್ನು ಎದುರು ನಿಲ್ಲಿಸಿಕೊಂಡು ಕಚ ಕಚ ಚೂರಿಯನ್ನು ಹಾಕಿ ಎಲ್ಲೆಂದರಲ್ಲೇ ಇರಿಯುವ ಒಬ್ಬ ಹಲ್ಲೆಗಾರನ ಕೃತಿಯ ಕಲ್ಪನೆ ನನಗೆ ಕಣ್ಣೆದುರು ನಿಲ್ಲುತ್ತಿದೆ. ಮಧುರಾ ಭಕ್ತಿ, ಮಹದೇವಿಯಕ್ಕ ಇಬ್ಬರೂ ಈ ಹಲ್ಲೆಗೆ ಒಳಗಾಗಿದ್ದಾರೆ ಎನ್ನಿಸುತ್ತಿದೆ.

ಪ್ರಶ್ನೆಗಳ ಸರಮಾಲೆಗೆ ಉತ್ತರಿಸುವ ಮುನ್ನ ನನ್ನ ಅನಿಸಿಕೆಗಳನ್ನು ಇಡುತ್ತೇನೆ. 'ಬಸವ ಪುರಸ್ಕಾರ'ಕ್ಕೆ ಯೋಗ್ಯ ಕೃತಿಯನ್ನು ಆಯ್ಕೆ ಮಾಡಲು ಮೂವರು ಸಾಹಿತಿಗಳ ಸಮಿತಿ ಮಾಡಲಾಗಿತ್ತೆಂದು, ಈ ಬಗ್ಗೆ ಸ್ವತಃ ಬಸವ ಸಮಿತಿಯ ನೇತಾರರು ಕಾಳಜಿಯನ್ನು ವಹಿಸಿರಲಿಕ್ಕಿಲ್ಲ. ಮೂವರು ಸಾಹಿತಿಗಳ ಹೆಸರು ಪೂರ್ತಿಯಾಗಿ ನಮಗೆ ಖಚಿತವಾಗಿಲ್ಲ. ಶ್ರೀ ಡಾ॥ ತಿಪ್ಪೇರುದ್ರಸ್ವಾಮಿಗಳು ಸಮಿತಿಯಲ್ಲಿ ಇದ್ದರೆಂಬುದು ತಿಳಿದಿದೆ. ಈಗಾಗಲೇ ಶ್ರೀಯುತರು ಶರಣ ಸಾಹಿತ್ಯ ಕುರಿತು ಅನೇಕ ತಾತ್ತ್ವಿಕ ಕೃತಿ, ಕಾದಂಬರಿ ಮುಂತಾಗಿ ರಚಿಸಿ ಖ್ಯಾತರಾಗಿದ್ದಾರೆ. ಅವರ ಕೃತಿಗಳಲ್ಲಿ ದಾರ್ಶನಿಕ ಭಾಗವೂ ಪ್ರಸ್ತಾಪಿತವಾಗಿದೆ. ಅಂದಾಗ, ಈ ಅಧ್ಯಾಯ ಓದಿಯಾದರೂ ಈ ಪುಸ್ತಕಕ್ಕೆ ಮಾನ್ಯತೆ ಕೊಡದೆ ಇರಲು ಶಿಫಾರಸು ಮಾಡಬಹುದಿತ್ತು. ಏಕೆಂದರೆ ಪ್ರಶ್ನೆಗಳನ್ನು ಕೇಳಿ ಬರೀ ರೋಗ ಜಾಸ್ತಿ ಮಾಡಿದ್ದಾರೆಯೇ ವಿನಾ, ಯಾವುದನ್ನೂ ಆಳಕ್ಕಿಳಿದು ನಿರೂಪಿಸಲು ಸಮರ್ಥರಾಗಿಲ್ಲ, ಡಾ॥ ಪಿ. ವಿ. ನಾರಾಯಣರು. ಶರಣ ಸಾಹಿತ್ಯ ರಚನೆಯಲ್ಲಿ ಪಳಗಿದ ಲೇಖನಿಯವರಾದ ಡಾ॥ ತಿಪ್ಪೇರುದ್ರ ಸ್ವಾಮಿಗಳು,

1. ಈ ಪುಸ್ತಕವನ್ನು ಪುರಸ್ಕಾರಕ್ಕೆ ಶಿಫಾರಸು ಮಾಡುವಾಗ ಪೂರ್ತಿಯಾಗಿ ಓದಲಿಲ್ಲವೆ?
2. ಶ್ರೀ ನಾರಾಯಣರ ಮೇಲಿನ ವಿಶ್ವಾಸವಷ್ಟೆ ಪ್ರಮುಖ ಅಂಕ ನೀಡಿತೆ ?
3. ಇಂತಹ ವಿಲಕ್ಷಣ, ಪ್ರಶ್ನೆಗಳನ್ನು ಕೇಳಿ, ಮಹಾದೇವಿಯಕ್ಕನನ್ನು ಮತ್ತೊಮ್ಮೆ (ಪ್ರಭುದೇವರಂತೆ) ಪರೀಕ್ಷೆಗೆ ಗುರಿಪಡಿಸುವ ನಾರಾಯಣರ ಕಾರ್ಯಕ್ಕೆ ಇವರದೂ ಮೌನ ಸಮ್ಮತಿಯ ಅನುಮೋದನೆ ಇದೆಯೋ? ಅಲ್ಲಮಪ್ರಭುವಿನ ಉದ್ದೇಶ ಅಕ್ಕನ ಔನ್ನತ್ಯವನ್ನು ಎತ್ತಿತೋರಿಸುವುದಾಗಿತ್ತೇ ವಿನಾ ಅವಹೇಳನವಲ್ಲ.
4. ಅಕ್ಕನಾಗಲಾಂಬಿಕೆ ಕುರಿತು ನಾರಾಯಣರು ಎಷ್ಟು ಹಗುರವಾಗಿ, ಸುಲಭವಾಗಿ, ಸಹಜವಾಗಿ (ಪುಟ 122ರಲ್ಲಿ) "ವೈವಾಹಿಕ ಜೀವನಕ್ಕೆ ಹೊರತಾಗಿ ಮಗನನ್ನು ಪಡೆದರೂ, ಜೀವನವನ್ನು ಆಸಕ್ತಿಯಿಂದ ಕಳೆದ ಧೀರೆ" ಎಂದು ಬರೆದ ಮಾತು ಡಾ॥ ತಿಪ್ಪೇರುದ್ರಸ್ವಾಮಿಗಳವರ ಗಮನಕ್ಕೆ ಬರಲಿಲ್ಲವೆ? ಹಿಂದೆ ಇದೇ ವಿಷಯದಲ್ಲಿ ಶ್ರೀಯುತರು ವಿರೋಧ ವ್ಯಕ್ತಮಾಡಿದರು. ಡಾ॥ ಕಲಬುರ್ಗಿಯವರನ್ನು ಈ ಕಾರಣಕ್ಕೆ ಸಾಕಷ್ಟು ವಿಮರ್ಶಿಸಿದರು. ಅದೇ ಮಾತನ್ನು ನಾರಾಯಣರು ಬರೆ

ದಾಗ, ಅವರನ್ನು ಪ್ರಶ್ನಿಸುವುದಿರಲಿ, ಇಂಥ ಕೃತಿಯನ್ನು ಬಸವ ಪುರಸ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ಅಂದರೆ ಶ್ರೀ ಕಲಬುರ್ಗಿ ಬರೆದುದು 'ಹಾವು', ಇದು 'ಹೂವಾ'ಗಿ ಕಂಡಿರುವುದೊ?

5. "ಇಲ್ಲ, ಇಷ್ಟೆಲ್ಲ ವಿಪರೀತಾರ್ಥ ಬೇಡ ; ಕೃತಿಯನ್ನು ಪೂರ್ತಿಯಾಗಿ, ಪುಟಪುಟ ಸಾಲುಸಾಲಾಗಿ ಓದದೆ ಹೀಗಾಯಿತು." ಎನ್ನುವುದಾದರೆ ಈ ಔದಾಸೀನ್ಯ ಒಳ್ಳೆಯದೆ? ಇದರಿಂದ ಶರಣರಿಗೆ ಕಲಂಕ ತಟ್ಟಿಸಿದಂತೆ ಆಗದೆ?

### ಡಾ|| ಪಿ. ವಿ. ನಾರಾಯಣರ ಸಂಶಯಕ್ಕೆ ಉತ್ತರ

1. ಶರಣಸತಿ-ಲಿಂಗಪತಿ ಭಾವದ ವಚನಗಳನ್ನು ಬರೆದಿರುವ ಹಲವಾರು ಶರಣರಲ್ಲಿ ಮಹಾನುಭಾವಿಗಳಾದ ಬಸವಣ್ಣನವರು, ಅಕ್ಕಮಹಾದೇವಿ, ಕೊಂಡಮಟ್ಟಿಗೆ ಸಿದ್ಧರಾಮೇಶ್ವರರು, ಉರಿಲಿಂಗದೇವ, ನಂತರ ಷಣ್ಮುಖಸ್ವಾಮಿಗಳು, ಘನಲಿಂಗ ದೇವರು, ಮುಪ್ಪಿನ ಷಡಕ್ಷರಿ ಮುಖ್ಯರು. ಅದರಲ್ಲಿ ಅಂತರಂಗದ ಆಳದಿಂದ ಹೆಣ್ಣಾಗಿ ಹಂಬಲಿಸಿದವರು ಬಸವಣ್ಣನವರು, ಅಕ್ಕಮಹಾದೇವಿ, ಷಣ್ಮುಖಸ್ವಾಮಿ, ಮುಪ್ಪಿನ ಷಡಕ್ಷರಿ. ಮುಪ್ಪಿನ ಷಡಕ್ಷರಿಯವರು ಬರೆದ ಗೀತೆಗಳನ್ನು ಓದಿದರಂತೂ ವಿರಹಿ ಪ್ರೇಯಸಿಯ ಚಿತ್ರ ಇನ್ನೂ ಚೆನ್ನಾಗಿ ನಮ್ಮ ಮನದಲ್ಲಿ ನೆಲೆಗೊಳ್ಳುವುದು.

ಶರಣರು ಸ್ವಭಾವತಃ ಪುರುಷರಿದ್ದೂ ಹೆಣ್ಣಿನ ಮನೋಭಾವವನ್ನು ಶರಣ-ಸ್ಥಲದಲ್ಲಿ ಹೊಂದುವರು. ಸಿನಿಮಾ, ನಾಟಕಗಳಲ್ಲಿ(ಹಿಂದೆ ರೂಢಿಯಲ್ಲಿದ್ದಂತೆ)ಮಹಿಳೆಯರ ಪಾತ್ರಗಳನ್ನೂ ಪುರುಷರೇ ನಿರ್ವಹಿಸುವರು ಎಂದುಕೊಳ್ಳೋಣ. ಮಹಿಳೆ ಮಹಿಳೆಯ ಪಾತ್ರವನ್ನು ನಿರ್ವಹಿಸಿದಷ್ಟು ಚೆನ್ನಾಗಿ ಪುರುಷ ನಿರ್ವಹಿಸಬಲ್ಲನೆ? ಆದರೆ ಕೆಲವು ವಿಶೇಷ ಕಲಾವಿದರು ಮಹಿಳಾ ಪಾತ್ರಗಳನ್ನು ಅಷ್ಟೇ ಅದ್ಭುತವಾಗಿ ನಾಟಕ, ಯಕ್ಷಗಾನಗಳಲ್ಲಿ ನಿರ್ವಹಿಸಿ ಜನಮೆಚ್ಚುಗೆ ಪಡೆದಿದ್ದಾರೆ.

ಹಾಗೆ ಅಕ್ಕಮಹಾದೇವಿ ಹೆಣ್ಣುಜೀವ, ವಹಿಸಿದ ಪಾತ್ರವೂ ಶರಣಸತಿಯದು ; ಹೀಗಾಗಿ ಜೀವಂತಿಕೆ ಆ ಪಾತ್ರದಲ್ಲಿ ತೋರುತ್ತಿದೆ. ಬಸವಣ್ಣನವರು, ಷಣ್ಮುಖಸ್ವಾಮಿಗಳು, ಘನಲಿಂಗದೇವರು, ಮುಪ್ಪಿನ ಷಡಕ್ಷರಿ ಸ್ತ್ರೀ ಪಾತ್ರಧಾರಿಗಳಾಗಿ ತಮ್ಮ ಮನಃಸ್ಥಿತಿಯನ್ನು ಆ ಮಟ್ಟಕ್ಕೆ ಏರಿಸಿಕೊಂಡರು. ಇನ್ನುಳಿದ ಶರಣರು, ಶರಣ ಸತಿಯರಾದರೂ ಅಲ್ಲಿ ಪುರುಷತನವೇ ಇಣುಕುತ್ತದೆ.

ಈ ಹಿನ್ನೆಲೆಯೊಡನೆ ನಾರಾಯಣರ ಪ್ರಶ್ನೆಗೆ ಉತ್ತರಿಸೋಣ. ಇತರ ವಚನಕಾರ್ತಿಯರು ಇಂತಹ ವಚನಗಳನ್ನು ಬರೆಯದಿರಲು ಕಾರಣವೇನು?

ಮಹಿಳೆಯರು ಹೊರಬಂದು, ಪುರುಷನ ಎದುರು ಮಾತನಾಡಲು ಸಾಧ್ಯವಾದುದೇ ಅನುಭವ ಮಂಟಪದ ವೇದಿಕೆಯಿಂದಾಗಿ. ವಚನಗಳನ್ನು ಬರೆದು, ತಮ್ಮ ತಮ್ಮ ಭಾವ, ಅನುಭವಗಳನ್ನು ಅಭಿವ್ಯಕ್ತಿಗೊಳಿಸಲು ಪ್ರೋತ್ಸಾಹ, ಅವಕಾಶವಿದ್ದುದರಿಂದ ಎಲ್ಲರೂ ಬರೆಯಲು ಪ್ರಯತ್ನ ಮಾಡುತ್ತಿದ್ದರು. ಕಾಯಕ, ದಾಸೋಹ, ಆಚಾರ ಮುಂತಾದ ಸಾಮಾಜಿಕ, ನಿತ್ಯಜೀವನದ ಸಮಸ್ಯೆಗಳನ್ನು ಕುರಿತು ಎಲ್ಲರೂ ಸುಲಭವಾಗಿ ಬರೆಯುವಷ್ಟು ದಾರ್ಶನಿಕ ಅನುಭವಗಳನ್ನು ಬರೆಯಲಾರರು. ಅಷ್ಟೇಕೆ ಇಂದಿನ ಸಾಹಿತಿಗಳನ್ನೇ ತೆಗೆದುಕೊಳ್ಳೋಣ. ಸ್ವತಃ ಆಧ್ಯಾತ್ಮಿಕ ಪ್ರವೃತ್ತಿಯವರಲ್ಲದ ವ್ಯಕ್ತಿಗಳು ತಮ್ಮ ಬರವಣಿಗೆಯಲ್ಲಿ ಕೆಲವು ವಿಷಯಗಳನ್ನು ಎಷ್ಟು ಚೆನ್ನಾಗಿ ವಿಶ್ಲೇಷಿಸಬಲ್ಲರೋ ಅದೇ ಜಾಣ್ಮೆಯನ್ನು, ಆಳವನ್ನು ಅಧ್ಯಾತ್ಮಿಕ, ಯೌಗಿಕ ಅನುಭವ ಬರೆಯುವಾಗ ತೋರಿಸಲಾರರು. ಓದುಗರಿಗೆ ಅವರ ದೌರ್ಬಲ್ಯ ತಿಳಿದು ಬಿಡುತ್ತದೆ. ಅಕ್ಕಮಹಾದೇವಿಗೆ ಸಿಕ್ಕ ಶಿಕ್ಷಣ, ಶ್ರೀಗುರುಲಿಂಗದೇವರು ನೀಡಿದ ಸಂಸ್ಕಾರ, ಕೊಟ್ಟ ತಾತ್ತ್ವಿಕ ತರಬೇತಿ, ಮನೆಯ ಸುಸಂಸ್ಕೃತ ವಾತಾವರಣ, ತತ್ತ್ವಜ್ಞಾನಿ-ಆಧ್ಯಾತ್ಮ ಜೀವಿ ತಂದೆಯ ಒಡನಾಟ ಆಕೆಯನ್ನು ಅತ್ಯುನ್ನತ ದಾರ್ಶನಿಕ ಮಟ್ಟಕ್ಕೆ ಏರಿಸಿದವು. ಉಳಿದ ಬಹುಪಾಲು ಶರಣೆಯರು ಕಾಯಕ ಜೀವಿಗಳಾಗಿ ತಮಗೆ ಸಾಧ್ಯವಾದಷ್ಟು ಏರಿದರು. ಷಟಸ್ಥಲದ ಮರ್ಮವನ್ನು ಅರಿತುಕೊಂಡರೆ ನಮಗೆ ತಿಳಿಯುತ್ತದೆ ಎಲ್ಲರಿಗೂ ಎಲ್ಲ ಸ್ಥಲಗಳಿಗೂ ಏರಲಾಗಿಲ್ಲ ಎಂಬುದು. ಆಶ್ರಮವಾಸಿ ಸಾಧಕರನ್ನೇ ತೆಗೆದು ಕೊಂಡರೆ, ಕೆಲವರು ಪೂಜೆ-ಧ್ಯಾನ ಎಂದರೆ ಸಂತೋಷದಿಂದ ಮಾಡಲು ಒಪ್ಪುವರು. ಇನ್ನು ಕೆಲವರು ಯಾರಪ್ಪಾ, ಅಷ್ಟು ಕುಳಿತುಕೊಳ್ಳುವವರು. ಪೂಜೆಯನ್ನು ಮಾಡಿಕೊಳ್ಳುತ್ತೇವೆ. ಉಳಿದುದು ಹೇಳಬೇಡಿ. ಕೆಲಸ ಬೇಕಾದರೆ ಎಷ್ಟು ಬೇಕಾದರೂ ಹೇಳಿರಿ." ಎನ್ನುವರು. ಈ ಅಭಿರುಚಿ ಅವರವರ ಸ್ವಭಾವಕ್ಕೆ ತಕ್ಕಂತೆ ಬರುತ್ತದೆ. ದಾರ್ಶನಿಕ ಪ್ರವೃತ್ತಿಯ, ಅಂತರ್ಮುಖಿ ಸ್ವಭಾವದ ಅಕ್ಕಮಹಾದೇವಿಯಂತಹವರು ಚಿನ್ನವಿದ್ದಂತೆ, ಎಂತಹ ಸೂಕ್ಷ್ಮ ಕಲೆಯ ಆಭರಣವಾದರೂ ತಯಾರಾಗುತ್ತದೆ. ಬಾಕಿ ಬಹಳಷ್ಟು ಜನರು ಕಬ್ಬಿಣದ ಲೋಹದಂತೆ; ಅತಿ ಸೂಕ್ಷ್ಮ ಆಭರಣ ತಯಾರಾದಾವೆ? ಅವರುಗಳು ಬರೆಯಬೇಕಲ್ಲ ಅಂತ ವಚನ ಬರೆದವರು. ಅಕ್ಕನದು ಹಾಗಲ್ಲ, ಅಂತರಂಗದ ಕೊಡ ಅಮೃತದಿಂದ ತುಂಬಿ, ಉಕ್ಕಿಹರಿದಂತೆ.

ತಾಯಿ ನೀಲಾಂಬಿಕೆಯನ್ನೇ ಈ ದೃಷ್ಟಿಯಲ್ಲಿ ಹೋಲಿಸಿದರೂ (ನವಿಲನ್ನೂ ಕೋಗಿಲೆಯನ್ನು ಹೋಲಿಸುವುದು ತಪ್ಪು. ಅದರದು ಒಂದು ಬಗೆಯ ಸೊಗಸು, ಇದರದು ಒಂದು ಬಗೆಯ ಸೊಗಸು.)ಅಕ್ಕನ ಮುಂದೆ ಏನೂ ಅಲ್ಲ. ಅಕ್ಕನಲ್ಲಿ ವಿಷಯದ ವೈವಿಧ್ಯತೆ, ವಿಸ್ತಾರ, ಚಿಂತನೆಯ ಸೊಗಸಿದೆ. ಆ ವೈವಿಧ್ಯತೆ, ಚಿಂತನೆ ತಾಯಿ ನೀಲಮ್ಮನಲ್ಲಿ ಇಲ್ಲ. ದೇವರ ಸ್ವರೂಪ, ಆತ್ಮ ಸ್ವರೂಪ, ಸೃಷ್ಟಿ, ಮೋಕ್ಷ, ಯೋಗ, ಕರ್ಮಸಿದ್ಧಾಂತ ಮುಂತಾದ ಎಲ್ಲ ವಿಷಯಗಳ ಬಗ್ಗೆ ಅಕ್ಕ ಬರೆದಿದ್ದಾಳೆ. ಉಳಿದ ತತ್ತ್ವಜ್ಞಾನಿಗಳೂ, ದಾರ್ಶನಿಕರೂ ಆದ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ ಇವರೊಡನೆ ಸಮಾನ ವೇದಿಕೆಯ ಮೇಲೆ ನಿಂತು ಮಾತನಾಡುವ ಸತ್ವ ಮತ್ತು ಸ್ಥೈರ್ಯ ಅಕ್ಕನನ್ನು ಬಿಟ್ಟರೆ ಇನ್ನಿತರ ಶರಣೆಯರಲ್ಲಿ ಅಷ್ಟೊಂದು ಇಲ್ಲ. ಬ್ರಹ್ಮಸೂತ್ರಗಳಲ್ಲಿ ಬರುವ ತತ್ತ್ವಸೂತ್ರಗಳಂತೆ, ಅಕ್ಕನ ವಚನಗಳು ! ಒಂದೊಂದು ವಚನವು ಒಂದೊಂದು ಸೈದ್ಧಾಂತಿಕ ಸೂತ್ರ. ಅವುಗಳಲ್ಲಿ ಸಾಹಿತ್ಯದ ಸೌಂದರ್ಯವಿದೆ, ತತ್ತ್ವಜ್ಞಾನದ ಸೌರಭವಿದೆ, ಅನುಭಾವದ ಮಕರಂದವಿದೆ.

ಈ ವಿಧಾಯಕ, ಉನ್ನತ ಸಾಧನೆಯಿಂದಲೇ ಆಕೆ ಆಚಾರ್ಯಪುರುಷರ ಸ್ಥಾನದಲ್ಲಿ ನಿಂತಳು. "ಲಿಂಗಲೀಲಾವಿಲಾಸ" ಕೃತಿಯ ಸಂಪಾದಕ ಹೇಳುತ್ತಾನೆ. "ಆ ಗುರುವಚನಂಗಳಾವುವಯ್ಯಾ ಎಂದೊಡೆ ವೀರಶೈವ ಷಟಸ್ಥಲ ಜ್ಞಾನಾಚಾರ್ಯರಪ್ಪ ಪ್ರಭುದೇವರು, ಬಸವಣ್ಣ, ಚನ್ನಬಸವಣ್ಣ, ಮಹದೇವಿಯಕ್ಕಗಳು ಮುಖ್ಯವಾದ ಶಿವಾನುಭವಿಗಳು ಶಿವಸುಖವನ್ನನುಭವಿಸಿ ತೃಪ್ತಿ ಪಡೆದು, ಸಂತುಷ್ಟಿ ನಿಮಿರ್ದ ವಾಙ್ಮನದಿಂದುಕ್ಕಿ ನುಡಿದ ನುಡಿಯೇ ಗುರುವಚನ" ಹೀಗೆ ಆಚಾರ್ಯಪುರುಷಳ ಸ್ಥಾನ ಅಕ್ಕನಿಗೆ ಸಿಕ್ಕಿರುವುದನ್ನು ಗಮನಿಸಬಹುದು.

ಬೊಂತಾದೇವಿ, ಗೊಗ್ಗವ್ವೆ, ರೆಮ್ಮವ್ವೆ, (ಕೆಲವು ಕಾಲ ಇದ್ದ) ಗುಡ್ಡವ್ವೆ ಮುಂತಾದವರೂ ವಿರಕ್ತೆಯರಾಗಿ ಇದ್ದರೂ, ಅಕ್ಕನ ಮಟ್ಟಕ್ಕೆ ಏರಲಾಗಲಿಲ್ಲ, ಕಾರಣಗಳನ್ನು ಮೇಲೆ ವಿವರಿಸಲಾಗಿದೆ.

**2.** ಆ ಬಗೆಯ ವಚನಗಳನ್ನು ಬರೆಯಬೇಕಾದರೆ ಏರಬೇಕಾದ ಮಾನಸಿಕ, ಭಾವಾತ್ಮಕ ಮಟ್ಟವನ್ನು ತಲ್ಪಲಾರದೆ ಇನ್ನಿತರ ವಚನಕಾರ್ತಿಯರು ಸೋತರೇ ವಿನಾ, ಅವರು ಗಂಡನನ್ನು, ಪಡೆದುದಾಗಲೀ, ದಾಂಪತ್ಯ ಸುಖವನ್ನು ತೃಪ್ತಿಕರವಾಗಿ ಪಡೆದುದಾಗಲೀ ಅಲ್ಲ. ಈಗಾಗಲೇ ಉದಾಹರಿಸಿರುವ ಬೊಂತಾದೇವಿ, ಗೊಗ್ಗವ್ವೆ, ರೆಮ್ಮವ್ವೆ ವಿವಾಹಿತರಾಗಿರಲಿಲ್ಲ. ಈ ಉನ್ನತ ದಾರ್ಶನಿಕ ಸ್ಥಿತಿ ಆಧ್ಯಾತ್ಮರಂಗದಲ್ಲಿ ಗೌರಿಶಂಕರವನ್ನು ಏರಿದಂತೆ. ಎಲ್ಲರಿಗೂ ಅದನ್ನು ಏರಲು ಸಾಧ್ಯವಿಲ್ಲ; ಏರಲು ಯತ್ನಿಸಿದವರೆಲ್ಲ ಯಶಸ್ವಿಯಾಗಿಲ್ಲ.

**3.** ಪಿ.ವಿ. ನಾರಾಯಣರು ಬಹಳ ಸಣ್ಣತನದ ಮಾತನ್ನು ಇಲ್ಲಿ ಆಡುತ್ತಿದ್ದಾರೆ. ಗಂಡನಿಲ್ಲದವಳು ಎಂಬ ಆರೋಪ ತಪ್ಪಿಸಿಕೊಳ್ಳಲೆಂದೇ ಅಕ್ಕನು ದೇವನಿಗೆ ಒಲಿದಳು ಎಂಬಷ್ಟು ಕೀಳುಭಾವ ಈ ಅಭಿಪ್ರಾಯದಿಂದ ಉಂಟಾಗುತ್ತದೆ. ಕೌಶಿಕನ ಕೆಟ್ಟ ಕಣ್ಣು ಬೀಳುವ ಮೊದಲೇ ದೇವರಿಗೆ ಆಕೆ ಒಲಿದಳು. ಚನ್ನಮಲ್ಲಿಕಾರ್ಜುನನನ್ನು ಸರ್ವಾಂಗದಲ್ಲೂ ತುಂಬಿಕೊಂಡಳು. ಹಗಲುರಾತ್ರಿ ಅವನ ನೆನಹಿನಲ್ಲಿ ಇರಬಯಸಿದಳು. ಈ ಹಂಬಲದಲ್ಲಿರುವಾಗಲೇ ಕೌಶಿಕ ಧೂಮಕೇತುವಿನಂತೆ, ಅವಳ ಬಾಳಿನ ನಿರ್ಮಲಾಗಸದಲ್ಲಿ ಮೂಡಿದ. ಈ ವಿಪತ್ತಿನಿಂದ ದಿಗ್ಭ್ರಾಂತಳಾದಳು. ಧೈರ್ಯದಿಂದ ಎದುರಿಸಿ ಬಂಧನ ದಾಟಿ ಹೊರಟಳು.

(ಮುಂದುವರಿಯುವುದು)

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.



(8 ನೆ ಪುಟದಿಂದ ಮುಂದುವರಿದಿದೆ)

ಕ್ರಮ ಸಂಖ್ಯೆ — ಹೆಸರು ಮತ್ತು ಊರು

**ಶರಣರುಗಳಾದ :**

793. ಜಿ. ಸಿ. ಮಲ್ಲಿಕಾರ್ಜುನಯ್ಯ, ಗೋಡೆಕೆರೆ.
794. ಶಂಕರಲಿಂಗಯ್ಯ ತಿಪಟೂರು.
795. ಲೀಲಾ ಕೆ. ಎಂ. ಗುರುಪಾದಪ್ಪ, ತಿಪಟೂರು.
796: ಇಂದ್ರಮ್ಮ ಮುರಗೇಂದ್ರಪ್ಪ, ತಿಪಟೂರು.
797. ಹೆಚ್. ಎಸ್. ಜಯರಾಮು, ತಿಪಟೂರು.
798. ಎಂ. ಚನ್ನವೀರಪ್ಪ ಮತ್ತು ಮಕ್ಕಳು, ತಿಪಟೂರು.
799. ಯಶೋಧ ಸಿ. ರಮೇಶಕುಮಾರ್, ತಿಪಟೂರು.
800. ಸಿದ್ಧಗಂಗಮ್ಮ ಕೆ. ಎಂ. ಶಿವಸ್ವಾಮಿ, ತಿಪಟೂರು.
801. ಅರಳಿ ಚನ್ನವೀರಪ್ಪ, ತಿಪಟೂರು.
802. ಶಿವಮ್ಮ ರೇವಣ್ಣ ದೊಡ್ಡಮನೆ, ತಿಪಟೂರು.
803. ಆರ್. ಎಸ್. ವೀರಣ್ಣ, ತಿಪಟೂರು.
804. ಉರವಕೊಂಡಿ ಪುಟ್ಟಮ್ಮ, ತಿಪಟೂರು.
805. ಸುಮತಿ ಎನ್. ಬಸವಯ್ಯ, ತಿಪಟೂರು.
806. ಸುಶೀಲಮ್ಮ ಟಿ. ಆರ್. ಲಿಂಗೇಗೌಡರು, ತಿಪಟೂರು.
807. ಜಿ. ಸಿ. ಸಂತೋಷ ಚಂದ್ರಪ್ಪ, ಶಿವಮೊಗ್ಗ.

## ಧರ್ಮಗ್ರಂಥ ಪ್ರಕಟಣೆಗೆ 1001–00 ರೂ ಕೊಟ್ಟವರು

ಕ್ರಮಸಂಖ್ಯೆ. — ಹೆಸರು ಮತ್ತು ಊರು

**ಶರಣರುಗಳಾದ :**

382. ಗಂಗಾಂಬಿಕೆ ರೇವಣಸಿದ್ಧಪ್ಪ. ಬೆಂಗಳೂರು.
383. ನೀಲವ್ವ ಬೂದಿಹಾಳ, ಗಾಣದಕಟ್ಟೆ.
384. ಜಿ. ಕೆ. ಸಿದ್ಧಲಿಂಗಕುಮಾರ, ತಿಪಟೂರು.
385. ಎಸ್. ಆರ್. ವೆಂಕಟಾಚಲಪತಿ ಶೆಟ್ಟಿ, ತಿಪಟೂರು.
386. ನಾಗಮ್ಮ ಹೆಚ್. ಆರ್. ರಂಗಸ್ವಾಮಪ್ಪ, ಹಳೇಪಾಳ್ಯ.
387. ಜಿ. ಗಂಗಪ್ಪ, ತಿಪಟೂರು.
388. ಎಂ. ಸುಜಯಾದೇವಿ, ತಿಪಟೂರು.
389. ಎಸ್. ಆರ್. ನಾಗರತ್ನಮ್ಮ, ತಿಪಟೂರು.
390. ಟಿ. ಎ. ದಾಸಪ್ಪ, ತಿಪಟೂರು.
391. ಆನಂದ ಮೂರ್ತಿ, ತಿಪಟೂರು.

ಕ್ರಮ ಸಂಖ್ಯೆ    ಹೆಸರು ಮತ್ತು ಊರು

**ಶರಣರುಗಳಾದ :**

392. ಲೀಲಾ ಕೆ. ಎಂ. ಗುರುಪಾದಪ್ಪ, ತಿಪಟೂರು.
393. ಹೆಚ್. ಆರ್. ಯೋಗನಾಥ, ತಿಪಟೂರು.
394. ಅಕ್ಕಮಹಾದೇವಿ, ತಿಪಟೂರು.
395. ಟಿ. ಡಿ. ಬಸವರಾಜಯ್ಯ, ತಿಪಟೂರು.
396. ನಾಗರತ್ನಮ್ಮ ಕೆ. ಆರ್. ಸೋಮಶೇಖರ್, ಬೆಂಗಳೂರು.

### ಪೂಜ್ಯ ಸದ್ಗುರುಗಳ ಹುಟ್ಟುಹಬ್ಬದ ನಿಮಿತ್ತ ಧರ್ಮಪ್ರಚಾರಕ ನಿಧಿಗೆ

**ಶರಣರುಗಳಾದ :**

| | | |
|---|---|---|
| 1. | ಎಸ್. ಲಿಂಗಣ್ಣ, ಚಿತ್ರದುರ್ಗ. | 1000-00 |
| 2. | ಎಂ. ಸುಜಯಾದೇವಿ, ತಿಪಟೂರು. | 1000-00 |
| 3. | ರಾಷ್ಟ್ರೀಯ ಬಸವ ದಳ, ಚಳ್ಳಕೆರೆ. | 1000-00 |

### ಅಭಿನಂದನಾ ಕಾರ್ಯಕ್ರಮ ನಿರ್ವಹಣೆಗೆ

**ಶರಣರುಗಳಾದ :**

| | | |
|---|---|---|
| 1. | ಎ. ಎನ್. ಶಿವರುದ್ರಯ್ಯ, ತಿಪಟೂರು. | 1000-00 |
| 2. | ನಾಗರಾಜ, ಸಿದ್ಧಲಿಂಗೇಶ್ವರ ಸ್ಟೋರ್ಸ್, ತಿಪಟೂರು. | 1000-00 |
| 3. | ನಾಗರತ್ನಮ್ಮ ಕೆ. ಆರ್. ಸೋಮಶೇಖರ್, ಬೆಂಗಳೂರು. | 1000-00 |
| 4. | ಬಸವ ಸುತೆ, ಬೆಂಗಳೂರು, | 1000-00 |

### ಕೆಸೆಟ್ಟಿಗೆ (ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

**ಶರಣರುಗಳಾದ :**

| | | |
|---|---|---|
| 1. | ಅಂದಾನಪ್ಪ ಕುಂದರಗಿ, ಗಜೇಂದ್ರಗಡ. | 1500-00 |
| 2. | ಶರಣೆ. ನಾಗರತ್ನಮ್ಮ ಕೆ. ಆರ್.ಸೋಮಶೇಖರ್, ಬೆಂಗಳೂರು. | 1500-00 |
| 3. | ಶಕುಂತಲಾ ಪುಟ್ಟಸಿದ್ಧಪ್ಪ, ಬೆಂಗಳೂರು. | 1500-00 |

### ವೀಡಿಯೋ ಕೆಸೆಟ್ಟಿಗೆ

| | | |
|---|---|---|
| 4. | ಬಸವ ಶ್ರೀ D/o ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ. | 1000.00. |
| 5. | ವನಜಾಕ್ಷಮ್ಮ ಓಂಕಾರಸ್ವಾಮಿ, ಬೆಂಗಳೂರು. | 1000-00. |

ವಿವಿಧ ರೀತಿಯಲ್ಲಿ ಧನಸಹಾಯ ಗೈದ ಎಲ್ಲ ಶರಣರಿಗೆ ಶುಭವನ್ನು ಹಾರೈಸುತ್ತೇವೆ. ಸ್ಥಳಾಭಾವದಿಂದ ಯಾದಿ ಅಪೂರ್ಣವಾಗಿದ್ದು, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

—ಮಾತಾಜಿ.



(72 ನೇ ಪುಟದಿಂದ ಮುಂದುವರಿದಿದೆ.)

**4 ಅ.** "ಮಹಾದೇವಿಯಕ್ಕನು ಕೌಶಿಕನನ್ನು ಧಿಕ್ಕರಿಸುವುದಕ್ಕೆ ಕಾರಣ ಅವನು ಭವಿಯಾಗಿದ್ದುದು." ಎಂದು ನಾರಾಯಣರು ಬರೆದುದು ಸತ್ಯಕ್ಕೆ ದೂರ ಸಂಗತಿ. "ನನ್ನ ಮಟ್ಟಕ್ಕೆ ಸರಿಯಾದ ಗಂಡು ಸಿಗುವವರೆಗೂ ಲಗ್ನವಾಗುವುದಿಲ್ಲ" ಎಂಬುದು ಮಾಯಾದೇವಿಯಂಥವರು ತಳೆದ ಧೋರಣೆಯೇ ಹೊರತು ಮಹಾದೇವಿಯಲ್ಲ. ಹಾಗೆಯೇ ಶಿವಭಕ್ತರಾದ ತಾವು ಭವಿಗೆ ಮಗಳನ್ನು ಕೊಡಲಾರೆವು ಎಂಬುದು ಅಕಸ್ಮಾತ್ ಅಕ್ಕನ ತಾಯಿತಂದೆಗಳಲ್ಲಿ ಬರಬಹುದಾದ ವಿಚಾರವೇ ವಿನಾ ಆಕೆಯಲ್ಲಲ್ಲ. ನಾರಾಯಣರು ಅಕ್ಕನ ಜೀವನದ ನಿಜಮರ್ಮವನ್ನು ಅರಿಯಲು ಪೂರ್ಣವಾಗಿ ವಿಫಲರಾಗಿದ್ದಾರೆ. ಭವಿಯನ್ನೊಲ್ಲೆ ಎಂದು ಆಕೆ ಎಲ್ಲಿಯೂ ಹೇಳಿಲ್ಲ.

1. ಚನ್ನಮಲ್ಲಿಕಾರ್ಜುನನಲ್ಲದ ಗಂಡರು
   ಇನ್ನೆನಗಾಗದ ಮೋರೆ ನೋಡವ್ವ.
2. ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.
3. ಎರದ ಮುಳ್ಳಿನಂತೆ ಪರಗಂಡರೆನಗವ್ವ
   ಸೋಂಕಲಮ್ಮೆ ಸುಳಿಯಲಮ್ಮೆ, ನಂಬಿನಚ್ಚಿ ಮಾತಾಡಲಮ್ಮೆನವ್ವ
   ಚನ್ನಮಲ್ಲಿಕಾರ್ಜುನನಲ್ಲದ ಗಂಡನ ಉರದ ?
   ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ.
4. ಇಹಕ್ಕೊಬ್ಬ ಗಂಡ ಪರಕ್ಕೊಬ್ಬಗಂಡನೆ ?
   ಲೌಕಿಕಕ್ಕೊಬ್ಬ ಗಂಡ ಪರಮಾರ್ಥಕ್ಕೊಬ್ಬಗಂಡನೆ ?

ಈ ವಚನ ವಾಕ್ಯಗಳು ಏನನ್ನು ಹೇಳುತ್ತವೆ; ಆಕೆಗೆ ಭವಿ-ಭಕ್ತ-ರಾಜ-ಸಾಮಾನ್ಯ ಮನುಷ್ಯ ಇದೇನೂ ಲೆಕ್ಕಕ್ಕಿಲ್ಲ. 'ದೇವರನ್ನು ಮೆಚ್ಚಿದವಳು ತಾನು, ಅವನು ತನ್ನ ಗಂಡ; ಲೋಕದ ಪುರುಷರೆಲ್ಲ ಪರಪುರುಷರು.' ಈ ಭಾವ ವ್ಯಕ್ತವಾಗಿದೆ ಅತ್ಯಂತ ಸ್ಪಷ್ಟವಾಗಿ.

**4 ಆ.** ಭವಿಯನ್ನು ತೊರೆದದ್ದಕ್ಕಾಗಿ ಭಕ್ತವೃಂದ ಸಮರ್ಥಿಸಿತು ಮತ್ತು ಗೌರವಿಸಿತು ಎಂಬ ನಾರಾಯಣರ ನಿರೂಪಣೆಯೂ ಅಷ್ಟೇ ಹುರುಳಿಲ್ಲದ್ದು.

**5.** ಅವರ ಮುಂದಿನ ಸಂದೇಹ, ಅಕ್ಕನು ಒಂದು ವೇಳೆ ಗಂಡನು ಭಕ್ತನೇ ಆಗಿದ್ದು ಅವನನ್ನು ಧಿಕ್ಕರಿಸಿದ್ದರೆ ಆಗಲೂ ಭಕ್ತವೃಂದ ಗೌರವಿಸುತ್ತಿತ್ತೇ? ಎಂಬುದೂ ಅಷ್ಟೇ ಹುರುಳಿಲ್ಲದ್ದು. ಏಕೆಂದರೆ ಲಿಂಗವಂತ ಧರ್ಮದ ಬಹಳ ಮಹತ್ವದ ತತ್ತ್ವವೆಂದರೆ ಪೂರ್ವಾಶ್ರಯನಿರಸನ. ಒಬ್ಬ ವ್ಯಕ್ತಿ ಪಾರಮಾರ್ಥ ಜೀವನಕ್ಕೆ ಬಂದ ಬಳಿಕ ತನ್ನ ಪೂರ್ವಾಶ್ರಮದಲ್ಲಿ ನಡೆದ ಘಟನೆಯನ್ನು ತಾನು ನೆನಪಿಡಬಾರದು. ಬೇರೆಯವರೂ ಕೆದಕಿ ಕೇಳಬಾರದು. "ವ್ಯಕ್ತಿಯು ಪಾರಮಾರ್ಥ ಜೀವನಕ್ಕೆ ಬರುವುದಕ್ಕೂ ಮುಂಚಿನ ಜಾತಿ, ಮಾಡುತ್ತಿದ್ದ ವೃತ್ತಿ, ಜೀವನದಲ್ಲಿ ನಡೆದ ಸರಸ-ವಿರಸದ ಯಾವುದೇ

ವಿಷಯ ಕುರಿತು ಯಾರೂ ಕೇಳಬಾರದು, ತಾನೂ ನೆನಪಿಟ್ಟರೆ ಅದು ದೋಷ." ಈ ದೃಷ್ಟಿಕೋನ ಇತ್ತೆಂದೇ ಶರಣರ ಪೂರ್ವೇತಿಹಾಸದ ಅಂಶಗಳು ವಚನಗಳಲ್ಲಿ ಕಾಣ ಬರವು. ಅನೇಕ ಶರಣರ ಬದುಕಿನ ಪೂರ್ವಾರ್ಧದಲ್ಲಿ ನಡೆದ ಯಾವ ಘಟನೆಗಳನ್ನೂ ಯಾರೂ ಕೆದಕಿದ್ದು ಕಾಣಬರದು. ಅಕ್ಕನ ಪೂರ್ವದ ಘಟನೆಯನ್ನಾದರೂ ಅದೆಷ್ಟು ಗಂಭೀರವಾಗಿ, ಸೂಕ್ಷ್ಮವಾಗಿ ಕೌಶಿಕನ ಹೆಸರನ್ನು ಸಹ ಎತ್ತದೆ, "ತಪ್ಪನರಸಿ ಹೊರಟೆ ನೆಂಬುದು ಸತ್ಯವೇ?" ಎಂದು ಮುಗಿಸುವರು. ಅದನ್ನೂ ಕೇಳಿದ್ದು ಏಕೆಂದರೆ ಆಕೆಯ ನಿಷ್ಠೆ ಇರುವುದು ದೇವನನ್ನು ಕುರಿತು ಎಂದು ಸ್ಪಷ್ಟಪಡಿಸಲಿಕ್ಕೆ. ಗಂಡನು ಭಕ್ತನಿದ್ದು, ಬಿಟ್ಟು ಬಂದಿದ್ದರೆ ಭಕ್ತವೃಂದ ಗೌರವಿಸುತ್ತಿತ್ತೇ ಎಂದು ಕೇಳಿರುವ ನಾರಾಯಣರು ಬಹುಶಃ ಶರಣರನ್ನು ವಠಾರಗಳ ಜಗಲಿ ಮೇಲೆ ಕುಳಿತು ಹರಟೆ ಹೊಡೆಯುತ್ತ ಅವರಿ ವರ ಸುದ್ದಿ ಆಡಿಕೊಳ್ಳುವ ಹರಕು ಬಾಯಿ ಹೆಂಗಸರಂತೆ ಎಂದು ತಿಳಿದುಕೊಂಡಿರಬೇಕು. ಗೌತಮ ಬುದ್ಧನು ವಿವಾಹಿತಳಾದ ಹೆಂಡತಿಯನ್ನು ಬಿಟ್ಟು ವಿರಕ್ತನಾಗಿ ಉನ್ನತ ಸಾಧನೆ ಮಾಡಿ, ಕೀರ್ತಿಶಾಲಿಯಾಗಬಹುದಾದರೆ ಅಕ್ಕಮಹಾದೇವಿ ಏಕಾಗಬಾರದು ಎಂಬ ದೃಷ್ಟಿ ಕೋನದವರು ಶರಣರು. "ಸತ್ತರೂ ಗಂಡನ ಕೈಲಿ ಬಡಿಸಿಕೊಂಡು ಸತ್ತರೆ ಸ್ವರ್ಗ ಪ್ರಾಪ್ತಿ" ಎಂಬ ಮೂಢನಂಬಿಕೆಯ ಜನರಾಗಿದ್ದರೆ, ಗಂಡ ಬಿಟ್ಟವಳೆಂದು, ಗಂಡನನ್ನು ಬಿಟ್ಟವಳೆಂದು, ಗಂಡ ಸತ್ತವಳೆಂದು ಕೀಳಾಗಿ ಕಾಣುತ್ತಿದ್ದರೇನೊ! ಶರಣರು ಶುದ್ಧ ಪಾರ ಮಾರ್ಥಿಗಳು, ಭಕ್ತಿ-ಶರಣಾಗತಿ, ತ್ಯಾಗ-ಸಾಧನೆಗೆ ಬೆಲೆಕೊಟ್ಟವರು. ಅಕ್ಕನ ನಿಂತ ನಿಲುವು ಅವರಿಗೆ ಮುಖ್ಯವೇ ವಿನಾ ಉಳಿದ ಯಾವ ಸಂಗತಿಗಳೂ ಅಲ್ಲ. ಅದರಲ್ಲಿಯೂ ಭವಿಯಿರಲಿ ಭಕ್ತನಿರಲಿ ರಾಜನು ಒಡ್ಡಿದ ಆಮಿಷಗೆದ್ದು ಬಂದಳು ಎಂಬುದೇ ಅವರಿಗೆ ಗಣನೀಯ ಅಂಶ.

6. ಧರ್ಮವು ಉದಾತ್ತೀಕರಣದ ಸಾಧನ. ಶರಣನು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿ ಅರಿಷಡ್ವರ್ಗಗಳನ್ನು, ಹುಟ್ಟುಗುಣ(Insti-cts)ಗಳನ್ನು ಧರ್ಮದ ನೆರವಿನಿಂದ ಉದಾತ್ತೀಕರಿಸಿಕೊಳ್ಳುವನು. ಕಾಮವು ಲಿಂಗ ಪ್ರೇಮವಾಗಿ, ಕ್ರೋಧವು ತತ್ತ್ವನಿಷ್ಠೆಯಾಗಿ, ಲೋಭವು ಜ್ಞಾನ-ಪುಣ್ಯಾರ್ಜನೆಯಲ್ಲಿ ಆಸಕ್ತಿಯಾಗಿ, ಮೋಹವು ಸಮಷ್ಟಿಪ್ರೇಮವಾಗಿ, ಮದವು ಸ್ವಾಭಿಮಾನವಾಗಿ, ಮತ್ಸ ರವು ಪ್ರಾಮಾಣಿಕ ಪ್ರಯತ್ನಶೀಲತೆಯಾಗಿ ಉದಾತ್ತೀಕರಣಗೊಳ್ಳುವವು. ಇದು ಶರಣನ ಸಿದ್ಧಿಯಾದರೂ, ಅದನ್ನು ಭಾಷೆಯ ಮಾಧ್ಯಮದ ಮೂಲಕ ಅಭಿವ್ಯಕ್ತ ಗೊಳಿಸುವ ಸಾಮರ್ಥ್ಯ–ಕಲೆ ಎಲ್ಲರಿಗಿರದು. ಅಕ್ಕನಿಗೆ, ಉಮರ ಖಯ್ಯಾಮ್, ಷಣ್ಮುಖಸ್ವಾಮಿ, ಮೀರಾಬಾಯಿ ಇಂತಹ ಕೆಲವರಿಗೆ ಮಾತ್ರ ಅದ್ಭುತವಾಗಿ ಆ ಸಂವ ಹನ ಕಲೆ ಸಿದ್ಧಿಸಿದೆ.

ನಾರಾಯಣರ ಕ್ಷುಲ್ಲಕ ವಿಚಾರ ಸರಣಿ ಪರಾಕಾಷ್ಠೆಯನ್ನು ಮುಟ್ಟಿರುವುದು 7ನೇ ಸಂಶಯದಲ್ಲಿ (ಪುಟ 163). [ಇದೊಂದು ಮಾತಿಗಾದರೂ ಈ ಪುಸ್ತಕ ಬಸವ ಪುರಸ್ಕಾರಕ್ಕೆ ಅನರ್ಹವಾಗಬೇಕು.] ಅಕ್ಕನ ವಚನ (306) ಇಂಥ ವಿಚಾರಧಾರೆಯ ವರಿಗೆ ಚೆನ್ನಾಗಿ ಅನ್ವಯವಾಗುತ್ತದೆ.



ಗಗನದ ಗುಂಪ ಚಂದ್ರಮ ಬಲ್ಲುದಲ್ಲದೇ.
ಕೞಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ.
ಕೞಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ ?
ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲುವ ನೀವೇ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ ?

ದಾರ್ಶನಿಕರು, ಶರಣರೂ ಆದವರ ಆಧ್ಯಾತ್ಮಿಕ ಸ್ಥಿತಿ. ಮನದ ಓಘವನ್ನು ಅರಿಯದೇ ಎಲ್ಲವನ್ನೂ ಕಾಮಸಂಬಂಧವಾಗಿ ಹುಡುಕುವ, ವಿಶ್ಲೇಷಿಸುವ ಜನರನ್ನು ಏನೆಂದು ಕರೆ ಯಬೇಕೋ ಅರ್ಥವಾಗದು.

ನಿಜ ಜೀವನದಲ್ಲಿ ಲೈಂಗಿಕ ಸುಖ ಅನುಭವಿಸಿದವರಲ್ಲಿ ಶಿವನ ಹಂಬಲ ಆಳವಾಗಿ ವ್ಯಕ್ತವಾಗದಂತೆ! ಶಿವನನ್ನು ಸೇರಲು ಅವರು ಹಾತೊರೆಯರಂತೆ! ಅಕ್ಕನು ಒಂದು ವೇಳೆ ಲೌಕಿಕ ಆಕಾಂಕ್ಷೆ, ಕಾಮಾಭಿಲಾಷೆ ಉಳ್ಳವಳಾಗಿದ್ದರೆ ಆಕೆಗೆ ಮದುವೆಯಾಗ ಬೇಡೆಂದು ತಡೆಹಿಡಿದವರಾರು ? ಕಾಮವೇ ಅಧಿಕವಾದಾಗ ಅದು ಭವಿಯನ್ನೂ ನೋಡದು, ಭಕ್ತನನ್ನೂ ನೋಡದು, ಜಾತಿಯನ್ನೂ ನೋಡದು, ನೀತಿಯನ್ನೂ ನೋಡದು. ಆಕೆ ಕೌಶಿಕನನ್ನು ಮದುವೆಯಾಗಿದ್ದರೆ ತಂದೆ-ತಾಯಿಗಳಿಗೂ ಸಮಸ್ಯೆ ಇರುತ್ತಿರಲಿಲ್ಲ. ಕೋಟಿಕೋಟಿ ಜನರ ಸಮುದ್ರದಲ್ಲಿ ತಾನೂ ಒಂದು ಹನಿಯಾಗಿ, ಅನಾಮಿಕಳಾಗಿರುತ್ತಿದ್ದಳು.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ– ಈ ಸ್ಥಲಗಳನ್ನು ಶರಣನು ಅಥವಾ ಶರಣೆ ಏರಲೇಬೇಕು ಎಂಬುದೇ ಷಟಸ್ಥಲದ ಉದ್ದೇಶ. ಅಕ್ಕ ಮಹಾದೇವಿ ಷಟಸ್ಥಲ ಎಂಬ ಆರು ಕಾಲಿನ ಏಣಿಯನ್ನು ಪೂರ್ತಿ ಹತ್ತಿ ಕಡೆಯ ನೆಲೆ ಯಲ್ಲಿದ್ದರೆ ಅದು ಆ ತಾಯಿಯ ಹಿರಿಮೆ. ಉಳಿದ ಶರಣೆಯರು ಶರಣ ಸತಿಯ ಹಂಬಲವನ್ನು ಆಳವಡಿಸಿಕೊಳ್ಳಲಾರರಾದರೆ ಅದವರ ಕೊರತೆ. ಇದನ್ನರಿಯದೆ, ಅಕ್ಕ ಮಹಾದೇವಿ ಲೈಂಗಿಕ ಸುಖದಲ್ಲಿ ತೃಪ್ತಳಲ್ಲ, ಉಳಿದ ಶರಣೆಯರು ತೃಪ್ತರಿದ್ದರು; ಅದಕ್ಕಾಗಿಯೇ ಆಕೆ ದೇವರನ್ನು ಕೂಡಲು ಹಂಬಲ ವ್ಯಕ್ತಪಡಿಸಿದ್ದಾಳೆ ಎಂಬುದು ಎಷ್ಟು ಅಪ್ರಬುದ್ಧ ಮಟ್ಟದ ವಿಶ್ಲೇಷಣೆ, ಆಲೋಚಿಸಿರಿ.

ಅಧ್ಯಾತ್ಮಿಕ ಜೀವನದಲ್ಲಿ ವಿವಾಹಿತರು-ಅವಿವಾಹಿತರು, ಲೈಂಗಿಕ ಸುಖಿ-ಅಸುಖಿ; ಮುಂತಾದ್ದು ಅಗಣ್ಯ. ಏಕೆಂದರೆ **ಭಕ್ತಿಯು ಭಾವನಾತ್ಮಕ ಜಗತ್ತಿನ ಕ್ರಿಯೆ.** ಶಿವನ ಹಂಬಲ (Aspiration for God) ಇದು ಪರಿಶುದ್ಧ ಮನಸ್ಸಿನ ಒಂದು ಪವಿತ್ರ ಚಟುವಟಿಕೆ. ಲೌಕಿಕರ ಕಣ್ಣಿಗೆ ಶರಣರ ಚರಿತ್ರೆ ಮರುಳಾಗಿ ತೋರುವುದು

ಎಂದು ಅಕ್ಕನೇ ಹೇಳಿದಂತೆ, ಉಳಿದ ಜನರಿಗೆ ಭಕ್ತಿಯ ತನ್ಮಯತೆಯಲ್ಲಿರುವವರ ಮನಸ್ಸಿನ ಓಘ ಅರ್ಥವಾಗದು. ಇವರಿಗೆ ಗೊತ್ತಿರುವುದು ದೇಹ, ದೇಹ ಸಂಬಂಧಿಯಾದ ಕಾಮ ಇವೆರಡೇ ; ಈ ಪ್ರಕ್ರಿಯೆ ಚಟುವಟಿಕೆಗೆ ಹೊರತಾಗಿ ಇನ್ನೊಂದು ಆಲೋಚನೆ ಸಹ ಮಾಡಲಾರರು.

ಆಂಗ್ಲ ಮತ್ತು ಫ್ರೆಂಚ್ ಸಾಹಿತ್ಯದಲ್ಲಿ ದಾರ್ಶನಿಕ ಸಾಹಿತ್ಯ ವಿಪುಲವಾಗಿದೆ ಮತ್ತು ಸಾಕಷ್ಟು ಅಧ್ಯಯನ ಮಾಡಲ್ಪಟ್ಟಿದೆ. ಕರ್ನಾಟಕದ ವಚನ ಸಾಹಿತ್ಯ ದಾರ್ಶನಿಕ ಸಾಹಿತ್ಯ. ಇದು ವಿಪುಲವಾಗಿದ್ದು ಅದ್ಭುತವಾಗಿದೆ. ಆದರೆ ತಾರ್ಕಿಕವಾಗಿ, ಶಾಸ್ತ್ರೀಯವಾಗಿ ವಿಶ್ಲೇಷಿಸಲ್ಪಡದೆ ಇರುವುದು ಮಹಾನ್ ಕೊರತೆ. ಆದ್ದರಿಂದ ಕನ್ನಡ ಸಾಹಿತಿಗಳು, ಸಂಶೋಧಕರು ಕುಚೋದ್ಯದ ಬರಹಗಳಲ್ಲಿ ತೃಪ್ತಿಪಟ್ಟುಕೊಳ್ಳುವುದರ ಬದಲು, ಶ್ರೀ ಅರವಿಂದರ ಇಂಟಿಗ್ರಲ್ ಯೋಗ, ಮಿಸ್. ಅಂಡರ್ ಹಿಲ್‌ಳ ಮಿಸ್ಟಿಸಿಸಮ್ ಮುಂತಾದ ಪುಸ್ತಕಗಳನ್ನು ಓದಲಿ. ಆಗ ಅವರಿಗೆ ಉನ್ನತ ಮಟ್ಟದ ದಾರ್ಶನಿಕರಾದ ಶರಣರ ಅನುಭಾವ ಸಂಪತ್ ಭಂಡಾರವನ್ನು ಬಿಚ್ಚುವ ಕೀಲಿ ಕೈ ದೊರೆಯುತ್ತೆ. ಹೀಗೆ ವಿಧಾಯಕವಾಗಿ ಮಾಡದೆ ಲೂಟಿಗಾರರು ಭಂಡಾರವನ್ನು ಜಜ್ಜುವಂತೆ ಕೀಳು ಮಟ್ಟದ ಪ್ರಶ್ನೆಗಳಿಂದ, ಸಂಶಯಗಳಿಂದ ಜಜ್ಜಿದರೆ ಪ್ರಯೋಜನವಾಗದು, ಒಳಗಿನ ಆಭರಣಗಳೂ ನಿಜರೂಪದಲ್ಲಿ ಸಿಗವು. ದಯವಿಟ್ಟು ನನ್ನ ಕಠೋರವಾದ ಮಾತುಗಳಿಗೆ ಕ್ಷಮಿಸಿ; ಅಕ್ಕಮಹಾದೇವಿಯನ್ನು ಲೈಂಗಿಕ ಅತೃಪ್ತಳೆಂದು, ಅಕ್ಕನಾಗಲಾಂಬಿಕೆಯನ್ನು ಅನೀತಿವಂತಳೆಂದು ಕರೆದುದಕ್ಕಿಂತಲೂ ನನ್ನ ಮಾತು ಕಠೋರವಾಗಿಲ್ಲ.

### ಅನುಭವ ಮಂಟಪ ಮತ್ತು ವಚನ ಸಂಗ್ರಹ

1. ...ಮುಂತಾದ ಪುರಾಣ, ಕಾವ್ಯಗಳಲ್ಲಿ ಅನುಭವ ಮಂಟಪದ ವರ್ಣನೆ ಬರುತ್ತದೆ. ಇಷ್ಟರಿಂದ ಅನುಭವ ಮಂಟಪವೆಂಬ **ಸಾಂಪ್ರದಾಯಿಕ** ಸಂಸ್ಥೆಯಿತ್ತೆಂದೂ, ಅಲ್ಲಿ ಶಾಂತರಸನು ವಚನಗಳನ್ನು ಬರೆದಿಟ್ಟುಕೊಳ್ಳುತ್ತಿದ್ದನೆಂದೂ, ಆ ವಚನಗಳನ್ನು 'ವಚನ ಭಂಡಾರ' ದಲ್ಲಿ ಇರಿಸುತ್ತಿದ್ದರೆಂದೂ ವಾದಿಸುವುದು ಕೇವಲ ಊಹೆ ಎಂದು **ಬರೆಯುವಲ್ಲಿ** ರೆ॥ ಉತ್ತಂಗಿ ಚನ್ನಪ್ಪನವರ ಹೇಳಿಕೆ ಕೊಟ್ಟಿದ್ದಾರೆ, ಮತ್ತು ಅದನ್ನು ಸಂಶಯಿಸುತ್ತಾರೆ, ಡಾ॥ ಪಿ.ವಿ. ನಾರಾಯಣರು. ರೆ॥ ಉತ್ತಂಗಿ ಚನ್ನಪ್ಪನವರು, ಅನುಭವ ಮಂಟಪದ ಐತಿಹಾಸಿಕತೆ, ಎಂಬ ಪುಸ್ತಕದಲ್ಲೂ, Anubhava Mantapa, the heart of Ligayat Religion ಎಂಬ ಆಂಗ್ಲ ಕೃತಿಯಲ್ಲೂ ಬಹಳ ಚೆನ್ನಾಗಿ ಐತಿಹಾಸಿಕತೆಯನ್ನು ಸಾದರಪಡಿಸಿದ್ದಾರೆ.
2. ಶ್ರೀ ಚಂದ್ರಶೇಖರ್ ಶಾಸ್ತ್ರಿ ಹಿರೇಮಠರ ಉಲ್ಲೇಖ ಮಾಡಿ, ಪಿ. ವಿ. ನಾರಾಯಣರು ಹೀಗೆ ಬರೆಯುತ್ತಾರೆ. "ಚರ್ಚೆಗಳೇನಿದ್ದರೂ ಪ್ರಾಸಂಗಿಕವು, ಅನೌಪಚಾರಿಕವೂ ಸಹಜವೂ ಆಗಿ ನಡೆಯುತ್ತಿದ್ದವೇ ಹೊರತು, ಒಬ್ಬ ಮಹನೀಯರು ಹೇಳುವಂತೆ ಆಧುನಿಕ ಪಾರ್ಲಿಮೆಂಟಿನ ಚರ್ಚೆಯ ರೀತಿಯಲ್ಲಲ್ಲ." (ಪುಟ 86)



3. ಈಚಿನ ಕೆಲವು ಕಲ್ಪನೆಗಳು ಹೇಳುವಂತೆ, "ಅನುಭವ ಮಂಟಪ"ದಲ್ಲಿ ಆಧ್ಯಾತ್ಮಿಕ ಚರ್ಚೆಯ ಫಲವೇ ವಚನಗಳು. ಅವನ್ನು ಯಾರೋ ಬರೆದಿಟ್ಟುಕೊಳ್ಳುತ್ತಿದ್ದರು- ಎಂಬುದು ಪ್ರಾಯಶಃ ಕಟ್ಟುಕತೆಗಳೇ. (ಪುಟ 90)
4. ಬಹಳ ವ್ಯವಸ್ಥಿತವಾಗಿ ಅಧ್ಯಕ್ಷತೆ, ಪೀಠ ಇತ್ಯಾದಿ ಸಾಂಸ್ಥಿಕ ಸ್ವರೂಪದ ಅನುಭವ ಮಂಟಪದ ಕಲ್ಪನೆ ಈಚಿನದೆಂದು ತೋರುತ್ತದೆ. (ಪುಟ 172)

ಈ ಮೇಲೆ ಕೊಟ್ಟಿರುವ ಡಾ॥ ಪಿ. ವಿ. ನಾರಾಯಣರ ನಾಲ್ಕು ಹೇಳಿಕೆಗಳನ್ನು ಈಗ ವಿಮರ್ಶಿಸೋಣ.

1. " ಅನುಭವ ಮಂಟಪ ಎಂಬ ಸಾಂಪ್ರದಾಯಿಕ ಸಂಸ್ಥೆ ಇತ್ತೆಂಬುದು ಊಹೆ" ಎಂದು ನಾರಾಯಣರು ಅಭಿಪ್ರಾಯಪಡುತ್ತಾರೆ.

ಅನುಭವ ಮಂಟಪ ಖಂಡಿತಾ ಇದ್ದಿತು. ಅದೊಂದು ವಿಶಿಷ್ಟ ಭವನವೇ, ಕಟ್ಟಡವೇ ಎಂಬುದು ಅಪ್ರಸ್ತುತ. ಒಂದು ವನದಲ್ಲಿಯೋ, ಗಿಡದಡಿಯಲ್ಲಿಯೋ ಸೇರಿ ಶರಣರು ಅನುಭವ ಗೋಷ್ಠಿ ನಡೆಸಿದರೂ, ಅದು ಸಂಸ್ಥೆಯೆ! ವಾರಕ್ಕೊಮ್ಮೆ ಸೇರಿ ನಾವೆಲ್ಲರೂ ಪ್ರಾರ್ಥನೆ, ಚಿಂತನೆ ಮಾಡೋಣ ಎಂದು ಅನೇಕ ಶರಣ ಬಂಧುಗಳು ರಾಷ್ಟ್ರೀಯ ಬಸವ ದಳ ಮಾಡಿಕೊಂಡು ಈಗ ಸೇರುತ್ತಿದ್ದಾರೆ. ಕೆಲವು ಕಡೆ ಸ್ವಂತ ಕಟ್ಟಡವಿಲ್ಲದೆ ಲಭ್ಯವಿರುವ ಜಾಗಗಳಲ್ಲಿ ಸೇರಿ, ಕಾರ್ಯಕ್ರಮ ಮಾಡುತ್ತಿದ್ದಾರೆ. ರಾಷ್ಟ್ರೀಯ ಬಸವ ದಳ ಇರುವುದು, ಪ್ರಾರ್ಥನೆ ಚಿಂತನೆ ಮಾಡುತ್ತಿರುವುದು ಸತ್ಯವೇ ವಿನಾ ಊಹೆಯಲ್ಲ, ಅಡಿಗೆ, ದಾಸೋಹ ಒಂದು ಕಡೆ ನಡೆದಂತೆ, ಜ್ಞಾನ ದಾಸೋಹವೂ ನಡೆಯುತ್ತಿದ್ದಿತು. ಈ ಜ್ಞಾನ ದಾಸೋಹ ನಡೆಯುತ್ತಿದ್ದ ತಾಣವೇ ಅನುಭವ ಮಂಟಪ.

ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ ಮುವತ್ತಾರು ವರ್ಷ
ಅಯ್ಯಾ, ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರ್ಷ
ಅಯ್ಯಾ, ಹಿಂದಿನಂತೆ ಅನುಭವ ಹಿಂದಿನಂತೆ ಭಕ್ತಿಯಿಲ್ಲ–
ಮೂರು ಮಾಸದೊಳಗಾಗಿ
ಇಲ್ಲಿ ಆಡಲುಭಯವಿಲ್ಲ ಕೇಳಯ್ಯಾ,
ಕೂಡಲ ಸಂಗಮದೇವಯ್ಯಾ (ಬ.ಷ.ಹೆ.ವ. 1166)

ಗುರು ಬಸವಣ್ಣನವರು ಇದ್ದ ಅವಧಿಯಲ್ಲಿ ಕಲ್ಯಾಣವು ಭಕ್ತಿಗೆ ಬೀಡಾಯಿತು. ಈ ಅವಧಿ 36 ವರ್ಷ. ಧರ್ಮಪ್ರಚಾರ, ಜನಜಾಗೃತಿಯ ಕೆಲಸ ಆರಂಭವಾಗಿ 9ವರ್ಷಕ್ಕೆ ಅನುಭವ ಮಂಟಪಕ್ಕೆ ಸಾಂಸ್ಥಿಕ ಸ್ವರೂಪ ಬಂದಿತು. ಅನುಭವ ಮಂಟಪದ ಐತಿಹಾಸಿಕತೆಗೆ ಈ ವಚನವು ಮುಖ್ಯ ದಾಖಲೆ.

ಆದಿಯಾಧಾರವಿಲ್ಲದಂದು ಎಂಬ ವಚನದಲ್ಲಿ, 9, ನೀಲಾಂಬಿಕೆ ಹೀಗೆ ಹೇಳುತ್ತಾಳೆ.

ಮರ್ತ್ಯಲೋಕವನೆ ಮಹಾಪ್ರಮಥರ ಬಿಡಾರವ
ಮಾಡಿದಾತ ನಮ್ಮ ಬಸವಯ್ಯನು......
ಬಯಲನೊಂದು ರೂಪ ಮಾಡಿ ಬಣ್ಣಕ್ಕೆ ತಂದ
ಆ ಬಣ್ಣವ ನಿಜದಲ್ಲಿ ನಿಲಿಸಿದಾತ ನಮ್ಮ ಬಸವಯ್ಯನು
ಚನ್ನಬಸವನೆಂಬ ಪ್ರಸಾದಿಯ ಪಡೆದು,
ಅನುಭವ ಮಂಟಪವನು ಮಾಡಿ,
ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು.
ಅರಿವ ಸಂಪಾದಿಸಿ ಆಚಾರವನಂಗಗೊಳಿಸಿ
ಏಳುನೂರೆಪ್ಪತ್ತು ಅಮರ ಗಣಂಗಳ
ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು.

ಈ ವಚನದಲ್ಲಿ ಸಮಗ್ರವಾಗಿ ಅನುಭವ ಮಂಟಪದ ಸಾಧನೆ ಇದೆ.

(ಮುಂದುವರಿಯುವುದು)

★ ★

## ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳ

**ಅಭಿನಂದನ ಕಾರ್ಯಕ್ರಮ.**

ಅಪೂರ್ವ ವಾಗ್ಮಿ, ಕ್ರಾಂತಿಕಾರಿ ಧರ್ಮಪ್ರಚಾರಕ, ಪ್ರವಚನ ಪಿತಾಮಹ.

**ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿ**

ಅವರಿಗೆ, 60 ವರ್ಷಗಳು ತುಂಬುತ್ತಲಿರುವ ನಿಮಿತ್ತ

ಅಭಿನಂದನ ಸಮಾರಂಭವೊಂದನ್ನು ಏರ್ಪಡಿಸಲಾಗಿದೆ.

ದಿನಾಂಕ. 27-10-1991, ಭಾನುವಾರ

ಸ್ಥಳ : **ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.**

ಸಮಯ : ಬೆಳಿಗ್ಗೆ, 9 ರಿಂದ 1

ಕಾರ್ಯಕ್ರಮದ ವಿವರಗಳನ್ನೊಳಗೊಂಡ ಆಹ್ವಾನ ಪತ್ರಿಕೆಯನ್ನು ಪ್ರತ್ಯೇಕವಾಗಿ ಮುದ್ರಿಸಲಾಗುವುದು.



## ಕ[illegible]ೋಡಿನ ಬಸವ ಗಂಗೋತ್ರಿಯಲ್ಲಿ
## [illegible]ನ ತತ್ತ್ವ ತರಬೇತಿ ಶಿಬಿರ

ಪ್ರತಿವರ್ಷದಂತೆ ಬೆಂಗಳೂರು ದಕ್ಷಿಣ ತಾಲ್ಲೋಕು, ಕೆಂಗೇರಿ ಆಚೆಗಿರುವ ಕುಂಬಳಗೋಡಿನ ಬಳಿಯ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರವು ನಡೆಯುತ್ತಲಿದ್ದು, ದಿ. 13-10-1991 ರಿಂದ 26-10-1991 ರ ವರೆಗೆ ನಡೆಯುಲಿದೆ. ಭಕ್ತಿ ಪಕ್ಷ ಸಮ್ಮೇಳನ ಮತ್ತು ಬಸವ ಧರ್ಮ ಸಂಸತ್ ಸದಸ್ಯರ ಸಭೆಯು ದಿ. 25, 26 ರಂದು ನಡೆಯುತ್ತವೆ. 26 ರಂದು ಶಿಬಿರದ ಸಮಾರೋಪವು ಇರುತ್ತದೆ. 27-10-1991 ರಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಅಭಿನಂದನ ಕಾರ್ಯಕ್ರಮವು, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

### ಶುಲ್ಕ ವಿವರ

1. ದಿ. 13-10-1991 ರಿಂದ 27-10-1991 ರ ವರೆಗಿನ ಊಟ ವಸತಿಯ ಶುಲ್ಕ 150-00 ರೂ.
2. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿಯಿದ್ದು, 100 ರೂ ಇದೆ.
3. ಭೃತ್ಯಾಚಾರ ಗಣದ ಸದಸ್ಯರಾಗಿ ಮುಂದೆ ಕಾರ್ಯಕರ್ತರಾಗುವವರಿಗೆ ಉಚಿತ ಪ್ರವೇಶವಿದೆ.
4. ಆರ್ಥಿಕ ಅನಾನುಕೂಲತೆಯಿದ್ದು, ಬಸವ ತತ್ತ್ವವನ್ನು ತಿಳಿದುಕೊಳ್ಳುವ ಆಸಕ್ತಿ ಇರುವವರಿಗೆ ಉಚಿತ ಪ್ರವೇಶವಿದೆ. ಅವರು ಮೊದಲೇ ಪತ್ರ ಬರೆದು ಅನುಮತಿ ಪಡೆದುಕೊಳ್ಳಬೇಕು.
5. ಭಕ್ತಿ ಪಕ್ಷ ಸಮ್ಮೇಳನಕ್ಕೆ ಮಾತ್ರ ಬರುವವರಿಗೆ ಊಟ-ವಸತಿಗಳ ಶುಲ್ಕ 40-00. ರೂಗಳು.

**ವಿಶೇಷ ಸೂಚನೆ**- ೧) ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ ಅಭಿನಂದನ ಕಾರ್ಯಕ್ರಮಕ್ಕೆ ಸ್ವಯಂ ಪ್ರೇರಣೆಯಿಂದ ಕಾಣಿಕೆಗಳನ್ನು ಕಳಿಸಬಹುದು. ೨) ತಮ್ಮ ತಮ್ಮ ಕೈಲಾದಷ್ಟು ಕಾಣಿಕೆಯನ್ನು ಸಂಗ್ರಹಿಸಿಕೊಡಬೇಕೆನ್ನುವ ಸದ್ಭಕ್ತರು ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಪತ್ರ ಬರೆದು, ರಸೀತಿ ಪುಸ್ತಕ ಮತ್ತು ವಿಶೇಷ ಮಾಹಿತಿ ಪತ್ರ ತರಿಸಿಕೊಳ್ಳಬಹುದು.

**ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ,** ಅಭಿನಂದನಾ ಸಮಿತಿ,
ಬಸವ ಮಂಟಪ, 2035, 2ನೇ ಬ್ಲಾಕ್, ಕಾರ್ಡ್ ರಸ್ತೆ, ರಾಜಾಜಿನಗರ,ಬೆಂಗಳೂರು-560010

---

**ಶರಣ ಬಂಧುಗಳೇ,**

ಪೂಜ್ಯ ಶ್ರೀ ಸದ್ಗುರುಗಳ ಪ್ರವಚನ ಆಡಿಯೋ, ವಿಡಿಯೋ, ಕೆಸೆಟ್ಟು ರೆಕಾರ್ಡಿಂಗ್ ಮುಗಿದಿದ್ದು, ಈಗ ಎಡಿಟಿಂಗ್ ಹಂತದಲ್ಲಿದೆ. ಆಡಿಯೋ ಕೆಸೆಟ್ಟಿಗೆ 1500 ರೂದಂತೆ, ವೀಡಿಯೋ ಕೆಸೆಟ್ಟಿಗೆ 1000-00 ದಂತೆ ಹಣ ಕಳಿಸಲು ಸಮಯಾವಕಾಶ ವಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಲು ಇಚ್ಛಿಸುತ್ತೇವೆ. —ಮಾತಾಜಿ

